ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 20 ಗುರುವಾರ 2023

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 5 | ಪುಟಗಳು: 12

₹4

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಾನೂ ತಾತನಂತೆ ಜನಸೇವೆ ಮಾಡಬೇಕು; ಸದಾ ಜನರೊಂದಿಗೆ ಇರಬೇಕು ಎಂಬ ಆಸೆ ಇದೆ

ಸಿದ್ದರಾಮಯ್ಯರ ಮೊಮ್ಮಗ (ದಿವಂಗತ ರಾಕೇಶ್ ಪುತ್ರ) ಧವನ್ ರಾಕೇಶ್ ಆಸಕ್ತಿದಾಯಕ ಪ್ರತಿಕ್ರಿಯೆ



ಮೈಸೂರು, ಏ.19(ಎಂಟಿವೈ)–ತಮ್ಮ ತಾತನಂತೆ ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಜನಸೇವೆ ಮಾಡಬೇಕೆಂಬ ಉತ್ಸಾಹ ತನಗಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೊಮ್ಮಗ (ರಾಕೇಶ್ ಪುತ್ರ) ಧವನ್ ರಾಕೇಶ್ ತಿಳಿಸಿದ್ದಾರೆ.

ಹದಿನೇಳು ವರ್ಷದ ಬಾಲಕ ಧವನ್ ತನ್ನ ತಾತ ಸಿದ್ದರಾಮಯ್ಯನವರಂತೆಯೇ ಜನಪ್ರಿಯತೆ ಗಳಿಸಬೇಕು ಎಂಬ ಉತ್ಸಾಹ ಹೊಂದಿದ್ದು, ಇದೇ ಮೊದಲ ಬಾರಿಗೆ ಬುಧವಾರ ತಾತನ ಜೊತೆ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದಾನೆ. ಸಿದ್ದರಾಮಯ್ಯ ನಾಮಪತ್ರ ಸಲ್ಲಿಸುವ ಪ್ರಕ್ರಿಯೆಗಳ ಬಗ್ಗೆ ಕುತೂಹಲದಿಂದ ವೀಕ್ಷಿಸಿದ್ದಾನೆ. ತಾತ ನಡೆಸಿದ ಸಾರ್ವಜನಿಕ ಸಭೆಯಲ್ಲೂ ವೇದಿಕೆ ಮೇಲೆ ಆಸೀನರಾಗಿ ಕಾರ್ಯಕರ್ತರು ತಾತನಿಗೆ ತೋರಿಸಿದ ಪ್ರೀತಿಯನ್ನು ನೋಡಿ ಆನಂದಿಸಿದ್ದಾನೆ. ತಾತನ ಹುಟ್ಟೂರು ಸಿದ್ದರಾಮನಹುಂಡಿಗೆ ಪ್ರಪ್ರಥಮವಾಗಿ ಭೇಟಿ ನೀಡಿದ ಈತ, ಅಲ್ಲಿನ ಜನರ ಪ್ರೀತಿ–ವಿಶ್ವಾಸವನ್ನು ಕಣ್ಣಾರೆ ಕಂಡಿದ್ದಾನೆ.

ಕಿಂಚಿತ್ತೂ ಅಳುಕಿಲ್ಲದೆ ಸರಾಗವಾಗಿ ಮಾಧ್ಯಮದೊಂದಿಗೆ ಮಾತನಾಡಿರುವ ಧವನ್, ತಾತನಿಗೆ ಇಲ್ಲಿನ ಜನರು ತೋರಿಸುತ್ತಿರುವ ಪ್ರೀತಿ ನನಗೆ ಬಹಳ ಸಂತೋಷವನ್ನುಂಟು ಮಾಡಿದೆ. ಈ ಜನರಿಗೆ ನಾನೂ ಕೂಡ ಪ್ರೀತಿ ತೋರಿಸಬೇಕು. ತಾತನಂತೆ ಅವರ ಸೇವೆ ಮಾಡಬೇಕು ಎಂಬ ಉತ್ಸಾಹ ನನಗೂ ಬಂದಿದೆ. ನನಗೆ ನನ್ನ ತಾತನೇ ರೋಲ್ ಮಾಡೆಲ್. ಅವರು ವಿಧಾನಸಭೆಯಲ್ಲಿ ಮಾತನಾಡುವುದು ಹಾಗೂ ಸಾರ್ವಜನಿಕ ಸಭೆಗಳಲ್ಲಿ ಮಾತನಾಡುವುದನ್ನು ಟಿವಿ ಮತ್ತು ಯೂ–ಟ್ಯೂಬ್‌ಗಳಲ್ಲಿ ನೋಡಿ ಪುಳಕಿತನಾಗಿದ್ದೇನೆ. ಅವರೊಂದಿಗೆ ಪ್ರವಾಸ ಮಾಡಿ ಅವರ ರಾಜಕೀಯ ಪ್ರಕ್ರಿಯೆಗಳನ್ನು ನೋಡಬೇಕು ಎಂಬ ಕುತೂಹಲ ನನಗಿತ್ತು. ಹೀಗಾಗಿ ಇಂದು ಅವರೊಂದಿಗೆ ಬರುತ್ತೇನೆ ಎಂದು ಹೇಳಿದೆ. ಬಾ ಎಂದು ತಾತ ನನ್ನನ್ನು ಕರೆದಿರಲಿಲ್ಲ. ನಾನೇ ಸ್ವಯಂ ಸ್ಫೂರ್ತಿಯಿಂದ ಬಂದಿದ್ದೇನೆ ಎಂದು ಧವನ್ ಹೇಳಿದರು.

ನನ್ನ ರಾಜಕೀಯ ಕನಸಿಗೆ ಮನೆಯಲ್ಲಿ ಎಲ್ಲರೂ ಪ್ರೋತ್ಸಾಹ ಕೊಡುತ್ತಿದ್ದಾರೆ. ತಾತನೊಂದಿಗೆ ಹೋಗಬೇಕು ಎಂದು ನಾನು ಅಜ್ಜಿಗೆ ಹೇಳಿದಾಗ ಅವರು ಬಹಳ ಸಂತೋಷದಿಂದ ಅವರ (ತಾತ) ಜೊತೆ ಹೋಗು, ಏನೆಲ್ಲಾ ನಡೆಯುತ್ತದೆ ಎಂಬುದನ್ನು ನೋಡು ಎಂದು ಬೆನ್ನು ತಟ್ಟಿ ಪ್ರೋತ್ಸಾಹಿಸಿದರು. ಆನಂತರವೇ ತಾತನ ಬಳಿ ನನ್ನ ಇಚ್ಛೆಯನ್ನು ತಿಳಿಸಿ ಅವರೊಂದಿಗೆ ಬಂದಿದ್ದೇನೆ ಎಂದರು.

ನಮ್ಮ ಚಿಕ್ಕಪ್ಪ ಡಾ. ಯತೀಂದ್ರ ಅವರ ಪ್ರೋತ್ಸಾಹವೂ ಕೂಡ ನನಗೆ ಕಡಿಮೆಯೇನಿಲ್ಲ. ರಾಜಕೀಯಕ್ಕೆ ಬರಬೇಕಾದರೆ ಕಾನೂನು ಪದವಿ ಪಡೆಯಬೇಕು ಎಂದು ಸಲಹೆ ನೀಡಿದವರೇ ಅವರು. ಕಾನೂನು ಗೊತ್ತಿದ್ದರೆ ರಾಜಕಾರಣ ಸರಾಗವಾಗಿ ನಡೆಯುತ್ತದೆ. ಜನರಿಗೆ ಸೇವೆ ಮಾಡಲೂ ಕೂಡ ಅನುಕೂಲವಾಗುತ್ತದೆ ಎಂದು ಚಿಕ್ಕಪ್ಪ ಯತೀಂದ್ರ ತಿಳಿಸಿದ್ದಾರೆ ಎಂದರು.

ತಾತ ನನಗೆ ಬಹಳಷ್ಟು ವಿಚಾರಗಳನ್ನು ಆಗಾಗ್ಗೆ ತಿಳಿಸುತ್ತಿರುತ್ತಾರೆ. ನಮ್ಮ ಸಂವಿಧಾನ, ಡಾ. ಬಾಬಾ ಸಾಹೇಬ್ ಅಂಬೇಡ್ಕರ್, ಸಾಮಾಜಿಕ ನ್ಯಾಯ ಮುಂತಾದವುಗಳ ಬಗ್ಗೆ ನನ್ನೊಂದಿಗೆ ಮಾತನಾಡುವ ಮೂಲಕ ತಿಳುವಳಿಕೆ ಮೂಡಿಸುತ್ತಿದ್ದಾರೆ. ನಾನು ಅಂಬೇಡ್ಕರ್ ಅವರ ಬಗ್ಗೆ ಪುಸ್ತಕಗಳನ್ನು ಓದುತ್ತಿದ್ದೇನೆ. ನಮ್ಮ ಸಂವಿಧಾನ ಸಂಬಂಧಿತ ಪುಸ್ತಕಗಳನ್ನೂ ಓದುತ್ತಿದ್ದೇನೆ ಎಂದು ತಿಳಿಸಿದ ಧವನ್, ತಾತ ಮುಖ್ಯಮಂತ್ರಿಯಾಗಿದ್ದರೂ ಕೂಡ ಈವರೆವಿಗೂ ನಾನು ವಿಧಾನಸೌಧಕ್ಕೆ ಹೋಗಿದ್ದಿಲ್ಲ ಎಂದು ಹೇಳಿದ್ದಲ್ಲದೇ, ಮೊದಲು ಶಿಕ್ಷಣವನ್ನು ಮುಗಿಸು. ಕಾನೂನು ಪದವಿ ಪಡೆದ ನಂತರ ರಾಜಕೀಯ ಮಾಡಬಹುದು ಎಂದು ತಾತ ಕೂಡ ನನಗೆ ಹೇಳುತ್ತಿರುತ್ತಾರೆ. ಇಂದು ಅವರೊಂದಿಗೆ ನಾನು ಬಂದಾಗ ಜನರು ಅವರಿಗೆ ತೋರಿಸಿದ ಪ್ರೀತಿ ನನಗೆ ಬಹಳಷ್ಟು ಸಂತೋಷ ಹಾಗೂ ಉತ್ಸಾಹವನ್ನು ಮೂಡಿಸಿದೆ. ಹೋದ ಕಡೆಯೆಲ್ಲಾ ಜನರು ನಮ್ಮ ತಂದೆ (ರಾಕೇಶ್) ಬಗ್ಗೆ ನನ್ನೊಂದಿಗೆ ಮಾತನಾಡುತ್ತಾರೆ. ಅವರು ಮಾಡಿದ ಕೆಲವು ಉಪಕಾರಗಳ ಬಗ್ಗೆ ತಿಳಿಸಿದ್ದಾರೆ. ಈ ವಿಷಯವೂ ಕೂಡ ನನಗೆ ಸಂತೋಷವನ್ನುಂಟು ಮಾಡಿದೆ ಎಂದು ಧವನ್ ತಿಳಿಸಿದರು.

ಧವನ್ ಹೆಸರು ಕೇಳಿ ಮುಗಿಲು ಮುಟ್ಟಿದ ಜೈಕಾರ

ವರುಣಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವ ಮುನ್ನ ಸಿದ್ದರಾಮಯ್ಯ ನಂಜನಗೂಡು ತಾಲೂಕು ಗೋಳೂರು ಬಳಿ ಕಾರ್ಯಕರ್ತರ ಸಭೆ ನಡೆಸಿದರು. ಈ ಸಭೆಯ ವೇದಿಕೆಯಲ್ಲೂ ಧವನ್ ರಾಕೇಶ್ ಕಾಣಿಸಿಕೊಂಡಿದ್ದರು. ಸಿದ್ದರಾಮಯ್ಯ ಮಾತನಾಡುವ ವೇಳೆ 'ಇದು ನನ್ನ ಕೊನೆ ಚುನಾವಣೆ. ಹುಟ್ಟೂರು ಇರುವ ಕ್ಷೇತ್ರದಿಂದ ಕೊನೆ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎಂದು ನಿರ್ಧರಿಸಿದ್ದೇನೆ. ಮುಂದೆ ಈ ಕ್ಷೇತ್ರದಲ್ಲಿ ಡಾ.ಯತೀಂದ್ರ ಹಾಗೂ ಧವನ್ ರಾಕೇಶ್ ಇರುತ್ತಾರೆ ಎನ್ನುತ್ತಿದ್ದಂತೆ ಸಭೆಯಲ್ಲಿದ್ದ ಅಪಾರ ಸಂಖ್ಯೆ ಅಭಿಮಾನಿಗಳು ಜೈಕಾರ ಹಾಕಿ, ಶಿಳ್ಳೆ ಹೊಡೆದು ಸಮ್ಮತಿಸಿದರು. ಸುಮಾರು 2 ನಿಮಿಷ ಸಿದ್ದರಾಮಯ್ಯ ಅವರಿಗೆ ಶಿಳ್ಳೆ ಶಬ್ದದಿಂದ ಮಾತು ಮುಂದುವರೆಸಲು ಸಾಧ್ಯವಾಗಲೇ ಇಲ್ಲ. ಧವನ್ ಮೇಲೆ ಕ್ಷೇತ್ರದ ಜನರಿಗೆ ಇರುವ ಪ್ರೀತಿ ಕಂಡು ಸಿದ್ದರಾಮಯ್ಯ ಮೂಕವಿಸ್ಮಿತರಾದರು.

ವರುಣ, ಚಾಮುಂಡಿಬೆಟ್ಟದಲ್ಲಿ ಸಿದ್ದರಾಮಯ್ಯ ರೋಡ್ ಶೋ

● ನಾಮಪತ್ರ ಸಲ್ಲಿಕೆಗೂ ಮುನ್ನ ಟೆಂಪಲ್ ರನ್ ● ಮನೆ ದೇವರು ಸಿದ್ದರಾಮೇಶ್ವರನಿಗೆ ಪೂಜೆ





ಚಾಮುಂಡಿಬೆಟ್ಟದಲ್ಲಿ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದ ಸಿದ್ದರಾಮಯ್ಯ. ಬಲಚಿತ್ರದಲ್ಲಿ ಮನೆ ದೇವರು ಸಿದ್ದರಾಮೇಶ್ವರರಿಗೆ ಪೂಜೆ ಸಲ್ಲಿಸುತ್ತಿರುವುದು.

ಮೈಸೂರು, ಏ.19 (ಎಂಟಿವೈ)– ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ನಾಮಪತ್ರ ಸಲ್ಲಿಕೆಗೂ ಮುನ್ನ ಟೆಂಪಲ್ ರನ್ ನಡೆಸಿ, ಗೆಲುವಿಗಾಗಿ ವಿಶೇಷ ಪೂಜೆ ಸಲ್ಲಿಸಿದರು.

ಮೈಸೂರಿನ ರಾಮಕೃಷ್ಣನಗರದ ನಿವಾಸದಿಂದ ಹುಟ್ಟೂರು ಸಿದ್ದರಾಮನಹುಂಡಿಗೆ ಆಗಮಿಸಿದರು. ಬಹು ದಿನಗಳ ನಂತರ ಹುಟ್ಟೂರಿಗೆ ಬಂದ ಸಿದ್ದರಾಮಯ್ಯ ಅವರನ್ನು ಗ್ರಾಮದ ದ್ವಾರದಿಂದಲೇ ಮಂಗಳವಾದ್ಯ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ಹೂ ಮಳೆ ಸುರಿಸುತ್ತಾ ಆತ್ಮೀಯವಾಗಿ ಬರಮಾಡಿಕೊಂಡರು. ಬಳಿಕ ತಮ್ಮ ನಿವಾಸಕ್ಕೆ ತೆರಳಿ ಗ್ರಾಮದ ಮುಖಂಡರೊಂದಿಗೆ ಸಮಾಲೋಚಿಸಿದರು.

ನಂತರ ಕೇಂದ್ರದ ಮಾಜಿ ಸಚಿವ ಕೆ.ಹೆಚ್. ಮುನಿಯಪ್ಪ, ಶಾಸಕ ಡಾ.ಯತೀಂದ್ರ, ಮೊಮ್ಮಗ ಧವನ್ ರಾಕೇಶ್ ಸೇರಿದಂತೆ ಗ್ರಾಮದ ಮುಖಂಡರೊಂದಿಗೆ ಮನೆ ದೇವರು ಸಿದ್ದರಾಮೇಶ್ವರ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದರು. ನಂತರ ಸಿದ್ದರಾಮನಹುಂಡಿಯಲ್ಲಿರುವ ಶ್ರೀರಾಮ ಮಂದಿರಕ್ಕೆ ತೆರಳಿ ದರ್ಶನ ಪಡೆದು ಪೂಜೆ ಸಲ್ಲಿಸಿದರು. ಈ ವೇಳೆ ಗ್ರಾಮಸ್ಥರಿಂದ ಸಿದ್ದರಾಮಯ್ಯ ಅವರಿಗೆ ಅಭೂತಪೂರ್ವ ಬೆಂಬಲ ದೊರೆಯಿತು.



ಸಿದ್ದರಾಮನಹುಂಡಿ ಗ್ರಾಮಕ್ಕೆ ಆಗಮಿಸಿದ ಸಿದ್ದರಾಮಯ್ಯ ಅವರನ್ನು ಮೆರವಣಿಗೆ ಮೂಲಕ ಕರೆದೊಯ್ಯುತ್ತಿರುವ ಗ್ರಾಮಸ್ಥರು.

ಚಾಮುಂಡಿಬೆಟ್ಟದಲ್ಲಿ: ಸಿದ್ದರಾಮನಹುಂಡಿಯಿಂದ ಚಾಮುಂಡಿಬೆಟ್ಟಕ್ಕೆ ಆಗಮಿಸಿದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೆ ಗ್ರಾ.ಪಂ ಮುಖಂಡರು ಸ್ವಾಗತ ಕೋರಿದರು. ಬೃಹತ್ ಸೇಬಿನ ಹಾರ ಹಾಕಿ ಬರಮಾಡಿಕೊಂಡರು. ಚಾಮುಂಡೇಶ್ವರಿ ಕ್ಷೇತ್ರದ ಅಭ್ಯರ್ಥಿ ಸಿದ್ದೇಗೌಡ ಸೇರಿದಂತೆ ಇನ್ನಿತರ ಮುಖಂಡರು ಸಿದ್ದರಾಮಯ್ಯ ಅವರೊಂದಿಗೆ ದೇವಾಲಯದವರೆಗೂ ಮೆರವಣಿಗೆಯಲ್ಲಿ ಬಂದರು. ನಂತರ ನಾಡದೇವಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಜ್ವಾಲಾಮುಖಿ ತ್ರಿಪುರ ಸುಂದರಿ ದೇವಿ ದರ್ಶನ: ಚಾಮುಂಡಿಬೆಟ್ಟದಿಂದ ಉತ್ತನಹಳ್ಳಿಗೆ ಆಗಮಿಸಿದ ಸಿದ್ದರಾಮಯ್ಯ ಶಕ್ತಿ ದೇವತೆ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಾಲಯಕ್ಕೆ ತೆರಳಿ ದರ್ಶನ ಪಡೆದರು. ಅಲ್ಲದೇ, ವಿಶೇಷ ಪೂಜೆ ಸಲ್ಲಿಸಿ ಗೆಲುವಿಗಾಗಿ ಪ್ರಾರ್ಥಿಸಿದರು. ಟೆಂಪಲ್ ರನ್ ವೇಳೆಯೂ ಪುತ್ರ ಡಾ.ಯತೀಂದ್ರ, ಮೊಮ್ಮಗ ಧವನ್ ಸಾಥ್ ನೀಡಿದರು.

ಸೊಸೆಯಿಂದ ಪ್ರಚಾರ: ಮಾಜಿ ಸಿಎಂ ಸಿದ್ದರಾಮಯ್ಯ ವರುಣಾ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ಹಿನ್ನೆಲೆಯಲ್ಲಿ ಮಾವನ ಪರ ಮತಯಾಚಿಸಲು ಸೊಸೆಯೂ ಪ್ರಚಾರಕ್ಕಿಳಿದಿದ್ದಾರೆ. ದಿ.ರಾಕೇಶ್ ಅವರ ಪತ್ನಿ ಸ್ಮಿತಾ ರಾಕೇಶ್ ಅವರು ಪುತ್ರ ಧವನ್‌ನೊಂದಿಗೆ ಸಿದ್ದಾರಾಮನಹುಂಡಿಯಲ್ಲಿ ಕಾಣಿಸಿಕೊಂಡರು. ಅಲ್ಲದೇ, ಸಿದ್ದರಾಮಯ್ಯ ಅವರ ನಿವಾಸದ ಬಳಿ ನೆರೆದಿದ್ದ ಜನರಿಗೆ ಮಾವನ ಪರ ಮತಯಾಚಿಸಿದರು. ಸಿದ್ದರಾಮಯ್ಯ ಅವರು ನಾಮಪತ್ರ ಸಲ್ಲಿಕೆಗೆ ತೆರಳಿದಾಗ ಸಾಕಷ್ಟು ಸಮಯ ಗ್ರಾಮದಲ್ಲೇ ಮಾವನ ಪರ ಮತಯಾಚಿಸಿದರು.

ನಾಳೆ ಗುರುಶಾಂತಿ ಹೋಮ

ಮೈಸೂರು, ಏ.19–ನಗರದ ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನದಲ್ಲಿ ಏ.21ರಂದು ಮೀನರಾಶಿಯಿಂದ ಮೇಷ ರಾಶಿಗೆ 'ಗುರು' ಪ್ರವೇಶದ ಪ್ರಯುಕ್ತ ಗುರುಶಾಂತಿ ಹೋಮ ಏರ್ಪಡಿಸಲಾಗಿದೆ. ಮೇಷ, ಮಿಥುನ, ಸಿಂಹ, ತುಲಾ, ಧನಸ್ಸು, ಮಕರ, ಮೀನ ರಾಶಿಯವರಿಗೆ ಶಾಂತಿಹೋಮ ನೆರವೇರುತ್ತದೆ. ಮಾಹಿತಿಗೆ ಅರ್ಚಕ ಸೋಮಶೇಖರ್ ಅವರ ಮೊ. 9353413361/ 9886678091 ಸಂಪರ್ಕಿಸಬಹುದು.

ಕಾಂಗ್ರೆಸ್ ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿ ಜಗದೀಶ ಶೆಟ್ಟರ್, ರಮ್ಯಾಗೆ ಸ್ಥಾನ

ಬೆಂಗಳೂರು: ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್‌ತನ್ನ ಸ್ಟಾರ್‌ಪ್ರಚಾರಕರ ಪಟ್ಟಿ ಬಿಡುಗಡೆ ಮಾಡಿದೆ. ಎಐಸಿಸಿ ಮಾಜಿ ಅಧ್ಯಕ್ಷರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಚಿತ್ರನಟಿ ರಮ್ಯಾ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಇತ್ತೀಚೆಗೆ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ಜಗದೀಶ್ ಶೆಟ್ಟರ್‌ಸೇರಿ ಒಟ್ಟು 40 ಮಂದಿಯನ್ನು ಸ್ಟಾರ್‌ಪ್ರಚಾರಕರಾಗಿ ಆಯ್ಕೆ ಮಾಡಿದೆ.





ಪಟ್ಟಿ ಹೀಗಿದೆ: ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ, ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ, ಕೆ.ಸಿ.ವೇಣುಗೋಪಾಲ್, ರಣದೀಪ್‌ಸಿಂಗ್ ಸುರ್ಜೇವಾಲ, ಬಿ.ಕೆ ಹರಿಪ್ರಸಾದ್, ಎಂ.ಬಿ ಪಾಟೀಲ, ಡಾ.ಜಿ.ಪರಮೇಶ್ವರ, ಕೆ.ಎಚ್‌ಮುನಿಯಪ್ಪ, ಜೈರಾಂ ರಮೇಶ್, ಎಂ. ವೀರಪ್ಪ ಮೊಯಿಲಿ, ರಾಮಲಿಂಗಾರೆಡ್ಡಿ, ಸತೀಶ್‌ಜಾರಕಿಹೊಳಿ, ಜಗದೀಶ್‌ಶೆಟ್ಟರ್, ಡಿ.ಕೆ ಸುರೇಶ್, ಜಿ.ಸಿ ಚಂದ್ರಶೇಖರ್, ಸೈಯದ್ ನಾಸಿರ್ ಹುಸೇನ್, ಜಮೀರ್‌ಅಹ್ಮದ್‌ಖಾನ್, ಎಚ್.ಎಂ.ರೇವಣ್ಣ ಉಮಾಶ್ರೀ, ಅಶೋಕ್ ಗೆಹಲೋತ್, ಭೂಪೇಶ್ ಬಘೇಲ್, ಸುಖ್ವಿಂದರ್‌ಸಿಂಗ್ ಸುಕ್ಕು, ಪಿ.ಚಿದಂಬರಂ, ಪೃಥ್ವಿರಾಜ್ ಚವಾಣ್, ಅಶೋಕ್ ಚವಾಣ್ ಶಶಿ ತರೂರ್ ರೇವಂತ್‌ರೆಡ್ಡಿ, ರಮೇಶ್‌ಚೆನ್ನಿತ್ತಲ, ಬಿ.ವಿ.ಶ್ರೀನಿವಾಸ್, ರಾಜ್‌ಬಬ್ಬರ್, ಮೊಹಮ್ಮದ್ ಅಜರುದ್ದೀನ್, ದಿವ್ಯ ಸ್ಪಂದನಾ ರಮ್ಯಾ, ಇಮ್ರಾನ್‌ಪ್ರತಾಪ್‌ಗಡಿ, ಕನ್ಹಯ್ಯಕುಮಾರ್, ರೂಪಾ ಶಶಿಧರ್, ಸಾಧು ಕೋಕಿಲ.

ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಿ

ಕೋಮುವಾದಿ ಶಕ್ತಿಗಳ ಸೋಲಿಸಲು ಜನತೆಗೆ ಸಮಾನಮನಸ್ಕರ ಒಕ್ಕೂಟದ ಸಂದೇಶ



> "ಕಾಂಗ್ರೆಸ್ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸುತ್ತದೆ ಎಂದು ನಂಬಿದ್ದೇವೆ. ಬೇರೆ ಯಾವುದೇ ಪಕ್ಷದವರು ಮುಂದೆ ಬಂದು ಬಿಜೆಪಿ ಪಕ್ಷದೊಂದಿಗೆ ಚುನಾವಣಾ ಪೂರ್ವ ಮತ್ತು ಚುನಾವಣೋತ್ತರ ಮೈತ್ರಿ ಮಾಡಿಕೊಳ್ಳುವುದಿಲ್ಲವೆಂದು ಹೇಳಿದರೆ, ನಾವು ಅವರನ್ನೂ ಬೆಂಬಲಿಸುತ್ತೇವೆ. ಬಹಳ ಮುಖ್ಯವಾಗಿ ನಿಜವಾದ ಜಾತ್ಯಾತೀತ ಶಕ್ತಿಗಳನ್ನು ಈ ಬಾರಿ ಚುನಾವಣೆಯಲ್ಲಿ ಬೆಂಬಲಿಸಬೇಕೆಂದು ನಮ್ಮ ಆಶಯ. ಆ ಮೂಲಕ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಉಳಿಸಬೇಕೆಂದು ನಮ್ಮ ಸದುದ್ದೇಶ. **–ದಿನೇಶ್ ಅಮಿನ್‌ಮಟ್ಟು**

ಮೈಸೂರು,ಏ.19(ಪಿಎಂ)– ರಾಜ್ಯದಲ್ಲಿ ಕೋಮುವಾದಿ ಶಕ್ತಿ ಹಿಮ್ಮೆಟ್ಟಿಸಲು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ. ಇದೇ ಕಾರಣಕ್ಕೆ ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸುವಂತೆ ರಾಜ್ಯದ ಜನತೆಗೆ ಸಂದೇಶ ನೀಡಲು ಸಮಾನಮನಸ್ಕರ ಒಕ್ಕೂಟ ನಿರ್ಧರಿಸಿದೆ ಎಂದು ಒಕ್ಕೂಟದ ಸದಸ್ಯರೂ ಆದ ಹಿರಿಯ ಪತ್ರಕರ್ತ ದಿನೇಶ್ ಅಮಿನ್‌ಮಟ್ಟು ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಒಕ್ಕೂಟದ ವತಿಯಿಂದ ಹೊರತಂದಿರುವ 'ಸಂವಿಧಾನ ರಕ್ಷಿಸಿ; ಬಹುತ್ವ ಭಾರತ ಉಳಿಸಿ, ನಾವೆಲ್ಲಾ ಸೇರಿ ಸೌಹಾರ್ದ ಕರ್ನಾಟಕ ಕಟ್ಟೋಣ' ಶೀರ್ಷಿಕೆಯಡಿಯ ಕರಪತ್ರ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದು ಅಘೋಷಿತ ತುರ್ತು ಪರಿಸ್ಥಿತಿ ಜಾರಿಯಲ್ಲಿದೆ. ಪ್ರಜಾಪ್ರಭುತ್ವ ಉಳಿಸಿಕೊಳ್ಳಲು ಆಗದೇ ಇದ್ದರೆ ನಮ್ಮ ಮುಂದಿನ ತಲೆಮಾರು ನಮ್ಮನ್ನು ಕ್ಷಮಿಸುವುದಿಲ್ಲ. ಈ ಚುನಾವಣೆಯಲ್ಲಿ ಜಾತ್ಯಾತೀತ ಶಕ್ತಿಗಳನ್ನು ಬೆಂಬಲಿಸಬೇಕೆಂದು ಸಮಾಜಕ್ಕೆ ಸಂದೇಶ ನೀಡಲು ಮುಂದಾಗಿದ್ದೇವೆ. ಕೋಮುವಾದಿ ಶಕ್ತಿಗಳು ಹಾಗೂ ಸಂವಿಧಾನ ಬದಲಾವಣೆ ಮಾಡಲಿಕ್ಕೆ ಬಂದವರು ಎಂದು ರಾಜಾರೋಷವಾಗಿ ಹೇಳಿಕೊಂಡ ಪಕ್ಷ ಬೆಂಬಲಿಸದಂತೆ ಜನತೆಗೆ ಸಂದೇಶ ನೀಡುವುದು ನಮ್ಮ ಉದ್ದೇಶ ಎಂದರು.

ಮತದಾರ ಕೇವಲ ಮತದಾನಕ್ಕೆ ಸೀಮಿತವಾಗದೇ ಇದರ ಹೊರತಾಗಿಯೂ ಪ್ರಜಾಪ್ರಭುತ್ವ ರಕ್ಷಣೆ ಮಾಡಿಕೊಳ್ಳಬೇಕಾದ ಕರ್ತವ್ಯ ನಿರ್ವಹಿಸಬೇಕು. ಕಾಂಗ್ರೆಸ್ ಪಕ್ಷಕ್ಕೆ ನೀವೇಕೆ ಬೆಂಬಲ ಮಾಡುತ್ತೀರಿ. ನಿಮಗೇಕೆ ರಾಜಕಾರಣ ಎಂಬ ಪ್ರಶ್ನೆ ಉದ್ಭವಿಸಬಹುದು. 1975–77ರಲ್ಲಿ ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಗೊಂಡಾಗ ಅದರ ವಿರುದ್ಧ ಈ ದೇಶ ಮತ್ತು ನಾಡಿನ ಸಾಹಿತಿಗಳು, ಚಿಂತಕರು ವಿರೋಧಿಸಿ ಬೀದಿಗಿಳಿದು ಹೋರಾಟ ಮಾಡಿದ್ದರು. ಜೈಲಿಗೂ ಹೋಗಿದ್ದರು. ಆ ಮೂಲಕ ಅಂದಿನ ಪ್ರಭುತ್ವ ವಿರೋಧಿಸಿ ಪ್ರಜಾಪ್ರಭುತ್ವ ಉಳಿಸಿಕೊಳ್ಳಲಾಯಿತು. ಇಂದು ಅಂತಹದ್ದೇ ವಾತಾವರಣ ನಮ್ಮ ಎದುರಿಗಿದೆ. ಇಂದು ಸಂವಿಧಾನ ಮತ್ತು ಪ್ರಜಾಪ್ರಭುತ್ವಕ್ಕೆ ಧಕ್ಕೆ ತರಲಾಗುತ್ತಿದೆ. ಹೀಗಾಗಿ ಪ್ರಜಾಪ್ರಭುತ್ವ ರಕ್ಷಿಸುವ ಹೊಣೆ ನಮ್ಮ ಮೇಲಿದೆ ಎಂದರು.

ಇಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಮಾಧ್ಯಮ ರಂಗ ಕೂಡ ಕೆಲಸ ಮಾಡಲಾಗದ ಪರಿಸ್ಥಿತಿಯಿದೆ. ನ್ಯಾಯಾಂಗ ಮತ್ತು ಮಾಧ್ಯಮ ರಂಗ ಕರ್ತವ್ಯ ಮರೆತಿದೆ ಎಂದು ನಾನು ಹೇಳುವುದಿಲ್ಲ. ಆದರೆ ಅವರು ಕೆಲಸ ಮಾಡಲಿಕ್ಕಾಗದ ಪರಿಸ್ಥಿತಿ ನಿರ್ಮಿಸಲಾಗಿದೆ. ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳೇ ಪತ್ರಿಕಾಗೋಷ್ಠಿ ನಡೆಸಿ ನಮಗೆ ರಾಜಕೀಯ ಒತ್ತಡ ಇದೆ. ನಾವು ನಿಷ್ಪಕ್ಷಪಾತವಾಗಿ ಕೆಲಸ ಮಾಡಲಾಗುತ್ತಿಲ್ಲ ಎಂದು ಹೇಳಿದ್ದರು. ಇಂದು ಮಾಧ್ಯಮ ರಂಗವನ್ನೂ ನಿಯಂತ್ರಿಸಲಾಗುತ್ತಿದೆ. ಅದಾನಿ–ಅಂಬಾನಿಯವರು ದೇಶದ ಮಾಧ್ಯಮರಂಗವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿದ್ದಾರೆ. ಪತ್ರಕರ್ತರನ್ನು ತಾವು ಹೇಳಿದಂತೆ ಕೇಳುವಂತೆ ಇಟ್ಟುಕೊಳ್ಳುವ ಪರಿಸ್ಥಿತಿ ನಿರ್ಮಾಣ ಮಾಡಲಾಗಿದೆ ಎಂದು ದೂರಿದರು.

ವರದಿಗಾರ, ಸಂಪಾದಕರು ಮಾತ್ರವಲ್ಲ, ಮಾಲೀಕರು ಕೂಡ ಪ್ರಭುತ್ವದ ಎದುರಿಗೆ ಅಸಹಾಯಕರಾಗಿದ್ದಾರೆ. ಐಟಿ, ಇಡಿ, ಸಿಬಿಐ ದಾಳಿಯ ಪ್ರಯೋಗ ಮಾಡಲಾಗುತ್ತಿದೆ. ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲೂ ಮುಂದೆ ಮಾಧ್ಯಮರಂಗ ಸ್ವತಂತ್ರವಾಗಿ ಕೆಲಸ ಮಾಡಲಾಗದ ಪರಿಸ್ಥಿತಿ ಎದುರಾಗಬಹುದು. ಸಂವಿಧಾನದ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಸಾಮಾಜಿಕ ನ್ಯಾಯದ ತತ್ವಗಳಿಗೆ ಇಂದು ಧಕ್ಕೆ ಉಂಟಾಗಿದೆ. ಇಂದಿನ ಪ್ರಭುತ್ವ ನಮ್ಮಿಂದ ಸ್ವಾತಂತ್ರ್ಯ ಕಸಿದುಕೊಳ್ಳುತ್ತಿದೆ. ಸಾಮಾಜಿಕ ನ್ಯಾಯದ ವಿರುದ್ಧವಾಗಿ ಸರ್ಕಾರದ ನೀತಿಗಳು ಬರುತ್ತಿವೆ ಎಂದು ಆರೋಪಿಸಿದರು.

ಒಕ್ಕೂಟದ ಅಧ್ಯಕ್ಷ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಮಾತನಾಡಿ, ಈ ಬಾರಿಯ ವಿಧಾನಸಭಾ ಚುನಾವಣೆಯು ಇಡೀ ದೇಶದ ಪ್ರಜಾಪ್ರಭುತ್ವದ ಅಳಿವು ಉಳಿವಿನ ಘಟ್ಟವಾಗಿದೆ. ಏಕ ದೇಶ, ಏಕ ಭಾಷೆ ಎನ್ನುವ ಮೂಲಕ ಸ್ಥಳೀಯ ಅಸ್ಮಿತೆಗೆ ಧಕ್ಕೆ ಉಂಟು ಮಾಡಲಾಗುತ್ತಿದೆ. ಹಾಗಾಗಿ ರಾಜ್ಯದ ಮತದಾರರು ಎಚ್ಚರ ತಪ್ಪಬಾರದು ಎಂದು ಹೇಳಿದರು. ಇದಕ್ಕೂ ಮುನ್ನ ಕರಪತ್ರ ಬಿಡುಗಡೆ ಮಾಡಲಾಯಿತು. ಒಕ್ಕೂಟದ ಸದಸ್ಯರಾದ ಡಾ.ಲೀಲಾ ಸಂಪಿಗೆ, ಡಾ.ಷರೀಫಾ, ಡಾ.ನಿರಂಜನಾರಾಧ್ಯ, ಡಾ. ಮುಕುಂದರಾಜ್, ಹೆಚ್.ಜನಾರ್ಧನ್ (ಜನ್ನಿ) ಮತ್ತಿತರರು ಹಾಜರಿದ್ದರು.

ನಾಳೆ ಹಿರಿಯ ನಾಗರಿಕರ ವೇದಿಕೆ ಪ್ರಾರಂಭೋತ್ಸವ

ಮೈಸೂರು, ಏ. 19– ಮೈಸೂರಿನ ಶಾರದಾದೇವಿನಗರದಲ್ಲಿರುವ (ನಿವೇದಿತಾನಗರ) ಉದ್ಯಾನದಲ್ಲಿರುವ ಅನುಭವ ಮಂಟಪದಲ್ಲಿ ಏ.21ರಂದು ಸಂಜೆ 7 ಗಂಟೆಗೆ ಹಿರಿಯ ನಾಗರಿಕರ ವೇದಿಕೆ ಪ್ರಾರಂಭೋತ್ಸವ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಜ್ಞಾನಬುತ್ತಿ ಸಂಸ್ಥೆಯ ಜೈನಹಳ್ಳಿ ಸತ್ಯನಾರಾಯಣ ಭಾಗವಹಿಸುವರು. ಅಲ್ಲದೆ ಹಿರಿಯರು, ಕಿರಿಯರು, ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ವೇದಿಕೆ ಕಾರ್ಯದರ್ಶಿ ಬಸವರಾಜು ಪ್ರಕಟಣೆಯಲ್ಲಿ ಕೋರಿದ್ದಾರೆ.

ಬೋನ್ ಮಿನರಲ್ ಡೆನ್ಸಿಟಿ ಟೆಸ್ಟ್ ಶಿಬಿರ

ಮೈಸೂರು,ಏ.19–ಮೈಸೂರಿನ ಬಂಬೂ ಬಜಾರ್‌ನ ಸಂಯ್ಯಾಜಿ ರಾವ್ ರಸ್ತೆಯಲ್ಲಿರುವ ಸ್ಪರ್ಶ ಆರೋಗ್ಯ ಮತ್ತು ಕಣ್ಣಿನ ಆಸ್ಪತ್ರೆಯಲ್ಲಿ ಏ.23 ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ 50 ವರ್ಷ ಮೇಲ್ಪಟ್ಟ ನಾಗರಿಕರಿಗಾಗಿ ಉಚಿತ ಬೋನ್ ಮಿನರಲ್ ಡೆನ್ಸಿಟಿ ಟೆಸ್ಟ್ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ 150 ವ್ಯಕ್ತಿಗಳಿಗೆ ಮೊದಲು ಬಂದವರಿಗೆ ಆದ್ಯತೆ ಮೇರೆಗೆ ಪರೀಕ್ಷೆ ಮಾಡಲಾಗುತ್ತದೆ. ಏ.21 ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆಯೊಳಗೆ ತಮ್ಮ ಹೆಸರುಗಳನ್ನು ಮೊ. 8762955344ಗೆ ಕರೆ ಮಾಡಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಗೋಪಾಲಗೌಡ ನ್ಯೂರೋಜನ್‌ನಿಂದ ಉಚಿತ ಸೂಪರ್ ಸ್ಪೆಷಾಲಿಟಿ ವೈದ್ಯಕೀಯ ಶಿಬಿರ


ಮೈಸೂರು, ಏ. 19– ನಜರ್‌ಬಾದ್‌ನ ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯ ನ್ಯೂರೋಜನ್ ಉಚಿತ ಸೂಪರ್ ಸ್ಪೆಷಾಲಿಟಿ ಮೆಡಿಕಲ್ ಕ್ಯಾಂಪ್ ಅನ್ನು ಏಪ್ರಿಲ್ 20ರವರೆಗೆ ನಡೆಸಲಾಗುತ್ತಿದೆ ಎಂದು ನ್ಯೂರೋಜನ್‌ನ ಮುಖ್ಯಸ್ಥ ಡಾ.ಹೆಚ್.ವಿ. ಶುಶ್ರೂತ್ ತಿಳಿಸಿದರು.



ಉಚಿತ ಮೆಡಿಕಲ್ ಕ್ಯಾಂಪ್ ಅನ್ನು ಡೆಲೋ ಪ್ಲಸ್ ಮುಖ್ಯಸ್ಥರಾದ ಗಿರಿಧರ್ ವೇಣು ಗೋಪಾಲ್ ಉದ್ಘಾಟಿಸಿದರು. ಮೂರು ದಿನಗಳ ಕಾಲ ನಡೆಯುವ ಉಚಿತ ಶಿಬಿರದಲ್ಲಿ ಕಿಡ್ನಿ, ಬ್ರೈನ್, ಲಂಗ್ಸ್, ಗ್ಯಾಸ್ಟ್ರೋಲಜಿ, ಲಿವರ್ ಮತ್ತು ಜನರಲ್ ಫಿಶಿಷಿಯನ್, ಶುಗರ್, ಬಿಪಿ, ಥೈರಾಯಿಡ್, ಹಾರ್ಟ್‌ಗೆ ಸಂಬಂಧಿಸಿದಂತೆ ಉಚಿತವಾಗಿ ಸಮಾಲೋಚನೆ ನಡೆಸಲಿದ್ದಾರೆ. ಶಿಬಿರದಲ್ಲಿ ನುರಿತ ತಜ್ಞರಾದ ಡಾ.ಶಶಾಂಕ್, ಡಾ.ವಿಜಯ್‌ಕುಮಾರ್ ಟಿ.ಆರ್., ಡಾ.ಭರತ್, ಡಾ.ಪ್ರಶಾಂತ್ ಭಾಗವಹಿಸಿದ್ದಾರೆ. ರಕ್ತ ತಪಾಸಣೆ, ಎಂಆರ್‌ಐ, ಸಿಟಿ ಸ್ಕ್ಯಾನ್, ಅಲ್ಟ್ರಾಸೌಂಡ್ ಸ್ಕ್ಯಾನ್, ಎಂಡೋಸ್ಕೋಪಿ ಮತ್ತು ಕೊಲೊನೋಸ್ಕೋಪಿ ಪರೀಕ್ಷೆಗಳನ್ನು 50% ರಿಯಾಯಿತಿ ದರದಲ್ಲಿ ಮಾಡಲಾಗುವುದು. ಈ ಅವಕಾಶವನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕೆಂದು ಡಾ. ಶುಶ್ರೂತ್ ತಿಳಿಸಿದ್ದಾರೆ.

ಇಂದು ವರ್ಷದ ಮೊದಲ ಸೂರ್ಯ ಗ್ರಹಣ

ನವದೆಹಲಿ: ಈ ವರ್ಷದ ಮೊದಲ ಸೂರ್ಯ ಗ್ರಹಣ ನಾಳೆ ಅಂದರೆ ಗುರುವಾರ ಗೋಚರವಾಗಲಿದ್ದು, ಖಗೋಳ ವಿಜ್ಞಾನ ಕೌತುಕ ಬೆಳವಣಿಗೆಯ ಕುರಿತು ಸಂಪೂರ್ಣ ಮಾಹಿತಿ ಇಲ್ಲಿದೆ. ಏ.20 ಅಂದರೆ ನಾಳೆ 2023 ವರ್ಷದ ಮೊದಲ ಸೂರ್ಯಗ್ರಹಣ ಸಂಭವಿಸಲಿದ್ದು, ಭಾರತೀಯ ಕಾಲಮಾನದ ಸೂರ್ಯಗ್ರಹಣವು ಬೆಳಗ್ಗೆ 7:04ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ 12:29ಕ್ಕೆ ಕೊನೆಗೊಳ್ಳುತ್ತದೆ. ಒಟ್ಟು ಸಮಯವು 5 ಗಂಟೆಗಳಿಗಿಂತ ಹೆಚ್ಚು ಇರುತ್ತದೆ. ಗ್ರಹಣವು ಜಗತ್ತಿನ ಹಲವು ರಾಷ್ಟ್ರಗಳಲ್ಲಿ ಗೋಚರಿಸುತ್ತದೆ. ಆದರೆ ಭಾರತದಲ್ಲಿ ಗೋಚರಿಸುವುದಿಲ್ಲ ಎಂದು ವಿಜ್ಞಾನಿಗಳು ಹೇಳಿದ್ದಾರೆ.



ಎಲ್ಲೆಲ್ಲಿ ಗೋಚರಿಸುತ್ತದೆ: ಗ್ರಹಣವು ಆಸ್ಟ್ರೇಲಿಯಾ, ಪೂರ್ವ ಮತ್ತು ದಕ್ಷಿಣ ಏಷ್ಯಾ, ಪೆಸಿಫಿಕ್ ಮಹಾಸಾಗರ, ಅಂಟಾರ್ಟಿಕಾ ಮತ್ತು ಹಿಂದೂ ಮಹಾಸಾಗರದಿಂದ ಗೋಚರಿಸುತ್ತದೆ. ಆದರೆ ಭಾರತದಲ್ಲಿ ಗೋಚರಿಸುವುದಿಲ್ಲ. ಸೂರ್ಯಗ್ರಹಣದ ಮಾರ್ಗವು ಭಾರತದ ಮೂಲಕ ಹಾದುಹೋಗುವುದಿಲ್ಲ ಮತ್ತು ದಕ್ಷಿಣ/ಪೂರ್ವ ಏಷ್ಯಾ, ಆಸ್ಟ್ರೇಲಿಯಾ, ಪೆಸಿಫಿಕ್, ಹಿಂದೂ ಮಹಾಸಾಗರ ಮತ್ತು ಅಂಟಾರ್ಟಿಕಾದ ಕೆಲವು ಭಾಗಗಳಲ್ಲಿ ಗೋಚರಿಸುತ್ತದೆ. ಈ ಸೂರ್ಯ ಗ್ರಹಣದ ಸಂಪೂರ್ಣತೆಯು ಪಶ್ಚಿಮ ಆಸ್ಟ್ರೇಲಿಯಾದ ಎಕ್ಸ್‌ಮೌತ್‌ನಲ್ಲಿ ಗೋಚರಿಸುತ್ತದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

20.4.2023 ಗುರುವಾರ, ಮಳೆ ನಕ್ಷತ್ರ: ಅಶ್ವಿನಿ, 14.04.2023 ರಿಂದ 24.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ: ಅಶ್ವಿನಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

- **ಗೋಪಾಲಗೌಡ ಶಾಂತವೇರಿ ಮೆಮೋರಿಯಲ್ ಆಸ್ಪತ್ರೆ :** ಉಚಿತ ವೈದ್ಯಕೀಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ನಜರ್‌ಬಾದ್, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.
- **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ಆಡೋಣ ಬಾ... ಮಕ್ಕಳಿಗಾಗಿ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ, ವಿಶೇಷ ಆಹ್ವಾನಿತರು : ಶ್ರೀಮತಿ ಇಂದಿರಾ ನಾಯರ್, ಶ್ರೀಮತಿ ಶಶಿಕಲಾ ರಂಗಾಯಣ, ಅಧ್ಯಕ್ಷತೆ : ಶ್ರೀಮತಿ ಡಿ. ಶೀಲಾ ಕುಮಾರಿ, ಸ್ಥಳ: ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ಸಂಜೆ 5ಕ್ಕೆ.
- **ರಂಗಾಯಣ :** ಚಿಣ್ಣರ ಮೇಳ–2023, ಮಕ್ಕಳ ರಂಗ ತರಬೇತಿ ಶಿಬಿರ, ಅಗ್ನಿಶಾಮಕ ದಳದವರು, ಅಗ್ನಿಶಾಮಕ ದಳದ ಬಗ್ಗೆ ಮಾಹಿತಿ, ಪೂರ್ಣ ಪ್ರಾತ್ಯಕ್ಷಿಕೆ, ಸ್ಥಳ: ರಂಗಾಯಣ, ಸಂಜೆ 4ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಚಿನ್ಮಯ ಮಿಷನ್ :** ಕೃಷ್ಣರಾವ್ ಪ್ರಕಾಶ್ ಅವರಿಂದ ಪತಂಜಲಿಯ ಯೋಗ ಸೂತ್ರಗಳು – ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ಟಿ.ಎಸ್.ಸ್ನೇಹಾ, ವ್ಯಾಖ್ಯಾನ–ಡಾ. ಹೆಚ್.ಎಂ. ಕಲಾಶ್ರೀ, 8.30 ಹಾಡು ಹೇಳಿದ ಕಥೆ, 8.45 ಪಂಪನ ಪೆಂಪು, 9.00 ವೀಣೆಯ ಬೆಡಗು ನಾದದ ಸೊಬಗು, 10.00ಲಲಿತಾ ಹರಿಪ್ರಿಯ–ಹಾಡುಗಾರಿಕೆ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 1.00 ರಂಗಗೀತೆಗಳು–ಧರ್ಮ ರತ್ನಾಕರ ನಾಟಕದ ಹಾಡುಗಳು, 1.20 ಭಾವಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ–"ಸಕ್ಕರೆಗೆ ಏಕೆ ಈ ಅಪವಾದ" ಮಾತನಾಡುತ್ತಾರೆ: ಡಾ. ಮನೋಹರ್ ಎಂ.ಪಿ, 5.00 ಮಿಶ್ರಮಾಧುರ್ಯ, 6.50 ಕೃಷಿರಂಗ –ಕಿಸಾನ್‌ವಾಣಿ –ಕೃಷಿಯಲ್ಲಿ ಆರ್ಥಿಕ ಅಭಿವೃದ್ಧಿ ಕುರಿತು ಕೃಷಿಕ ಕರಿಗೌಡ ಅವರೊಂದಿಗೆ ಸಂದರ್ಶನ, 8.15 ಯುವವಾಣಿ – ವಿಶ್ವ ಭೂ ದಿನದ ಸಂಬಂಧವಾಗಿ ವಿಶೇಷ ಚಿತ್ರ ಚಿತ್ತಾರ, ಪ್ರಸ್ತುತಿ–ನಿವೇದಿತಾ ಹೆಚ್., 10.00 ನಾಟಕ 'ಜನಾನುರಾಗಿ', ರಚನೆ– ಮಂಗಳಾ ಸತ್ಯನ್, ನಿರ್ಮಾಣ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 20 ಗುರುವಾರ 2023

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 5 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com

₹4

ಜಾಹೀರಾತು: ad@mysurumithra.com



ನಕ್ಕರೆ ಅದೇ ಸ್ವರ್ಗ

ನಿರ್ದೇಶಕ : ನೀವು 10ನೇ ಮಹಡಿಯಿಂದ ಈಜುಕೊಳಕ್ಕೆ ಧುಮುಕಬೇಕು
ನಟ : ಆದರೆ ನನಗೆ ಈಜು ಬರುವುದಿಲ್ಲ?
ನಿರ್ದೇಶಕ : ಯೋಚಿಸಬೇಡಿ. ಅದರಲ್ಲಿ ನೀರು ಇರುವುದಿಲ್ಲ !

ಮೈಸೂರು ಮಿತ್ರ

ಗುರುವಾರ, 20 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಸ್ವಾರ್ಥ ಎಂದೂ ಪರರ ಭಾವನೆಗೆ ಬೆಲೆ ಕೊಡುವುದಿಲ್ಲ. ನಮ್ಮನ್ನು ನಾವು ಅರ್ಥ ಮಾಡಿಕೊಂಡಾಗ, ಬೇರೆಯವರ ಸಾಮರ್ಥ್ಯವನ್ನು, ಚಿಂತನೆಯನ್ನು ಗೌರವಿಸುವ ಮನೋಭಾವ ಬರುತ್ತದೆ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಿಡಿದ ಕೆಲಸ ಕೈ ಹತ್ತಲ್ಲ, ತಿಂದ ಅನ್ನ ಮೈ ಹತ್ತಲ್ಲ

ನಿಮ್ಮ ಪತ್ರಗಳು

43 ವಸಂತ ಪೂರೈಸಿದ 'ಮೈಸೂರು ಮಿತ್ರ'ನಿಗೆ ಅಭಿನಂದನೆಗಳು

ಮಾನ್ಯರೆ,

ನಮ್ಮ ಹೆಮ್ಮೆಯ 'ಮೈಸೂರು ಮಿತ್ರ' 43 ವರ್ಷ ಪೂರೈಸಿದ್ದು, ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿ ಹಾಗೂ ಅವರ ಸಂಪೂರ್ಣ ಪತ್ರಿಕಾ ಬಳಗಕ್ಕೆ ಅಭಿನಂದನೆಗಳು.

'ಮೈಸೂರು ಮಿತ್ರ' ಆರಂಭವಾದ ದಿನದಿಂದ ದಿನನಿತ್ಯ ಪತ್ರಿಕೆ ಪ್ರಕಟಣೆ ಮಾಡುವಲ್ಲಿ ತೋರುತ್ತಿದ್ದ ಅಸಾಧಾರಣ ಕರ್ತವ್ಯ ನಿಷ್ಠೆ ಶ್ಲಾಘನೀಯ. ಇದು ಏಕೆ ಹೇಳಬೇಕೆಂದರೆ ನನ್ನ ಶಿವಮೊಗ್ಗ ಪತ್ರಿಕಾ ಸಂಪಾದಕ ಮಿತ್ರರೊಬ್ಬರು ಹೇಳುವಂತೆ ಪ್ರತಿದಿನ ಪತ್ರಿಕೆ ಹೊರಬರುವುದೆಂದರೆ ಅದು ಹೆರಿಗೆಯಾದಂತೆ ಎಂದು. ತಾಯಂದಿರು ತಮ್ಮ ಜೀವಿತಾವಧಿಯಲ್ಲಿ ಮೂರು –ನಾಲ್ಕು ಬಾರಿ, ಈಗಂತೂ ಒಂದು –ಎರಡು ಬಾರಿ ಹೆರಿಗೆ ನೋವು ಅನುಭವಿಸುತ್ತಾರೆ. ಆದರೆ ಸಂಪಾದಕರು, ಪತ್ರಿಕಾ ಬಳಗ ಪ್ರತಿನಿತ್ಯ ಸುದ್ದಿಗಾಗಿ, ವರದಿಗಾಗಿ, ಜಾಹೀರಾತಿಗಾಗಿ, ಲೇಖನಗಳಿಗಾಗಿ ನಂತರ ಅದನ್ನೆಲ್ಲಾ ಸೇರಿಸಿ ಪತ್ರಿಕೆ ಪ್ರಕಟಣೆಗೆ ತಯಾರು ಮಾಡುವುದೂ ಮತ್ತು ಅದರಲ್ಲೂ ತನ್ನ ಪತ್ರಿಕಾ ಧರ್ಮಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳುವುದು ದುಸ್ತರವಾದ ಹೆರಿಗೆಯೇ ಸರಿ.

ಪತ್ರಿಕಾ ಧರ್ಮಕ್ಕೆ ಚ್ಯುತಿ ಬಾರದಂತೆ ವೃತ್ತಿ ಸಂಹಿತೆಯನ್ನು ಕಾಯುತ್ತಲೇ ಪತ್ರಿಕೆಯೊಂದನ್ನು ನಡೆಸಿಕೊಂಡು ಹೋಗುವುದು ಸವಾಲೇ ಸರಿ. ಆ ಸವಾಲನ್ನು ಎದುರಿಸುತ್ತಾ ಈ ಪತ್ರಿಕೆ ಮುನ್ನಡೆಯುತ್ತಿದೆ ಎಂದರೆ ಅದು ಪತ್ರಿಕೆಯ ಸಾಮರ್ಥ್ಯವನ್ನು ಅದರಲ್ಲಿ ಓದುಗರು ಇಟ್ಟಿರುವ ವಿಶ್ವಾಸವನ್ನು ತೋರಿಸುತ್ತದೆ. ಇಂದಿನ ಕಾಲಮಾನಕ್ಕೆ ತಕ್ಕಂತೆ ಪತ್ರಿಕೆಯ ವಿನ್ಯಾಸ, ಅಂಕಣಗಳನ್ನು ಹೆಚ್ಚು ಆಕರ್ಷಣೀಯಗೊಳಿಸಿ ಹೊಸ ಓದುಗರನ್ನೂ ತನ್ನತ್ತ ಸೆಳೆಯಬಲ್ಲ ವೃತ್ತಿಪರ ಕಾರ್ಯಕ್ಷಮತೆಗಳನ್ನು ತೋರಿದರೆ ಪತ್ರಿಕೆ ಇನ್ನಷ್ಟು ಬೆಳೆದು ಹೆಸರು ಮಾಡುವುದರಲ್ಲಿ ಸಂಶಯವಿಲ್ಲ.

ಇನ್ನೊಂದು ವಿಷಯ ಸಂಪಾದಕರು ಹೇಳಿದಂತೆ ಪತ್ರಿಕೆ ಇನ್ನೂ ಸ್ವಲ್ಪ ಚೇತರಿಸಿಕೊಳ್ಳಬೇಕಾಗಿದೆ ಎಂದಿದ್ದಾರೆ. ಬಹುಶಃ ಪತ್ರಿಕೆ ಓದುವವರ ಸಂಖ್ಯೆ ಕಡಿಮೆಯಾಗುತ್ತಿರುವುದರಿಂದ ಅವರು ಈ ಮಾತು ಹೇಳಿರಬಹುದು. ಇಂದಿನ ಯುವಪೀಳಿಗೆ ದೈನಂದಿನ ಪತ್ರಿಕೆಗಳನ್ನು ಕೊಂಡು ಓದುವುದು, ಗ್ರಂಥಾಲಯಕ್ಕೆ ಹೋಗುವುದು ವಿರಳವೇ. ಅದಕ್ಕೆ ಈ ಮೊಬೈಲ್ ರಾಕ್ಷಸನ ಹಾವಳಿಯು ಇರಬಹುದು. ಇಷ್ಟೆಲ್ಲಾ ಕಷ್ಟ ಕಾರ್ಪಣ್ಯದ ನಡುವೆಯೂ ಮಿತ್ರ ಯಶಸ್ವಿ ಪತ್ರಿಕೆಯಾಗಿ ಮೈಸೂರಿನಲ್ಲಿ ಮುಂದುವರೆಯುತ್ತಿರುವುದು ಸಂತಸದ ಸಮಾಚಾರ. ವಸ್ತುನಿಷ್ಠ ವರದಿ, ನಿಖರ ಭವಿಷ್ಯ ಇದಕ್ಕೆ ಕಾರಣವಿರಬಹುದು. ಸರಿ ಸುಮಾರು 13 ವರ್ಷದಿಂದ ನಾನು ಇದರ ಓದುಗನಾಗಿದ್ದು, ಮಧ್ಯೆ ಸ್ವಲ್ಪ ಬೇರೆ ಊರಿನಲ್ಲಿ ಇದ್ದುದ್ದರಿಂದ ಸಂಪರ್ಕ ತಪ್ಪಿತ್ತು. ಎಲ್ಲಾ ಸಮಸ್ಯೆಗಳ ನಡುವೆ ಪತ್ರಿಕೋದ್ಯಮಕ್ಕೆ ಮಿತ್ರನ ಕೊಡುಗೆ ಅವಿಸ್ಮರಣೀಯ ಹಾಗೂ ಅದೊಂದು ನಮ್ಮ ಜೀವನದ ಅವಿಭಾಜ್ಯ ಅಂಗವೆನಿಸಿರುವುದು ನನಗಂತೂ ಹೆಮ್ಮೆ. ಮಿತ್ರ 50–75–100 ಆಗಲಿ ನಿನ್ನ ಪಯಣ. ಹೆಜ್ಜೆಯ ನಿಖರತೆ ಹಾಗೂ ನೋಟದ ಪ್ರಖರತೆ ಇನ್ನೂ ಹೆಚ್ಚು ಹೆಚ್ಚಾಗಲಿ. ಶುಭವಾಗಲಿ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ಕುವೆಂಪುನಗರದಲ್ಲಿ ವಿದ್ಯುತ್, ನೀರಿನ ಸಮಸ್ಯೆ

ಮಾನ್ಯರೆ,

ಮೈಸೂರಿನ ಕುವೆಂಪುನಗರ 3ನೇ ಹಂತದ ನಿವಾಸಿಗಳಿಗೆ ವಿದ್ಯುತ್ ಹಾಗೂ ನೀರಿನ ತೊಂದರೆ ಬಹಳಷ್ಟಿದೆ. ತಿಂಗಳಲ್ಲಿ ಐದರಿಂದ ಆರು ಬಾರಿ ವಿದ್ಯುತ್ ಸರಬರಾಜನ್ನು ಕಡಿತಗೊಳಿಸಲಾಗುತ್ತದೆ. ಕಾರಣ ಕೇಳಿದರೆ ಮಳೆ ಬಂದಿದೆ, ಕಾಮಗಾರಿ ಯೋಜನೆ ನಡೆಯುತ್ತಿದೆ, ನಿರ್ವಹಣೆ ಎಂದು ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ಮತ್ತೆ ರಾತ್ರಿ 10 ರಿಂದ ಬೆಳಗ್ಗೆ 8 ರವರೆಗೂ ವಿದ್ಯುತ್ ಕಡಿತಗೊಳಿಸಲಾಗುತ್ತಿದೆ. ಇದರಿಂದ ನೀರು ಕೂಡ ಬರುವುದಿಲ್ಲ. ಬೆಳಗಿನ ಸಮಯ 8.30ಕ್ಕೆ ನೀರು ಬಿಟ್ಟರೆ ಸಂಜೆಯವರೆಗೂ ಬರುತ್ತದೆ ಎಂದು ಹೇಳುತ್ತಾರೆ. ಆದರೆ ಮಧ್ಯಾಹ್ನ 2 ರಿಂದ ಸಂಜೆ 5ರವರೆಗೂ ನೀರು ಬರುವುದಿಲ್ಲ. ಹಾಗೂ ಬೆಳಗ್ಗೆ ನೀರು ತಡವಾಗಿ ಬರುವುದರಿಂದ ಅಡುಗೆ ಕೆಲಸಕ್ಕೆ ತುಂಬಾ ತೊಂದರೆಯಾಗುತ್ತಿದೆ. ಕೇಳಿದರೆ ಅವು ಪೈಪಿನ ಮೇಲೆ ಅವಲಂಬಿಸಿರುತ್ತದೆ ಎಂದು ಬೇಜವಾಬ್ದಾರಿ ಉತ್ತರವನ್ನು ನೀಡುತ್ತಾರೆ. ಸಂಬಂಧಪಟ್ಟವರು ಈ ಬಗ್ಗೆ ಗಮನಹರಿಸಬೇಕೆಂದು ಮನವಿ.

– ನೊಂದ ನಾಗರಿಕರು, ಕುವೆಂಪುನಗರ, ಮೈಸೂರು.

ಕೋಪದಲ್ಲಿ ಮೂಗನ್ನು ಕೊಯ್ದುಕೊಂಡಂತೆ!

ಮಾನ್ಯರೆ,

ಕೃಷ್ಣರಾಜ ಮತ್ತು ಚಾಮರಾಜ ವಿಧಾನಸಭಾ ಕ್ಷೇತ್ರಗಳ ಪ್ರಬಲ ಟಿಕೆಟ್ ಆಕಾಂಕ್ಷಿಗಳಾಗಿದ್ದ ಎಸ್.ಎ.ರಾಮದಾಸ್ (ಬಿಜೆಪಿ) ಹಾಗೂ ವಾಸು (ಭಾರತ ರಾಷ್ಟ್ರೀಯ ಕಾಂಗ್ರೆಸ್) ಅವರಿಗೆ ಅವರ ಪಕ್ಷ ಟಿಕೆಟ್ ನಿರಾಕರಿಸಿದೆ. ಆದರೆ ಈ ಅಭ್ಯರ್ಥಿಗಳು ತಾವು ಯಾವುದೇ ಕಾರಣಕ್ಕೂ ಪಕ್ಷ ತೊರೆಯುವುದಿಲ್ಲವೆಂಬ ಹೇಳಿಕೆ ನೀಡಿದ್ದಾರೆ. ರಾಮದಾಸ್ ಒಂದು ಹೆಜ್ಜೆ ಮುಂದೆ ಹೋಗಿ ಭಾರತೀಯ ಜನತಾ ಪಕ್ಷ ತಮಗೆ ಮಾತೃ ಸಮಾನ ಎಂಬ ಹೇಳಿಕೆ ನೀಡಿ, ಪಕ್ಷದ ಅಧಿಕೃತ ಅಭ್ಯರ್ಥಿಯ ಪರ ಮನೆ ಮನೆಗೆ ತೆರಳಿ ಮತಯಾಚಿಸುವುದಾಗಿ ಹೇಳಿ ಅಚ್ಚರಿ ಮೂಡಿಸಿದ್ದಾರೆ. ಇವರಿಬ್ಬರೂ ತಮ್ಮ ತಮ್ಮ ಪಕ್ಷಗಳ ವಿರುದ್ಧ ಬಂಡಾಯವೇಳುತ್ತಾರೆ ಎಂಬ ಗುಮಾನಿ ಇತ್ತಾದರೂ ಈಗ ಅವೆಲ್ಲಾ ಸುಳ್ಳಾಗಿದೆ.

ರಾಮದಾಸ್ ಅವರಿಗೆ ಬಿಜೆಪಿ ಅನೇಕ ಅವಕಾಶ ನೀಡಿ ನಾಲ್ಕು ಬಾರಿ ಕೃಷ್ಣರಾಜ ಕ್ಷೇತ್ರದ ಶಾಸಕರನ್ನಾಗಿಸಿದೆ. ಭವಿಷ್ಯದಲ್ಲಿ ಅವರಿಗೆ ಕೇಂದ್ರ ಮಟ್ಟದಲ್ಲಿ ಯಾವುದಾದರೂ ಪ್ರಮುಖ ಹುದ್ದೆ ಸಿಕ್ಕರೂ ಸಿಗಬಹುದು. ಅದೇ ರೀತಿ ಚಾಮರಾಜ ಕ್ಷೇತ್ರದಲ್ಲಿ ಒಂದು ಬಾರಿ ಗೆದ್ದಿರುವ ವಾಸು ಹಲವಾರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ತಮ್ಮ ಕ್ಷೇತ್ರದಲ್ಲಿ ಒಳ್ಳೆಯ ಹೆಸರು ಉಳಿಸಿಕೊಂಡಿದ್ದಾರೆ. ಮಕ್ಕಳು ಬಿಜೆಪಿ ಸೇರಿದ್ದರೂ, ತಾವು ಮಾತ್ರ ಕಾಂಗ್ರೆಸ್‌ನಲ್ಲೇ ಮುಂದುವರೆಯುವ ಘೋಷಣೆ ಮಾಡಿದ್ದಾರೆ.

ಇಲ್ಲಿ ಒಂದು ಮಾತನ್ನು ಸ್ಪಷ್ಟಪಡಿಸಲು ಬಯಸುತ್ತೇನೆ. ಅದು ಯಾವುದೇ ಪಕ್ಷವಾಗಲಿ, ಪಕ್ಷಕ್ಕಿಂತ ಯಾರೂ ದೊಡ್ಡವರಲ್ಲ. ಪಕ್ಷ ಸಾವಿರಾರು ಕಾರ್ಯಕರ್ತರಿಗೆ ಆಶ್ರಯ ತಾಣವಾಗಿದೆ. ಟಿಕೆಟ್ ಸಿಗಲಿಲ್ಲ ಎಂಬ ಒಂದೇ ಕಾರಣಕ್ಕೆ ಪಕ್ಷ ತೊರೆದರೆ ಕೋಪದಲ್ಲಿ ಮೂಗನ್ನು ಕೊಯ್ದುಕೊಂಡಂತೆ ಆಗುತ್ತದೆ. ಅದೂ ಅಲ್ಲದೇ, ಒಬ್ಬನೇ ಅಭ್ಯರ್ಥಿ ಪ್ರತಿಸಲವೂ ತನಗೇ ಟಿಕೆಟ್ ಸಿಗಬೇಕೆಂದು ಹಂಬಲಿಸುವುದು ಸರಿಯಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲಾ ಅರ್ಹರಿಗೂ ಅವಕಾಶ ಸಿಗಬೇಕಾಗುತ್ತದೆ. ಪಕ್ಷದ ಟಿಕೆಟ್ ಯಾರೊಬ್ಬರ ಸ್ವಂತ ಆಸ್ತಿಯಲ್ಲ. ಇನ್ನು ಬಿಜೆಪಿಯಿಂದ ಕೃಷ್ಣರಾಜ ಕ್ಷೇತ್ರದಲ್ಲಿ ಟಿಕೆಟ್ ಪಡೆದಿರುವ ಶ್ರೀವತ್ಸ, ಸುಮಾರು 35 ವರ್ಷಗಳ ಕಾಲ ಪಕ್ಷಕ್ಕಾಗಿ ದುಡಿದಂತಹ ಪ್ರಾಮಾಣಿಕ ವ್ಯಕ್ತಿ. ಅವರೇನೂ ಟಿಕೆಟ್ ಕೋರಿ ಅರ್ಜಿ ಸಲ್ಲಿಸಿರಲಿಲ್ಲ. ಆದರೂ ಪಕ್ಷ ಅವರ ಸೇವೆಯನ್ನು ಪರಿಗಣಿಸಿ, ಅಂತಿಮ ಕ್ಷಣದಲ್ಲಿ ಅವರಿಗೆ ಟಿಕೆಟ್ ನೀಡಿ ಒಳ್ಳೆಯ ಕೆಲಸ ಮಾಡಿದೆ. ಇನ್ನು ಚಾಮರಾಜ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಗಳಿಸಿರುವ ಹರೀಶ್ ಗೌಡರಿಗೆ ಕ್ಷೇತ್ರದಲ್ಲಿ ಒಳ್ಳೆಯ ಹೆಸರಿದೆ. ಅವರು ಈಗಾಗಲೇ ಒಮ್ಮೆ ವಿಧಾನ ಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಗಮನಾರ್ಹ ಮತಗಳನ್ನು ಗಳಿಸಿದ್ದಾರೆ. ರಾಮದಾಸ್ ಮತ್ತು ವಾಸು ಟಿಕೆಟ್‌ಗೋಸ್ಕರ ಆ ಪಕ್ಷದಿಂದ ಈ ಪಕ್ಷಕ್ಕೆ ಮತ್ತು ಈ ಪಕ್ಷದಿಂದ ಆ ಪಕ್ಷಕ್ಕೆ ಹಾರುತ್ತಿರುವವರಿಗೆ ಒಳ್ಳೆಯ ಸಂದೇಶ ರವಾನಿಸಿದ್ದಾರೆ. ಪ್ರಜಾಪ್ರಭುತ್ವಕ್ಕೆ ಜಯವಾಗಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸಮಾಜಮುಖಿ



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಅಂಬೇಡ್ಕರ್ ಆಶಯ ಆಚರಣೆಗೆ ಬರದಿದ್ದರೆ ಪ್ರಾತಿನಿಧ್ಯ ರಾಜಕಾರಣ ನಿರರ್ಥಕ

ಪ್ರಜಾಪ್ರಭುತ್ವ ಎಂದರೆ ಪ್ರಜೆಗಳ ಸಾಮಾಜಿಕ ಮತ್ತು ಆರ್ಥಿಕ ಬದುಕಿನಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದು ಅಸಮಾನತೆಯನ್ನು ದೂರ ಮಾಡುವ ಒಂದು ಆಡಳಿತಾತ್ಮಕ ವಿಧಾನವೇ ಹೊರತು, ಅದು ಕೇವಲ ಒಂದು ಸರ್ಕಾರಿ ಮಾದರಿಯಲ್ಲ ಎಂಬುದು ಪ್ರಜಾಪ್ರಭುತ್ವವನ್ನು ಕುರಿತ ಅಂಬೇಡ್ಕರ್ ಅವರ ಮತ್ತೊಂದು ದೃಷ್ಟಿಕೋನ. ಆದರೆ ಈಗ ನಡೆಯುತ್ತಿರುವ ಚುನಾವಣಾ ವ್ಯವಹಾರಗಳಲ್ಲಿ ಜನರ ಬದುಕಿನ ಬವಣೆಗಳಿಗೆ, ವ್ಯಕ್ತಿ–ವ್ಯಕ್ತಿಗಳ ನಡುವೆ, ವರ್ಗ–ವರ್ಗಗಳ ನಡುವೆ ಹೆಚ್ಚುತ್ತಿರುವ ಅಸಮಾನತೆಯ ಬಗ್ಗೆ ಯಾವ ಗಂಭೀರವಾದ ಚಿಂತನೆಯಾಗಲಿ–ಚರ್ಚೆಯಾಗಲೀ ನಡೆಯುತ್ತಿಲ್ಲ.

ಚುನಾವಣೆಗಳು ಘೋಷಣೆಯಾದಾಗಿನಿಂದ, ಪಕ್ಷದಿಂದ ಪಕ್ಷಕ್ಕೆ ನಿಷ್ಠೆಯನ್ನು ಬದಲಾಯಿಸುವುದು, ಹಣ, ಪ್ರಭಾವ ಅಥವಾ ತೋಳ್ಬಲವಿದ್ದವರಿಗೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ನೀಡುವುದು ಅಥವಾ ಜಾತಿಯ ಲೆಕ್ಕಾಚಾರ ಹಾಕಿ ಸ್ಪರ್ಧಿಗಳನ್ನು ಆಯ್ಕೆ ಮಾಡಿ, ನೇರವಾಗಿಯೇ ಸಮಾಜದಲ್ಲಿ ವಿಭಜನೆಯನ್ನು ಉಂಟು ಮಾಡುವುದು, ಸಾರ್ವಜನಿಕ ವಲಯದಲ್ಲಿಯೇ ಒಬ್ಬರ ಮೇಲೆ ಮತ್ತೊಬ್ಬರು ಅನೇಕ ಸಂದರ್ಭಗಳಲ್ಲಿ ತೀರಾ ಅನುಚಿತವೆನಿಸುವ ಭಾಷೆಯಲ್ಲಿ ದೋಷಾರೋಪಣೆ ಮಾಡುವುದು–ಇಂಥ ನಡೆವಳಿಕೆಗಳಿಂದ ನಾವು ಸುತ್ತುವರೆಯಲ್ಪಟ್ಟಿದೇವೆ. ಇದೇ ಏನು ಪ್ರಜಾಪ್ರಭುತ್ವ? ಚುನಾವಣಾ ರಾಜಕಾರಣ ಪ್ರಜಾಪ್ರಭುತ್ವದ ಎಲ್ಲ ಆಶಯಗಳನ್ನೂ ಗಾಳಿಗೆ ತೂರುತ್ತಿದೆಯೇ ಎನಿಸದೆ ಹೋಗುವುದಿಲ್ಲ? ಈ ಹೊತ್ತಿನಲ್ಲಿ ಪ್ರಜಾಪ್ರಭುತ್ವದ ಆಶಯಗಳನ್ನು ಕುರಿತು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆಗಳನ್ನು ಮರು–ಮನನ ಮಾಡುವುದು ಬಹು ಅವಶ್ಯ.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಪ್ರಜಾಪ್ರಭುತ್ವವೆಂದರೆ ಅದಕ್ಕೆ ಸಂವಿಧಾನಾತ್ಮಕ ನೈತಿಕತೆ ಇರಬೇಕು ಎಂದು ಹೇಳಿದ್ದನ್ನು ನಾವು ಮೊದಲಿಗೆ ಸ್ಮರಿಸಬೇಕು. ಪ್ರಜಾಪ್ರಭುತ್ವವೆಂದರೆ ಅದೊಂದು ಸರ್ಕಾರದ ಮಾದರಿಯಲ್ಲ, ಸಹಬಾಳ್ವೆ ಮತ್ತು ಅನುಭವಗಳ ಹಂಚಿಕೆಗೆ ದಾರಿ ಮಾಡಿ ಕೊಡುವಂಥ ಸಾಮಾಜಿಕ ಸಂಘಟನೆಯಾಗಿ ಅದು ಕೆಲಸ ಮಾಡಬೇಕಾಗುತ್ತದೆ ಎಂಬುದು ಪ್ರಜಾಪ್ರಭುತ್ವವನ್ನು ಕುರಿತ ಅಂಬೇಡ್ಕರ್ ಅವರ ತಾತ್ವಿಕ ನಿಲುವು. ಆದರೆ ಹಾಗಾಗುತ್ತಿದೆಯೇ? ಸಮಕಾಲೀನ ರಾಜಕಾರಣ ಮೌಲ್ಯಗಳ ಎಲ್ಲೆಗಳನ್ನು ದಾಟಿ ಪ್ರಜಾಪ್ರಭುತ್ವದ ಮೂಲ ಉದ್ದೇಶಗಳಿಗೇ ಭಂಗ ತರುವಂಥ ಹಾದಿಯಲ್ಲಿ ಚಲಿಸುತ್ತಿದೆ.

ಸಾರ್ವಜನಿಕ ಜೀವನದಲ್ಲಿರುವ ಎಲ್ಲರಿಗೂ ವೃತ್ತಿ ಬದ್ಧತೆ ಮತ್ತು ಪಾರದರ್ಶಕತೆ ಇರಬೇಕು. ಇದರಿಂದ ರಾಜಕಾರಣವೇನೂ ಹೊರತಾಗಿಲ್ಲ. ಏಕೆಂದರೆ ಜನಪ್ರತಿನಿಧಿಗಳು ಕಾನೂನುಗಳನ್ನು ರಚಿಸುವವರೂ ಹೌದು, ರಕ್ಷಿಸುವವರೂ ಹೌದು. ಇತ್ತೀಚೆಗೆ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ ಮತ್ತು ಕರ್ನಾಟಕ ಎಲೆಕ್ಷನ್ ವಾಚ್ ಸಂಸ್ಥೆಗಳು ಕೈಗೊಂಡಿರುವ ವಿಶ್ಲೇಷಣಾತ್ಮಕ ಅಧ್ಯಯನದ ಪ್ರಕಾರ ಅಪರಾಧಿ ಹಿನ್ನೆಲೆಯಿರುವ ಅಭ್ಯರ್ಥಿಗಳು, ಅಂತಹ ಯಾವುದೇ ಹಿನ್ನೆಲೆಯಿಲ್ಲದಿರುವ ಅಭ್ಯರ್ಥಿಗಳಿಗಿಂತ ಚುನಾವಣೆಗಳಲ್ಲಿ ಗೆಲ್ಲುವ ಸಾಧ್ಯತೆ ಮೂರು ಪಟ್ಟು ಹೆಚ್ಚಾಗಿದೆ. ಈ ಅಧ್ಯಯನಕ್ಕಾಗಿ ಅವರು ಸಂಪರ್ಕಿಸಿದ್ದ ವಿಧಾನಸಭೆ ಅಥವಾ ಸಂಸತ್ ಚುನಾವಣೆಗಳನ್ನು ಗೆದ್ದಿದ್ದ 801 ಜನಪ್ರತಿನಿಧಿಗಳಲ್ಲಿ ಶೇ.30ರಷ್ಟು ಅಪರಾಧದ ಪ್ರಕರಣಗಳಲ್ಲಿ ಭಾಗಿಗಳಾಗಿದ್ದವರಾದರೆ ಶೇಕಡಾ 18ರಷ್ಟು ಪ್ರತಿನಿಧಿಗಳು ಗಂಭೀರ ಸ್ವರೂಪದ ಆರೋಪಗಳನ್ನು ಎದುರಿಸುತ್ತಿದಂತವರಾಗಿದ್ದರು. ಈ ಜನ ನಾಯಕರು ಎಲ್ಲ ಪ್ರಮುಖ ರಾಷ್ಟ್ರೀಯ ಪಕ್ಷಗಳಲ್ಲೂ ಹಂಚಿಹೋಗಿದ್ದರು ಎಂದು ಕೂಡ ಸಮೀಕ್ಷೆ ತಿಳಿಸಿದೆ.

ಪ್ರಜಾಪ್ರಭುತ್ವ ಎಂದರೆ ಪ್ರಜೆಗಳ ಸಾಮಾಜಿಕ ಮತ್ತು ಆರ್ಥಿಕ ಬದುಕಿನಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದು ಅಸಮಾನತೆಯನ್ನು ದೂರ ಮಾಡುವ ಒಂದು ಆಡಳಿತಾತ್ಮಕ ವಿಧಾನವೇ ಹೊರತು, ಅದು ಕೇವಲ ಒಂದು ಸರ್ಕಾರಿ ಮಾದರಿಯಲ್ಲ ಎಂಬುದು ಪ್ರಜಾಪ್ರಭುತ್ವವನ್ನು ಕುರಿತ ಅಂಬೇಡ್ಕರ್ ಅವರ ಮತ್ತೊಂದು ದೃಷ್ಟಿಕೋನ. ಆದರೆ ಈಗ ನಡೆಯುತ್ತಿರುವ ಚುನಾವಣಾ ವ್ಯವಹಾರಗಳಲ್ಲಿ ಜನರ ಬದುಕಿನ ಬವಣೆಗಳಿಗೆ, ವ್ಯಕ್ತಿ– ವ್ಯಕ್ತಿಗಳ ನಡುವೆ, ವರ್ಗ– ವರ್ಗಗಳ ನಡುವೆ ಹೆಚ್ಚುತ್ತಿರುವ ಅಸಮಾನತೆಯ ಬಗ್ಗೆ ಯಾವ ಗಂಭೀರವಾದ ಚಿಂತನೆಯಾಗಲಿ –ಚರ್ಚೆಯಾಗಲೀ ನಡೆಯುತ್ತಿಲ್ಲ. ಭಾರತ ಜಗತ್ತಿನ ಅತ್ಯಂತ ಅಸಮಾನ ದೇಶಗಳಲ್ಲಿ ಒಂದು, ಇಲ್ಲಿ ತೀವ್ರ ಸ್ವರೂಪದ ಆರ್ಥಿಕ ವಿಭಜನೆ ಕಂಡು ಬರುತ್ತಿದೆ. ಒಂದೆಡೆ ಹೆಚ್ಚುತ್ತಿರುವ ಬಡತನ, ಮತ್ತೊಂದೆಡೆ ಬೆಳೆಯುತ್ತಿರುವ ಪ್ರತಿಷ್ಠಿತ ವರ್ಗ–ಈ ಹೊತ್ತು ಭಾರತದಲ್ಲಿ ಕಾಣುತ್ತಿರುವ ವಿಪರ್ಯಾಸವಿದು. 2022ರ ವಿಶ್ವ ಅಸಮಾನತಾ ವರದಿಯ ಪ್ರಕಾರ ಭಾರತದ ಶೇಕಡಾ 10 ಜನಸಂಖ್ಯೆ ದೇಶದ ಶೇಕಡಾ 57ರಷ್ಟು ಹಾಗೂ ಶೇಕಡಾ 1ರಷ್ಟು ಶೇಕಡಾ 22ರಷ್ಟು ರಾಷ್ಟ್ರೀಯ ಆದಾಯವನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡಿದ್ದಾರೆ ಸಮಾಜದ ತಳ ಸ್ತರಗಳಲ್ಲಿರುವ ಶೇಕಡಾ 50ರಷ್ಟು ಜನಸಂಖ್ಯೆಯ ಪಾಲು ಶೇಕಡಾ 13ಕ್ಕೆ ಇಳಿದಿದೆ.

ಆರ್ಥಿಕ ಉದಾರೀಕರಣದ ಯುಗ ಈ ಶತಮಾನದ ಆದಿ ಭಾಗದಲ್ಲಿ ಆರಂಭವಾದ ಮೇಲಂತೂ ಇಡೀ ಪ್ರಪಂಚದಲ್ಲೇ ಅತ್ಯಂತ ಅಸಮಾನವಾದ ಆರ್ಥಿಕ ವ್ಯವಸ್ಥೆ ಭಾರತದಲ್ಲಿ ಸೃಷ್ಟಿಯಾಯಿತು. ಸಡಿಲವಾದ ಸರ್ಕಾರಿ ನಿಯಂತ್ರಣ, ಶರವೇಗದಲ್ಲಿ ಹೆಚ್ಚಿದ ಖಾಸಗೀಕರಣ ಹಾಗೂ ವ್ಯಾಪಾರೋದ್ಯಮದ ಮೇಲೆ ನವ ಬಂಡವಾಳಶಾಹಿ ವಲಯ ಸಾಧಿಸಿದ ಸ್ವಾಮ್ಯ ಶ್ರೀಮಂತ ವಲಯದ ಸಂಪತ್ತು ಮತ್ತಷ್ಟು ಹೆಚ್ಚಲು ಕಾರಣವಾಯಿತೇ ಹೊರತು ತಳ ಮಧ್ಯಮ ವರ್ಗ ಮತ್ತು ಬಡ ವರ್ಗಗಳ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳಲ್ಲಿ ಯಾವ ಗಮನಾರ್ಹವಾದ ಬದಲಾವಣೆಗಳನ್ನೂ ತರಲಿಲ್ಲ. ಇದೇ ಪರಿಸ್ಥಿತಿ ಕರ್ನಾಟಕವೂ ಸೇರಿದಂತೆ ದೇಶದ ಬಹುತೇಕ ರಾಜ್ಯಗಳಲ್ಲಿ ಮುಂದುವರೆಯುತ್ತಿದೆ. ರಾಜ್ಯ–ರಾಜ್ಯಗಳ ನಡುವೆ, ರಾಜ್ಯದ ವಿವಿಧ ಭಾಗಗಳ ನಡುವೆ ಆಗಾಗಲೇ ಇದ್ದ ಪ್ರಾದೇಶಿಕ ಅಸಮತೋಲನ ಮತ್ತಷ್ಟು ವೃದ್ಧಿಸಿತು. ಕೋವಿಡ್ ಕಾಲದ ಲಾಕ್‌ಡೌನ್ ಆರ್ಥಿಕ ಅಸಮಾನತೆಯನ್ನು ಮತ್ತಷ್ಟು ಅಪಾಯಕಾರಿ ಸ್ಥಿತಿಗೆ ತಳ್ಳಿತು.



ಸಮಾಜದ ಸಂಪನ್ಮೂಲಗಳನ್ನೆಲ್ಲ ತಮ್ಮದಾಗಿಸಿಕೊಂಡಿರುವವರು ಮತ್ತು ಇಂಥ ಅನುಕೂಲಗಳಿಂದ ವಂಚಿತರು–ಇವರ ನಡುವೆ ತಾರತಮ್ಯವಿದ್ದರೆ ಅದು ಪ್ರಜಾಪ್ರಭುತ್ವ ವಿರೋಧಿ ಪ್ರವೃತ್ತಿ ಎಂದು ಪ್ರಜಾಪ್ರಭುತ್ವದ ಹರಿಕಾರರಾದ ಅಂಬೇಡ್ಕರ್ ಅವರೇ ಹೇಳಿದ್ದರು. ಆದರೆ ಕಾಲದಿಂದ ಕಾಲಕ್ಕೆ ಅವರು ಕಂಡ ಸಮ ಸಮಾಜದ ಕನಸುಗಳು, ಸ್ವಾರ್ಥ ರಾಜಕಾರಣದ ಜಾಲದಲ್ಲಿ ಸಿಲುಕಿ ಹಾಕಿಕೊಂಡಿರುವುದು ಈ ದೇಶ ಕಂಡ ಅತ್ಯಂತ ದೊಡ್ಡ ದುರಂತಗಳಲ್ಲಿ ಒಂದು.

ಪ್ರಜಾಸತ್ತಾತ್ಮಕ ಅಧಿಕಾರವನ್ನು ಈಗಾಗಲೇ ಪಡೆದು ಮತ್ತೊಮ್ಮೆ ಅದನ್ನು ಪಡೆಯಲು ತಯಾರಿಗಳನ್ನು ನಡೆಸುತ್ತಿರುವವರಾಗಲೀ, ಹೊಸದಾಗಿ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶಗಳನ್ನು ಪಡೆದುಕೊಂಡಿರುವವರಾಗಲೀ, ರಾಜ್ಯ ಕಂಡ ಆರ್ಥಿಕ ಏಳು–ಬೀಳುಗಳನ್ನು ಸರಿಪಡಿಸಲು ತಮ್ಮ ಯೋಜನೆಗಳೇನು, ಜೀವ ಮತ್ತು ಜೀವನಾಧಾರಗಳನ್ನು ಕಳೆದು ಕೊಂಡವರ ಬದುಕನ್ನು ಮರು ಕಟ್ಟಿ ಕೊಡಲು ತಮ್ಮ ಪಕ್ಷದ ಕಾರ್ಯಸೂಚಿಯೇನು, ಸಮಾಜದ ಎಲ್ಲ ವರ್ಗಗಳ ಜನರನ್ನು ಒಳಗೊಂಡು ಹೇಗೆ ಸ್ಥಳೀಯ ಆದ್ಯತೆಗಳನ್ನು ಗುರುತಿಸಿ ಅವುಗಳನ್ನು ಸಾಧಿಸಲು ತಾವು ಹಾಕಿ ಕೊಂಡಿರುವ ಕಾರ್ಯ ಯೋಜನೆಗಳೇನು,–ಇಂಥ ವಿಚಾರಗಳೆಲ್ಲ ಮತದಾರರ ಮುಂದೆ ಬಹುತೇಕ ಅಭ್ಯರ್ಥಿಗಳು ತರುತ್ತಲೇ ಇಲ್ಲ.

ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವದ ಮತ್ತೊಂದು ಪ್ರಧಾನ ಮುಖವೆಂದರೆ ಆಳುವ ಸರ್ಕಾರವನ್ನು ಸದಾ ಕಾಲ ಜಾಗೃತ ಸ್ಥಿತಿಯಲ್ಲಿ ಇಟ್ಟಿರುವ ಪ್ರಬಲ ವಿರೋಧ ಪಕ್ಷ ವಿರಬೇಕು ಎನ್ನುವುದು. ಆನುವಂಶೀಯ ಅಧಿಕಾರ ಮತ್ತು ನಿರಂಕುಶಾಧಿಕಾರ–ಇವೆರಡೂ ಪ್ರಜಾಪ್ರಭುತ್ವ ವಿರೋಧಿ ಪ್ರವೃತ್ತಿಗಳು ಎಂಬುದು ಅವರ ನಿಲುವು. ಅಧಿಕಾರದಲ್ಲಿರುವವರ ಆತ್ಮಸಾಕ್ಷಿಯಾಗಿ ವಿರೋಧ ಪಕ್ಷ ಕೆಲಸ ಮಾಡಬೇಕು, ಆಡಳಿತದ ಸ್ಥಾನದಲ್ಲಿರುವವರು ತಪ್ಪು ದಾರಿಗಳಲ್ಲಿ ಚಲಿಸಿದಾಗ ಅವರನ್ನು ಪ್ರಶ್ನಿಸಿ ಜನಪರವಾದ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಅವರಿಗೆ ಎಚ್ಚರಿಕೆಯನ್ನು ನೀಡುವುದು ವಿರೋಧ ಪಕ್ಷಗಳ ಜವಾಬ್ದಾರಿ ಎಂದು ಅಂಬೇಡ್ಕರ್ ಅವರು ಹೇಳುತ್ತಿದ್ದರು. ಆದರೆ ಆಳುವ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ಒಂದು ಸ್ಪಷ್ಟ ಅಂತರವೇ ಇಂದು ಇಲ್ಲವಲ್ಲ. ಅಭ್ಯರ್ಥಿಗಳ ಪಟ್ಟಿಗಳು ಪ್ರಕಟವಾದ ದಿನದಿಂದ ನಡೆಯುತ್ತಿರುವ ಪಕ್ಷಾಂತರದ ಪ್ರಕರಣಗಳು, ಎರಡು–ಮೂರು ದಶಕಗಳಿಂದ ತಾವೇ ಅಧಿಕಾರ ಹಿಡಿದಿರುವ ಸ್ಥಾನಗಳನ್ನು ತಮಗೆ ಅಥವಾ ತಮ್ಮ ಕುಟುಂಬದ ಸದಸ್ಯರಿಗೇ ಮೀಸಲಿಡಬೇಕೆಂಬ ಒತ್ತಡ, ಜನ ಸೇವೆಗಿಂತ ಸ್ವಹಿತವೇ ಮುಖ್ಯವೆಂಬ ಧೋರಣೆ– ಇವುಗಳನ್ನೇ ನಾವು ಕಾಣುತ್ತಿರುವುದು. ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲಿವೆ ಪ್ರಬಲ, ಪ್ರಜ್ಞಾವಂತ ವಿರೋಧ ಪಕ್ಷಗಳು ?

ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಲು ಅವಶ್ಯವಾದ ಪರಿಸ್ಥಿತಿಗಳೆಂದರೆ ಜಾಗೃತ ಸಾರ್ವಜನಿಕ ಪ್ರಜ್ಞೆ, ಸ್ವ–ನಿಯಂತ್ರಣ, ಬಹುತ್ವ ತತ್ವಕ್ಕೆ ಗೌರವ ಮತ್ತು ಸಕಾರಾತ್ಮಕ ಟೀಕೆಗಳನ್ನು–ಸಲಹೆಗಳನ್ನು ಸ್ವೀಕರಿಸುವ ಮನೋಭಾವ. ಆದರೆ ಹೆಚ್ಚುತ್ತಿರುವ ಮೂಲಭೂತವಾದ ಮತ್ತು ಜಾತಿ, ಧರ್ಮ, ವರ್ಗ, ಪ್ರಾದೇಶಿಕತೆ, ಭಾಷೆ–ಇವುಗಳ ಹೆಸರಿನಲ್ಲಿ ನಡೆಯುತ್ತಿರುವ ಧ್ರುವೀಕರಣ ಸಮಕಾಲೀನ ರಾಜಕಾರಣವನ್ನು ಅಂಬೇಡ್ಕರ್ ಅವರ ಪ್ರಜಾಪ್ರಭುತ್ವದ ಕಲ್ಪನೆಯಿಂದ ದೂರ–ದೂರ ಕೊಂಡೊಯ್ಯುತ್ತಿದೆ, ಪ್ರಜಾಪ್ರಭುತ್ವ ಸಮಾನತೆಯ ತತ್ವಾಚರಣೆಗಳಿಂದ ದೂರ ಸರಿಯುತ್ತಿದೆ. ಅಂಬೇಡ್ಕರ್ ಅವರ ಪ್ರಜಾಪ್ರಭುತ್ವದ ಆಶಯಗಳನ್ನು ಆಚರಣೆಗಳನ್ನಾಗಿ ಮಾಡಿದರೆ ಮಾತ್ರ ಒಂದು ನಿಜವಾದ ಅರ್ಥದಲ್ಲಿ ಪ್ರಾತಿನಿಧ್ಯ ರಾಜಕಾರಣ ಈ ದೇಶದಲ್ಲಿ ಅಸ್ತಿತ್ವಕ್ಕೆ ಬರುವುದು. ಹಾಗೆ ಆಗದಿದ್ದಲ್ಲಿ ಪ್ರಜಾಪ್ರಭುತ್ವ ಸೂಚ್ಯಂಕದಲ್ಲಿ ಈಗಾಗಲೇ 53ನೇ ಸ್ಥಾನಕ್ಕೆ ಇಳಿದಿರುವ ಭಾರತ ಮತ್ತಷ್ಟು ಕೆಳಗೆ ಇಳಿಯುವುದರಲ್ಲಿ ಸಂದೇಹವಿಲ್ಲ.





ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಕಡಕೊಳ ಗ್ರಾಮದ ದಲಿತ ಸಮುದಾಯದ ಬಿಎಸ್‌ಪಿ ಮುಖಂಡ ಕಾಳಯ್ಯ, ಸೋಮು ಹಾಗೂ (ಬಲಚಿತ್ರ) ಹಿನಕಲ್ ಗ್ರಾಮದ ದಲಿತ ಮುಖಂಡ ಸೋಮು ಕಾಂಗ್ರೆಸ್ ತೊರೆದು ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಜೆಡಿಎಸ್ ಎಸ್‌ಸಿ ವಿಭಾಗದ ಅಧ್ಯಕ್ಷ ಬೆಳವಾಡಿ ಶಿವಕುಮಾರಸ್ವಾಮಿ, ಸಿಂಧುವಳ್ಳಿ ಉಮಾಪತಿ, ಅರಸನಕೆರೆ ಬೀರಲಿಂಗು, ಗುರೂರು ಶಂಕರ್, ನಾಡನಹಳ್ಳಿ ಚಂದ್ರಶೇಖರ್, ಚಿಕ್ಕಕಾನ್ಯ ಶಿವನಂಜು, ಧನಗಳ್ಳಿ ಸ್ವಾಮಿ, ಮುರುಡಗಳ್ಳಿ ಮಹಾದೇವ್, ಹಿನಕಲ್ ರೇವಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಹಾಸನ ಕ್ಷೇತ್ರದಲ್ಲಿ ಸ್ವರೂಪ್ ಪಾಲಿಗೆ ಭವಾನಿ 'ಶಿವಗಾಮಿ'



ಹಾಸನ, ಏ.19– ಹಾಸನ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಸ್ವರೂಪ್ ಪ್ರಕಾಶ್‌ಗೆ ಭವಾನಿ ರೇವಣ್ಣ 'ಶಿವಗಾಮಿ'ಯಂತೆ ರಕ್ಷಣೆಗೆ ನಿಲ್ಲುವ ಮೂಲಕ ಹೊಸ ಸಂಚಲನ ಸೃಷ್ಟಿಸಿದ್ದಾರೆ.

ಹಾಸನದ ಟಿಕೆಟ್‌ಗಾಗಿ ಕೊನೇ ಕ್ಷಣದವರೆಗೂ ಭಾರೀ ಹೋರಾಟ ನಡೆಸಿದ್ದ ಭವಾನಿ ರೇವಣ್ಣ, ಟಿಕೆಟ್ ಸಿಗದ ಕಾರಣಕ್ಕೆ ರೆಬಲ್ ಆಗಿ ಜೆಡಿಎಸ್ ಸೋಲಿಗೆ ಕಾರಣರಾಗುತ್ತಾರೆಂಬ ಚರ್ಚೆ ಜೋರಾಗಿತ್ತು. ಇದನ್ನು ಪುಷ್ಠೀಕರಿಸುವಂತಹ ಬೆಳವಣಿಗೆಯೂ ಆಗಿತ್ತು. ಆದರೆ ಭವಾನಿ ರೇವಣ್ಣ 'ಬಾಹುಬಲಿ' ಚಿತ್ರದ ರಾಜಮಾತೆ ಶಿವಗಾಮಿಯಂತೆ ಹಾಸನ ರಣಕಣಕ್ಕಿಳಿದಿದ್ದಾರೆ.


ಸ್ವರೂಪ್ ನನ್ನ ಮಗನಿದ್ದಂತೆ ಎನ್ನುವ ಮೂಲಕ ನಕಾರಾತ್ಮಕ ಲೆಕ್ಕಾಚಾರಗಳನ್ನು ಬುಡಮೇಲು ಮಾಡಿದ್ದಾರೆ. ಈ ಮೂಲಕ ದೇವೇಗೌಡರ ಕುಟುಂಬ ಹಾಗೂ ಜೆಡಿಎಸ್ ಒಗ್ಗಟ್ಟು ಪ್ರದರ್ಶನವಾದಂತಾಗಿದೆ. ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿದ್ದ ಭವಾನಿ ರೇವಣ್ಣ, ಸ್ವರೂಪ್‌ಗೆ ಸಂಪೂರ್ಣ ಬೆಂಬಲ ಘೋಷಿಸಿದರಲ್ಲದೆ, ಸ್ವರೂಪ್ ಬೇರೆ ಅಲ್ಲ ನನ್ನ ಮಕ್ಕಳು ಬೇರೆ ಅಲ್ಲ. ಹಿಂದೆ ಇದ್ದ ಎಲ್ಲಾ ವಿಚಾರಗಳನ್ನು ಮರೆಯಬೇಕು. ನಾವು ಕ್ಷೇತ್ರದಲ್ಲಿ ಬಿಜೆಪಿಯನ್ನು ಸೋಲಿಸಬೇಕು. ಚುನಾವಣೆಗೆ ಇನ್ನು ಇಪ್ಪತ್ತು ದಿನ ಮಾತ್ರ ಬಾಕಿ ಇದೆ. ಸ್ವರೂಪ್ ಹಾಸನದಲ್ಲಿ ಗೆದ್ದೇ ಗೆಲ್ತಾನೆ. ನಾನು ಪರಿಪೂರ್ಣವಾಗಿ ಆಶೀರ್ವಾದ ಮಾಡುತ್ತಿದ್ದೇನೆ. ಈ ಬಾರಿ ಜೆಡಿಎಸ್ ಗೆಲ್ಲಿಸಲು ನಾವು ರೆಡಿ ಎಂದು ಸ್ವರೂಪ್ ಕೈ ಹಿಡಿದು ಮೇಲಕ್ಕೆತ್ತಿ ಕಾರ್ಯಕರ್ತರ ಹುಮ್ಮಸ್ಸು ಹೆಚ್ಚಿಸಿದರು.

ಪಕ್ಷಕ್ಕಿಂತ ಯಾವುದೇ ನಾಯಕರು ದೊಡ್ಡವರಲ್ಲ. ಪಕ್ಷದ ಹಿತದೃಷ್ಟಿಯಿಂದ ಹಿರಿಯ ನಾಯಕರ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರಬೇಕು. ನಾನೇ ಎಚ್‌ಡಿ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ, ಎಚ್.ಡಿ.ದೇವೇಗೌಡರು ಹಾಗೂ ಪಕ್ಷದ ಹಿತದೃಷ್ಟಿಯಿಂದ ಸ್ವರೂಪ್‌ಗೆ ಜೆಡಿಎಸ್ ಟಿಕೆಟ್ ನೀಡಬೇಕೆಂದು ಕೇಳಿಕೊಂಡಿದ್ದೆ. ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸಿ, ಸ್ವರೂಪ್ ಗೆಲ್ಲಿಸಲು ನಾವೆಲ್ಲಾ ಶ್ರಮಿಸಬೇಕು ಎಂದು ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ಸ್ವರೂಪ್, ಹೆಚ್.ಡಿ.ರೇವಣ್ಣ ಹಾಗೂ ಭವಾನಿ ರೇವಣ್ಣನವರ ಕಾಲು ಮುಟ್ಟಿ ಆಶೀರ್ವಾದ ಪಡೆದರು. ಸಂಸದ ಪ್ರಜ್ವಲ್ ರೇವಣ್ಣನವರೂ ಭಾಗಿಯಾಗಿದ್ದರು.

ಬಿ.ವೈ.ವಿಜಯೇಂದ್ರಗೆ 50,000 ಮತಗಳ ಅಂತರದ ಗೆಲುವು

ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಶಿಕಾರಿಪುರದಿಂದ ಸ್ಪರ್ಧಿಸಿರುವ ತಮ್ಮ ಪುತ್ರ ವಿಜಯೇಂದ್ರ 50 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ಬುಧವಾರ ವಿಶ್ವಾಸ ವ್ಯಕ್ತಪಡಿಸಿದರು.



ಈ ವರ್ಷ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸದಿರಲು ನಿರ್ಧರಿಸಿದ ಮಾಜಿ ಮುಖ್ಯಮಂತ್ರಿ, ಬಿಜೆಪಿಯಿಂದ ಟಿಕೆಟ್ ಪಡೆದಿದ್ದ ತಮ್ಮ ಮಗ ವಿಜಯೇಂದ್ರಗೆ ಅದೇ ಕ್ಷೇತ್ರದಿಂದ ಸ್ಪರ್ಧಿಸಲು ದಾರಿ ಮಾಡಿಕೊಟ್ಟರು. ಎಎನ್‌ಐ ಜೊತೆ ಮಾತನಾಡಿದ ಮಾಜಿ ಮುಖ್ಯಮಂತ್ರಿ, ತಮ್ಮ ಮಗನಿಗೆ ಕ್ಷೇತ್ರದ ಪ್ರತಿಯೊಂದು ಸಮುದಾಯದ ಬೆಂಬಲ ಸಿಗಲಿದೆ. ವಿಜಯೇಂದ್ರ 50 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ. ನಾನು ಸ್ಪರ್ಧಿಸದ ಕಾರಣ ಶಿಕಾರಿಪುರದಿಂದಲೇ ಸ್ಪರ್ಧಿಸಬೇಕು ಎಂದು ಎಲ್ಲರೂ ಒತ್ತಾಯಿಸಿದರು. ಹೀಗಾಗಿ ಈಗ ಬಹುತೇಕ ಎಲ್ಲ ಸಮುದಾಯದಿಂದಲೂ ಸಂಪೂರ್ಣ ಬೆಂಬಲ ಪಡೆಯಲಿದ್ದಾರೆ ಎಂದು ಯಡಿಯೂರಪ್ಪ ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 20 ಗುರುವಾರ 2023

ಸಂಪುಟ: 44 | ಸಂಚಿಕೆ: 5 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಬಸವರಾಜ ಬೊಮ್ಮಾಯಿಯೇ ಮುಖ್ಯಮಂತ್ರಿ

■ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಘೋಷಣೆ ■ಶಿಗ್ಗಾಂವಿಯಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ನಾಮಪತ್ರ ಸಲ್ಲಿಕೆ ■ಶೆಟ್ಟರ್, ಸವದಿ ನಿರ್ಗಮನದ ಹಿನ್ನೆಲೆಯಲ್ಲಿ ವೀರಶೈವ ಲಿಂಗಾಯಿತರ ಆಕ್ರೋಶ ಶಮನಕ್ಕೆ ಯತ್ನ



ಬೆಂಗಳೂರು, ಏ.19(ಕೆಎಂಶಿ)–ಕರ್ನಾಟಕದಲ್ಲಿ ಪಕ್ಷ ಮರಳಿ ಅಧಿಕಾರಕ್ಕೆ ಬಂದರೆ ಬಸವರಾಜ ಬೊಮ್ಮಾಯಿ ಅವರೇ ಮುಂದಿನ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಇಂದಿಲ್ಲಿ ಘೋಷಣೆ ಮಾಡಿದ್ದಾರೆ.

ಮಾಜಿ ಮುಖ್ಯಮಂತ್ರಿ, ಪಕ್ಷದ ಹಿರಿಯ ನಾಯಕ ಜಗದೀಶ್ ಶೆಟ್ಟರ್, ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ್ ಸವದಿ, ಬಿಜೆಪಿ ತೊರೆದ ಬೆನ್ನಲ್ಲೇ ಲಿಂಗಾಯಿತ ಸಮುದಾಯ ಪಕ್ಷದಿಂದ ದೂರ ಸರಿಯಬಹುದೆಂಬ ಮಾಹಿತಿ ಹಿನ್ನೆಲೆಯಲ್ಲಿ ನಡ್ಡಾ ಏಕಾಏಕಿ ಇಂತಹ ಹೇಳಿಕೆ ನೀಡಿದ್ದಾರೆ. ಶೆಟ್ಟರ್ ಪಕ್ಷ ತೊರೆದ ಬೆನ್ನ ಹಿಂದೆಯೇ ಇಂದು ಹುಬ್ಬಳ್ಳಿಗೆ ಆಗಮಿಸಿದ ನಡ್ಡಾ, ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಶಿಗ್ಗಾಂವಿಯಲ್ಲಿ ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಉಪಸ್ಥಿತರಿದ್ದರು. ನಂತರ ಅಲ್ಲಿ ಏರ್ಪಡಿಸಿದ್ದ ಸಾರ್ವಜನಿಕ ಸಮಾರಂಭ ಉದ್ದೇಶಿಸಿ ಮಾತನಾಡುವ ಸಂದರ್ಭ ದಲ್ಲಿ ಮುಂದಿನ ಮುಖ್ಯಮಂತ್ರಿ ಬೊಮ್ಮಾಯಿ ಎಂದು ಹೆಸರಿಸಿದ್ದಾರೆ.

ಬೊಮ್ಮಾಯಿ ಇವತ್ತು ಕೇವಲ ಶಾಸಕ ಸ್ಥಾನಕ್ಕಾಗಿ ನಾಮಪತ್ರ ಸಲ್ಲಿಕೆ ಮಾಡಿಲ್ಲ, ಬದಲಿಗೆ ಈ ರಾಜ್ಯವನ್ನು ಹೊಸ ದಿಕ್ಕಿನತ್ತ ಕೊಂಡೊಯ್ಯುವ ಮಹತ್ವದ ಜವಾಬ್ದಾರಿ ಹೊರಲು ನಾಮಪತ್ರ ಸಲ್ಲಿಕೆ ಮಾಡಿದ್ದಾರೆ ಎಂದಿದ್ದಾರೆ. ಆ ಮೂಲಕ ಇತ್ತೀಚಿನ ಬೆಳ ವಣಿಗೆಗಳಿಂದ ಆಕ್ರೋಶಗೊಂಡಿರುವ ಲಿಂಗಾಯತ ಸಮುದಾಯದ ಆಕ್ರೋಶವನ್ನು ತಣಿಸುವ ವಿಧ್ಯುಕ್ತ ಪ್ರಯತ್ನ ಮಾಡಿದರು.

ಬೊಮ್ಮಾಯಿಗೆ ಮತ್ತೆ ಐದು ವರ್ಷಗಳ ಕಾಲ ಅವಕಾಶ ಸಿಗಲಿದೆ. ಕಾಂಗ್ರೆಸ್ ಅಂದರೆ ಕಮಿಷನ್, ಕಾಂಗ್ರೆಸ್ ಪಕ್ಷ ಅಂದರೆ ಭ್ರಷ್ಟಾಚಾರ ಎಂದವರು ನೇರವಾಗಿ ಆರೋಪಿಸಿದರು.

ರೈಲುಗಳ ಸಂಚಾರ ಹೆಚ್ಚಳ ಆಗಬೇಕಾದರೆ ಬಿಜೆಪಿಗೆ ಮತ ಕೊಡಿ ಎಂದ ಅವರು,ಆಯುಷ್ಮಾನ್ ಭಾರತ್ ಯೋಜನೆಯಡಿ ಬಡವರಿಗೆ ಅನುಕೂಲವಾಗಿದೆ. ಬೊಮ್ಮಾಯಿ ಅವರಿಂದ ರಾಜ್ಯದಲ್ಲಿ ಅಪರಾಧ ಪ್ರಕರಣ ಕಡಿಮೆ ಆಗಿದೆ. ಕರ್ನಾಟಕದಲ್ಲಿರುವ ಅನೇಕ ಕ್ರಿಮಿನಲ್‌ಗಳು ಜೈಲಿನಲ್ಲಿದ್ದಾರೆ ●6ನೇ ಪುಟಕ್ಕೆ

ಉಸಿರಿರುವವರೆಗೂ ಶಿಗ್ಗಾಂವಿ ಸೇವೆ

ಮುಖ್ಯಮಂತ್ರಿ ಬೊಮ್ಮಾಯಿ ಭಾವುಕ ನುಡಿ

ಇದೇ ಸಂದರ್ಭದಲ್ಲಿ ಭಾವೋದ್ವೇಗದಿಂದ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಮತ್ತೆ ನಿಮ್ಮ ಸೇವೆ ಮಾಡುವ ಅವಕಾಶವನ್ನು ನನಗೆ ಕೊಡಿ ಎಂದು ಜನತೆಯಲ್ಲಿ ಮನವಿ ಮಾಡಿಕೊಂಡರು.

ನನ್ನ ಸಾವು ಆದರೆ ಶಿಗ್ಗಾಂವಿಯಲ್ಲೇ ಮಣ್ಣು ಮಾಡಬೇಕು ಎಂದ ಅವರು, ನೀವು ನನಗೆ ಸತತ ಹದಿನೈದು ವರ್ಷ ಆಶೀರ್ವಾದ ಮಾಡಿದ್ದೀರಿ. ಹೀಗಾಗಿ ನನ್ನ ಮತ್ತು ನಿಮ್ಮ ನಡುವೆ ಯಾವ ಶಕ್ತಿಯೂ ಮಧ್ಯೆ ಬರಲು ಸಾಧ್ಯವಿಲ್ಲ ಎಂದರು. ಶಿಗ್ಗಾಂವಿ ಕ್ಷೇತ್ರದ ಜನರ ಪ್ರೀತಿಗೆ ನಾನು ಸೋತಿದ್ದೇನೆ. ನಿಮ್ಮ ಪ್ರೀತಿಗೆ ನಾನು ತಲೆಬಾಗಿದ್ದೇನೆ. ನಿಮ್ಮ ವಿಶ್ವಾಸಕ್ಕೆ ನನ್ನ ಜೀವನದ ಉಸಿರಿರುವವರೆಗೂ ಸೇವೆ ಮಾಡುತ್ತೇನೆ ಅನ್ನೋ ಪ್ರತಿಜ್ಞೆ ಮಾಡುತ್ತೇನೆ ಎಂದರು. ಶಿಗ್ಗಾಂವಿ ಕ್ಷೇತ್ರದಲ್ಲಿ 100ಕ್ಕೂ ಹೆಚ್ಚು ಕೆರೆಗಳನ್ನು ತುಂಬಿಸಿದ್ದೇನೆ. ಪ್ರತಿಯೊಂದು ಮನೆಗೂ ಕುಡಿಯುವ ನೀರು ಪೂರೈಸಲು ಕ್ರಮ ಕೈಗೊಂಡಿದ್ದೇನೆ. ನಾನು ಸಿಎಂ ಆಗಿ ವಿದ್ಯಾರ್ಥಿಗಳು, ರೈತರಿಗೆ ಯೋಜನೆ ಜಾರಿ ಮಾಡಿದ್ದೇನೆ. 15 ವರ್ಷದಲ್ಲಿ 10 ಸಾವಿರ ಮನೆ ಕಟ್ಟಿದ್ದೇನೆ. ಮಳೆ ಬಂದಾಗ 12 ಸಾವಿರ ಮನೆ ಕಟ್ಟಿದ್ದೇನೆ. ರಾಜ್ಯದಲ್ಲಿ 125ಕ್ಕಿಂತ ಹೆಚ್ಚು ಸ್ಥಾನ ಪಡೆದು ಬಿಜೆಪಿ ಮರಳಿ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ಸಿಎಂ ಕ್ಷೇತ್ರ ಬದಲಾವಣೆ ಮಾಡ್ತಾರೆ ಅಂತಾ ಊಹಾಪೋಹ ಇತ್ತು. ನಾನು ಓಡಿ ಹೋಗುವ ಮುಖ್ಯಮಂತ್ರಿ ಅಲ್ಲ. ನನ್ನ ಕೊನೆಯ ಉಸಿರು ಇರುವವರೆಗೂ ನಿಮ್ಮ ಸೇವೆ ಮಾಡುತ್ತೇನೆ ಎಂದರು.

ವರುಣ ಅಭ್ಯರ್ಥಿ ಸಿದ್ದರಾಮಯ್ಯ ನಾಮಪತ್ರ ಸಲ್ಲಿಕೆ

ಇದಕ್ಕೂ ಮುನ್ನ ಅಪಾರ ಸಂಖ್ಯೆ ಅಭಿಮಾನಿಗಳು, ಕಾರ್ಯಕರ್ತರೊಂದಿಗೆ ಸಭೆ, ಮೆರವಣಿಗೆ



ನಂಜನಗೂಡು, ಏ.19–ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಪಾರ ಸಂಖ್ಯೆಯ ಕಾರ್ಯಕರ್ತರು ಹಾಗೂ ಅಭಿಮಾನಿಗಳ ಮೆರವಣಿಗೆ ಯೊಂದಿಗೆ ಇಂದು ನಂಜನಗೂಡಿನ ತಾಲೂಕು ಪಂಚಾಯ್ತಿ ಕಚೇರಿಗೆ ತೆರಳಿ ಚುನಾವಣಾಧಿಕಾರಿ ಗೌರವ್ ಅವರಿಗೆ ನಾಮಪತ್ರ ಸಲ್ಲಿಸಿದರು.

ತಾಲೂಕಿನ ಗೋಳೂರು ಗ್ರಾಮದಲ್ಲಿ ಕಾರ್ಯಕರ್ತರ ಸಭೆ ನಡೆಸಿದ ಬಳಿಕ ನಗರದ ಅಂಬೇಡ್ಕರ್ ವೃತ್ತದವರೆಗೆ ಮೆರವಣಿಗೆಯಲ್ಲಿ ಸಾಗಿ ಬಂದ ಸಿದ್ದ ರಾಮಯ್ಯ, ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ನಂತರ ಕಾರಿ ನಲ್ಲಿ ತಾಲೂಕು ಕಚೇರಿಗೆ ತೆರಳಿ 4 ಸೆಟ್ ಉಮೇದುವಾರಿಕೆ ಸಲ್ಲಿಸಿದರು.

ಮೊದಲ ಸೆಟ್‌ನಲ್ಲಿ ಮಾಜಿ ಸಚಿವ ರಾದ ಸತೀಶ್ ಜಾರಕಿಹೊಳಿ, ಡಾ. ಹೆಚ್.ಸಿ.ಮಹದೇವಪ್ಪ, ಜಮೀರ್ ಅಹ ಮದ್ ಮತ್ತು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ ಕುಮಾರ್ ಜೊತೆಗಿದ್ದರು. ಎರಡನೇ ಸೆಟ್ ಸಲ್ಲಿಸುವ ವೇಳೆ ಶಾಸಕ ಅನಿಲ್ ಚಿಕ್ಕಮಾದು, ಮಾಜಿ ಸಂಸದ ದಿವಂಗತ ಧ್ರುವನಾರಾಯಣ್ ಪುತ್ರ ದರ್ಶನ್, ಮಾಜಿ ಸಚಿವ ದಿವಂಗತ ಹೆಚ್.ಎಸ್. ಮಹದೇವ ಪ್ರಸಾದ್ ಪುತ್ರ ಗಣೇಶ್ ಪ್ರಸಾದ್, 3ನೇ ಸೆಟ್ ವೇಳೆ ಶಾಸಕ ಡಾ. ಯತೀಂದ್ರ, ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ನಾಗೇಶ್ ಅವರಿದ್ದರೆ, 4ನೇ ಸೆಟ್ ಸಲ್ಲಿಸುವಾಗ ಜಿಪಂ ಮಾಜಿ ಅಧ್ಯಕ್ಷ ಬಿ.ಎಂ. ರಾಮು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಗುರುಪಾದಸ್ವಾಮಿ, ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ಪಾಷಾ ಜೊತೆಗಿದ್ದರು. ಇದಕ್ಕೂ ಮುನ್ನ ●6ನೇ ಪುಟಕ್ಕೆ

ಸಿದ್ದರಾಮಯ್ಯ ಉತ್ತರಾಧಿಕಾರಿ ಮೊಮ್ಮಗ ಧವನ್ ರಾಕೇಶ್!

●ಇದು ನನ್ನ ಕೊನೇ ಚುನಾವಣೆ; ಇನ್ನು ಮುಂದೆ ಡಾ.ಯತೀಂದ್ರ, ಧವನ್ ನೋಡ್ಕೋತಾರೆ... ●ನನ್ನ ಸೋಲಿಸಲು ಜೆಡಿಎಸ್–ಬಿಜೆಪಿ ಒಳ ಒಪ್ಪಂದ; ನಾಮಪತ್ರ ಸಲ್ಲಿಕೆಗೆ ಮುನ್ನ ಸಾರ್ವಜನಿಕ ಸಭೆಯಲ್ಲಿ ಭಾಷಣ



ನಂಜನಗೂಡು, ಏ. 19–ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಾವು ಕೊನೆಯ ಬಾರಿಗೆ ನಾಮಪತ್ರ ಸಲ್ಲಿಸುವ ಮುನ್ನ ನಡೆದ ಕಾಂಗ್ರೆಸ್ ಕಾರ್ಯ ಕರ್ತರ ಸಭೆಯಲ್ಲಿ, ಇದು ನನ್ನ ಕೊನೇ ಚುನಾವಣೆ. ಮುಂದೆ ತಮ್ಮ ಮೊಮ್ಮಗ ಧವನ್ ರಾಕೇಶ್ (ರಾಕೇಶ್ ಪುತ್ರ) ನನ್ನ ಉತ್ತರಾಧಿಕಾರಿ ಎಂದು ಘೋಷಿಸುವ ಮೂಲಕ ಅಚ್ಚರಿ ಮೂಡಿಸಿದರು.

ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾಗಿ ನಾಮಪತ್ರ ಸಲ್ಲಿಸುವ ಮುನ್ನ ಇಲ್ಲಿಗೆ ಸಮೀಪದ ಗೋಳೂರು ಗ್ರಾಮ ದಲ್ಲಿ ನಡೆದ ಪಕ್ಷದ ಕಾರ್ಯಕರ್ತರ ಸಭೆ ಉದ್ಘಾಟಿಸಿ ಅವರು ಮಾತನಾಡಿ ದರು. ಅವರು ತಮ್ಮ ಭಾಷಣದಲ್ಲಿ ಇನ್ನು ಮುಂದೆ ನಾನು ಚುನಾವಣೆಗೆ ನಿಲ್ಲುವು ದಿಲ್ಲ. ದಿವಂಗತ ರಾಕೇಶ್ ಪುತ್ರ ಧವನ್ ರಾಕೇಶ್ ಚುನಾವಣೆಗೆ ಬರಲು ಅವನಿಗೆ 25 ವರ್ಷ ಆಗಬೇಕು. ಅದಕ್ಕೆ ಇನ್ನೂ 8 ವರ್ಷ ಬೇಕಾಗಿದೆ. ಅದಕ್ಕೂ ಮುನ್ನ ಅವನು ವಿದ್ಯಾಭ್ಯಾಸ ಮುಗಿಸಬೇಕು ಎಂದರಲ್ಲದೇ ಮುಂದೆ ಡಾ. ಯತೀಂದ್ರ ಮತ್ತು ಧವನ್ ರಾಕೇಶ್ ಇರುತ್ತಾರೆ. ಅವರಿಗೂ ಕೂಡ ನೀವೆಲ್ಲಾ ಆಶೀರ್ವಾದ ಮಾಡಬೇಕು ಎಂದು ಮನವಿ ಮಾಡುವ ಮೂಲಕ 8 ವರ್ಷದ ಬಳಿಕ ಮೊಮ್ಮಗನ ರಾಜಕೀಯ ಪ್ರವೇಶದ ಬಗ್ಗೆ ಈಗಲೇ ಘೋಷಣೆ ಮಾಡಿದರು. ಇದೇ ಮೊದಲ ಬಾರಿಗೆ ತಾತ ಸಿದ್ದರಾಮಯ್ಯ ಜೊತೆ ಸಾರ್ವ ಜನಿಕವಾಗಿ ಕಾಣಿಸಿಕೊಂಡ ಧವನ್, ಕಾರ್ಯಕರ್ತರ ಸಭೆಯ ವೇದಿಕೆಯ ಮೇಲೆ ಸಿದ್ದರಾಮಯ್ಯ ಜೊತೆ ಶ್ವೇತವಸ್ತ್ರ ಧಾರಿಯಾಗಿ ಗಮನ ಸೆಳೆದರು. ವೇದಿಕೆ ಮೇಲೆ ಕಾರ್ಯಕರ್ತರು ಧವನ್‌ಗೆ ಕಾಂಗ್ರೆಸ್ ಶಾಲು ಹೊದಿಸಿದರು. ಮೊಮ್ಮಗನನ್ನು ವೇದಿಕೆ ಮೇಲೆಯೇ ಅಪ್ಪಿ ಮುದ್ದಾಡಿದ ಸಿದ್ದರಾಮಯ್ಯ, ಈತ ತನ್ನ ಪುತ್ರ ರಾಕೇಶ್‌ನ ಮಗ ಎಂದು ಹೆಮ್ಮೆಯಿಂದ ಹೇಳುತ್ತಿದ್ದಂತೆಯೇ ಕರಘೋಷದೊಂದಿಗೆ ಕಾರ್ಯಕರ್ತರು ●6ನೇ ಪುಟಕ್ಕೆ

ನಾಮಪತ್ರ ಸಲ್ಲಿಕೆಗೆ ಇಂದೇ ಕಡೇ ದಿನ

ಮೈಸೂರು, ಏ.19(ಎಸ್‌ಬಿಡಿ)–ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ ನಾಮಪತ್ರ ಸಲ್ಲಿಸಲು ಗುರುವಾರ (ಏ.20) ಕಡೇ ದಿನವಾಗಿದ್ದು, ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಿಂದ ಈವರೆಗೆ 120ಕ್ಕೂ ಹೆಚ್ಚು ಅಭ್ಯರ್ಥಿಗಳಿಂದ 177 ನಾಮಪತ್ರ ಸಲ್ಲಿಕೆಯಾಗಿವೆ.

ಏಪ್ರಿಲ್ 13ರಿಂದ ನಾಮಪತ್ರ ಸಲ್ಲಿಕೆ ಆರಂಭಗೊಂಡಿದ್ದು, ಮೊದಲ ದಿನ 16, ಏ.15ರಂದು 20, ಏ.17ರಂದು 51, ಏ.18ರಂದು 34 ಹಾಗೂ ಇಂದು (ಏ.19) 56 ನಾಮಪತ್ರ ಸಲ್ಲಿಕೆಯಾಗಿವೆ. ಏ.14 ಡಾ.ಬಿ.ಆರ್.ಅಂಬೇಡ್ಕರ್ ದಿನಾಚರಣೆ ಹಾಗೂ ಏ.16 ಭಾನುವಾರ ಸೇರಿ ಈ ಎರಡು ರಜಾ ದಿನಗಳಂದು ನಾಮಪತ್ರ ಸಲ್ಲಿಸಲು ಅವಕಾಶವಿರಲಿಲ್ಲ. ನಾಳೆ(ಏ.20) ಕಡೇ ದಿನವಾಗಿರುವುದರಿಂದ ಹೆಚ್ಚು ನಾಮಪತ್ರ ಸಲ್ಲಿಕೆಯಾಗುವ ಸಾಧ್ಯತೆ ಇದೆ. ಏ.21ಕ್ಕೆ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಉಮೇದುವಾರಿಕೆ ಹಿಂಪಡೆಯಲು ಏ.24ರವರೆಗೆ ಅವಕಾಶವಿರುತ್ತದೆ. ಮೇ10ಕ್ಕೆ ಮತದಾನ ನಡೆಯಲಿದ್ದು, ಮೇ13ಕ್ಕೆ ಫಲಿತಾಂಶ ಪ್ರಕಟವಾಗಲಿದೆ.

ಶೇ.3ರಷ್ಟು ಮಂದಿ ಅಂಚೆ ಮತದಾನಕ್ಕೆ ಸಮ್ಮತಿ

ಮೈಸೂರು, ಏ.19(ಎಸ್‌ಬಿಡಿ)–ಮೈಸೂರು ಜಿಲ್ಲೆಯಲ್ಲಿ ಗುರುತಿಸಲಾಗಿದ್ದ ವಿಶೇಷಚೇತನರು ಹಾಗೂ 80 ವರ್ಷ ಮೇಲ್ಪಟ್ಟ ಹಿರಿಯರಲ್ಲಿ ಶೇ.1–3ರಷ್ಟು ಮಂದಿ ಮಾತ್ರ ಅಂಚೆ ಮೂಲಕ ಮತ ಚಲಾಯಿಸಲು ಬಯಸಿದ್ದಾರೆ.

ಚುನಾವಣಾ ಸಿಬ್ಬಂದಿ ಹಾಗೂ ಅಗತ್ಯ ಸೇವೆಯಲ್ಲಿರುವವರ ಜೊತೆಗೆ ಈ ಬಾರಿ ಮತಗಟ್ಟೆಗೆ ತೆರಳಿ ಮತ ಚಲಾಯಿಸಲಾಗದ ವಿಶೇಷಚೇತನರು ಹಾಗೂ 80 ವರ್ಷ ಮೇಲ್ಪಟ್ಟ ಹಿರಿಯರಿಗೆ ಅಂಚೆ ಮೂಲಕ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ನಿಟ್ಟಿನಲ್ಲಿ ಜಿಲ್ಲೆಯ 11 ●6ನೇ ಪುಟಕ್ಕೆ

ಹೂಟಗಳ್ಳಿ ಕೈಗಾರಿಕಾ ಬಡಾವಣೆಯಲ್ಲಿ ಪಟಾಕಿ ಗೋಡೌನ್‌ನಲ್ಲಿ ಭಾರೀ ಅಗ್ನಿ ಅವಘಡ

●ಲಕ್ಷಾಂತರ ರೂ. ಪಟಾಕಿ ಅಗ್ನಿಗಾಹುತಿ ●ಭಾರೀ ಸ್ಫೋಟದ ನಡುವೆ ಚಿಮ್ಮಿದ ರಾಕೆಟ್‌ಗಳ ಕಂಡು ಆತಂಕದಲ್ಲೇ ಆನಂದಪಟ್ಟ ಜನತೆ







ಮೈಸೂರು, ಏ.19(ಆರ್‌ಕೆ)–ಮೈಸೂರಿನ ಹೂಟಗಳ್ಳಿ ಕೈಗಾರಿಕಾ ಬಡಾವಣೆಯ ಪಟಾಕಿ ಗೋಡೌನ್‌ನಲ್ಲಿ ಬುಧವಾರ ಮಧ್ಯಾಹ್ನ ಬೆಂಕಿ ಅನಾಹುತ ಸಂಭವಿಸಿದ್ದು, ಲಕ್ಷಾಂತರ ರೂ. ಮೌಲ್ಯದ ಪಟಾಕಿ ಅಗ್ನಿಗಾಹುತಿಯಾಗಿದೆ. ಗಂಟೆಗಟ್ಟಲೆ ಕಿವಿ ಗಡಚಿಕ್ಕುವ ಪಟಾಕಿ ಶಬ್ದ ಕೇಳಿ ಸ್ಥಳೀಯರು ಆತಂಕಕ್ಕೊಳಗಾಗಿದ್ದರು. ಗೋಡೌನ್‌ನ ಒಂದು ಭಾಗದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹೆಬ್ಬಾಳು ರಿಂಗ್ ರಸ್ತೆಯಿಂದ ರಾಣಿ ಮದ್ರಾಸ್ ಕಾರ್ಖಾನೆಗೆ ತೆರಳುವ ●6ನೇ ಪುಟಕ್ಕೆ

ಕೈಗಾರಿಕಾ ಪ್ರದೇಶದಲ್ಲಿ ಪಟಾಕಿ ಗೋದಾಮಿಗೆ ಅನುಮತಿ ನೀಡಬಾರದು

ಮೈಸೂರು, ಏ. 19(ಆರ್‌ಕೆ)– ಕೈಗಾರಿಕಾ ಪ್ರದೇಶದಲ್ಲಿ ಪಟಾಕಿ ದಾಸ್ತಾನು ಮಾಡಲು ಅನುಮತಿ ನೀಡಬಾರದೆಂದು ಮೈಸೂರು ಕೈಗಾರಿಕೆಗಳ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್‌ಕುಮಾರ್ ಜೈನ್ ಒತ್ತಾಯಿಸಿದ್ದಾರೆ.

ಮೈಸೂರಿನ ಹೂಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಪಟಾಕಿ ಗೋದಾಮಿಗೆ ಬೆಂಕಿ ತಗುಲಿದ ಹಿನ್ನೆಲೆಯಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಪಟಾಕಿ ಗೋಡೌನ್‌ಗೆ ಬೆಂಕಿ ತಗುಲಿರುವುದರಿಂದ ಪಕ್ಕದಲ್ಲಿರುವ ಕೆರೆಯ ಜಲಚರ ಜೀವಿಗಳಿಗೆ ಹಾನಿಯಾಗಿದೆ. ಅಲ್ಲದೇ ಕೈಗಾರಿಕೆಗಳಿಗೂ ಅಪಾಯ ಸಂಭವಿಸುವ ಸಾಧ್ಯತೆ ಇರುವುದರಿಂದ ಈ ಪ್ರದೇಶದಲ್ಲಿ ಪಟಾಕಿ ಮಳಿಗೆಗಳು, ಗೋದಾಮಿಗೆ ಅನುಮತಿ ನೀಡಬಾರದೆಂದು ಜಿಲ್ಲಾಧಿಕಾರಿಗಳು, ಎಸ್ಪಿ, ಪೊಲೀಸ್ ಆಯುಕ್ತರು, ಅಗ್ನಿಶಾಮಕ ಅಧಿಕಾರಿ, ಗ್ರಾಪಂಗಳಿಗೆ ಸಂಘವು ಮನವಿ ಸಲ್ಲಿಸಿತ್ತು ಎಂದು ತಿಳಿಸಿದ್ದಾರೆ. ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯೂ ಸಹ ಪಟಾಕಿ ಗೋಡೌನ್‌ಗಳಿಗೆ ಅನುಮತಿ ನೀಡಬಾರದೆಂದು ಆಕ್ಷೇಪಣೆ ಸಲ್ಲಿಸಿದ್ದಾಗ್ಯೂ ಅವಕಾಶ ನೀಡಿರುವ ಕಾರಣ ಬೆಂಕಿ ಅನಾಹುತ ಸಂಭವಿಸಿದೆ ಎಂದು ಸುರೇಶ್‌ಕುಮಾರ್ ಜೈನ್ ತಿಳಿಸಿದ್ದಾರೆ.

ಶಾಸಕ ತನ್ವೀರ್, ಹರೀಶ್‌ಗೌಡ, ರವಿಶಂಕರ್ ಸೇರಿ ಬುಧವಾರ 47 ಮಂದಿ ನಾಮಪತ್ರ ಸಲ್ಲಿಕೆ

ಮೈಸೂರು ಜಿಲ್ಲೆಯಲ್ಲಿ ಒಟ್ಟು 146 ಮಂದಿ ನಾಮಪತ್ರ


ತನ್ವೀರ್ ಸೇಠ್


ಕೆ.ಹರೀಶ್‌ಗೌಡ


ಡಿ.ರವಿಶಂಕರ್

ಮೈಸೂರು, ಏ.19(ಆರ್‌ಕೆ)–ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕ ತನ್ವೀರ್ ಸೇಠ್, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಸೇರಿದಂತೆ ಮೈಸೂರು ಜಿಲ್ಲೆಯಲ್ಲಿ ಬುಧವಾರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆ ಬಯಸಿ 47 ಮಂದಿ ನಾಮಪತ್ರ ಸಲ್ಲಿಸಿದ್ದಾರೆ.

ಜಿದ್ದಾಜಿದ್ದಿ ಕಣವಾಗಿರುವ ಪ್ರತಿಷ್ಠಿತ ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಮಾಜಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ನಂಜನಗೂಡು ತಾಲೂಕು ಪಂಚಾಯ್ತಿ ಕಚೇರಿಯಲ್ಲಿ ಚುನಾವಣಾಧಿಕಾರಿಗಳಿಗೆ ನಾಮಪತ್ರ ಸಲ್ಲಿಸಿದರು. ಅದೇ ರೀತಿ ಶಾಸಕ ತನ್ವೀರ್ ಸೇಠ್ ಎನ್.ಆರ್. ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದ ಕಚೇರಿಯಲ್ಲಿ ಚುನಾವಣಾಧಿಕಾರಿಗಳಿಗೆ ನಾಮಪತ್ರ ಸಲ್ಲಿಸಿದ್ದಾರೆ. ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್ ಗೌಡ, ಆಲ್ ಇಂಡಿಯಾ ಮಹಿಳಾ ಎಂಪವರ್‌ಮೆಂಟ್ ಪಾರ್ಟಿಯ ಸಲೀಂ ಅಹಮದ್, ಪಕ್ಷೇತರರಾಗಿ ಹೆಚ್.ಡಿ. ಸಿದ್ದರಾಮು ನಾಮಪತ್ರ ಸಲ್ಲಿಸಿದರೆ, ನರಸಿಂಹರಾಜ ಕ್ಷೇತ್ರದಿಂದ ಆಲ್ ಇಂಡಿಯಾ ಮಹಿಳಾ ಎಂಪವರ್‌ಮೆಂಟ್ ಪಾರ್ಟಿಯ ಕಲೀಲ್ ಉರ್ ರೆಹಮಾನ್ ಷರೀಫ್, ಎಸ್‌ಡಿಪಿಐನ ಕೆಹೆಚ್.ಅಬ್ದುಲ್ ಮಜೀದ್, ಆಮ್ ಆದ್ಮಿ ಪಾರ್ಟಿಯ ಲಕ್ಷ್ಮೀಕಾಂತ ತಿವಾರಿ, ಪಕ್ಷೇತರರಾಗಿ ಎಂ.ಲಿಂಗರಾಜ್, ಜಿ.ಬಿ.ಶಿವಣ್ಣ, ಎಂ.ಎನ್.ನೀಲಕಂಠ ಅವರು ತಮ್ಮ ಉಮೇದುವಾರಿಕೆ ಸಲ್ಲಿಸಿದ್ದಾರೆ.

ವರುಣದಿಂದ ಉತ್ತಮ ಪ್ರಜಾಕೀಯ ಪಕ್ಷದ ಆರ್.ಮಹದೇವ ಸ್ವಾಮಿ, ಪಕ್ಷೇತರರಾಗಿ ಖಲೀಂ ಉಲ್ಲಾ, ವಿ.ಪಿ.ಸುಶೀಲ, ಟಿ.ನರಸೀಪುರದಲ್ಲಿ ಬಿಎಸ್‌ಪಿಯ ಬಿ.ಆರ್.ಪುಟ್ಟಸ್ವಾಮಿ, ಸಮಾಜವಾದಿ ಪಾರ್ಟಿಯ ಎ.ಎನ್.ಶಿವಲಿಂಗಪ್ಪ, ಇಂಡಿಯನ್ ಮೂವ್‌ಮೆಂಟ್ ಪಾರ್ಟಿಯ ಶ್ರೀನಿವಾಸ್, ಪಕ್ಷೇತರರಾಗಿ ಡಿ.ಮಹದೇವ, ಎಂ.ಕುಮಾರ್ ಕ್ರಾಂತಿ, ಚಾಮರಾಜದಿಂದ ಪಕ್ಷೇತರ ಹೆಚ್.ಡಿ.ಸಿದ್ದರಾಜು, ಕೃಷ್ಣರಾಜದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸೋಮವಾರ ನಾಮಪತ್ರ ಸಲ್ಲಿಸಿದ್ದ ಎಂ.ಕೆ.ಸೋಮಶೇಖರ್ ಬುಧವಾರ ಮತ್ತೊಂದು ಸೆಟ್ ನಾಮಪತ್ರ ಸಲ್ಲಿಸಿದರು. ಆಮ್ ಆದ್ಮಿ ಪಾರ್ಟಿಯ ವೈ. ಜಯಶ್ರೀ, ಪಕ್ಷೇತರರಾಗಿ ಎಸ್.ಪ್ರಕಾಶ್ ಪ್ರಿಯದರ್ಶನ, ಹೆಚ್.ಪಿ.ಉದಯ ಶಂಕರ್ ಅವರು ಉಮೇದುವಾರಿಕೆ ಸಲ್ಲಿಸಿದ್ದಾರೆ. ಚಾಮುಂಡೇಶ್ವರಿಯಿಂದ ಕರ್ನಾಟಕ ಪ್ರಜಾಪಾರ್ಟಿಯ ಬಿ.ಶಿವಣ್ಣ, ಉತ್ತಮ ಪ್ರಜಾಕೀಯ ಪಾರ್ಟಿಯ ಎಸ್.ಹರೀಶ್, ಸ್ವತಂತ್ರ ಅಭ್ಯರ್ಥಿಗಳಾಗಿ ಬಿ.ಪ್ರಕಾಶ್, ಎಂ.ನಾಗರಾಜು, ಎಂ. ರಂಗಸ್ವಾಮಿ, ●6ನೇ ಪುಟಕ್ಕೆ

ಮಂಡ್ಯ: ಬುಧವಾರವೂ ನಾಮಪತ್ರ ಸಲ್ಲಿಕೆ ಮುಂದುವರಿಕೆ

ನರೇಂದ್ರಸ್ವಾಮಿ, ಮುನಿರಾಜು, ಉದಯ್ ಉಮೇದುವಾರರಾಗಿ ಕಣಕ್ಕೆ







ಮಂಡ್ಯ ಜಿಲ್ಲೆಯ ಮಳವಳ್ಳಿ ಕ್ಷೇತ್ರದಲ್ಲಿ ಪಿ. ನರೇಂದ್ರಸ್ವಾಮಿ, ಮುನಿರಾಜು ಹಾಗೂ ಮದ್ದೂರಿನಲ್ಲಿ ಕದಲೂರು ಉದಯ್ ನಾಮಪತ್ರ ಸಲ್ಲಿಸಿದರು.

ಮಂಡ್ಯ, ಏ.19– ರಾಜ್ಯ ಸಾರ್ವತ್ರಿಕ ವಿಧಾನಸಭಾ ಚುನಾವಣೆ ಹಿನ್ನಲೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ರಂಗೇರಿರುವ ನಾಮ ಪತ್ರ ಸಲ್ಲಿಕೆಯ ಭರಾಟೆ ಬುಧವಾರವೂ ಮುಂದುವರೆದಿದ್ದು, ಮಳವಳ್ಳಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಪಿ.ಎಂ. ನರೇಂದ್ರಸ್ವಾಮಿ, ಬಿಜೆಪಿ ಅಭ್ಯರ್ಥಿಯಾಗಿ ಮುನಿರಾಜು ಹಾಗೂ ಮದ್ದೂರು ಕಾಂಗ್ರೆಸ್ ಅಭ್ಯರ್ಥಿ ಯಾಗಿ ಕದಲೂರು ಉದಯ್ ನಾಮಪತ್ರ ಸಲ್ಲಿಕೆ ಮಾಡಿದರು.

ನರೇಂದ್ರಸ್ವಾಮಿ: ಮಳವಳ್ಳಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಮಾಜಿ ಸಚಿವ ಪಿ.ಎಂ ನರೇಂದ್ರಸ್ವಾಮಿ ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ಅಪಾರ ಬೆಂಬಲಿಗರೊಂದಿಗೆ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಸುವ ಹಿನ್ನೆಲೆಯಲ್ಲಿ ಪಿ.ಎಂ.ನರೇಂದ್ರಸ್ವಾಮಿ ಮನೆದೇವರು ಮೂಡುಕುತೊರೆ ಮಲ್ಲಿಕಾರ್ಜುನಸ್ವಾಮಿ, ಮಾರೇಹಳ್ಳಿ ನರಸಿಂಹಸ್ವಾಮಿ ಬಸ್ ನಿಲ್ದಾಣದ ಮಸೀದಿ, ದಂಡಿನಮಾರಮ್ಮ ಹಾಗೂ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಕುಟುಂಬ ಸಮೇತ ವಿಶೇಷವಾಗಿ ಪೂಜೆ ಸಲ್ಲಿಸಿ ನಮಿಸಿದರು. ಬೆಳಗ್ಗೆ 10.30ರ ಸಮಯಕ್ಕೆ ತಾಲೂಕು ಕಚೇರಿಗೆ ತೆರಳಿದ ಪಿ.ಎಂ ನರೇಂದ್ರಸ್ವಾಮಿ ಪತ್ನಿ ಶಶಿಕಲಾ, ಮಾಜಿ ಸಚಿವರಾದ ಚಲುವರಾಯಸ್ವಾಮಿ, ವಿಧಾನಪರಿಷತ್ ಸದಸ್ಯರಾದ ಮಧುಜಿ ಮಾದೇಗೌಡ, ದಿನೇಶ್ ಗೂಳಿ ಗೌಡ, ಮಾಜಿ ವಿಧಾನಪರಿಷತ್ ಸದಸ್ಯ ಜಿ.ರಾಮಕೃಷ್ಣ, ಎಐಸಿಸಿ ಸದಸ್ಯ ಸಿದ್ದೇಗೌಡ, ತಾ.ಪಂ ಮಾಜಿ ಅಧ್ಯಕ್ಷ ನಾಗೇಶ್, ಪುರಸಭ ಮಾಜಿ ಅಧ್ಯಕ್ಷ ದೊಡ್ಡಯ್ಯ, ಜಿಪಂ ಮಾಜಿ ಸದಸ್ಯ ವಿಶ್ವಾಸ್, ಟಿಎಲ್ ನಾಗರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದೇವರಾಜು ಜೊತೆಗೂಡಿ ಮೂರು ನಾಮಪತ್ರಗಳನ್ನು ಚುನಾವಣಾ ಅಧಿಕಾರಿ ಮಲ್ಲಿಕಾರ್ಜುನ ಅವರಿಗೆ ನಾಮಪತ್ರ ಸಲ್ಲಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಪಿ.ಎಂ ನರೇಂದ್ರಸ್ವಾಮಿ ನಾಮಪತ್ರ ಸಲ್ಲಿಸಿದ ನಂತರ ಮಾತನಾಡಿ, ಕಾಂಗ್ರೆಸ್ ನಾಯಕರ ನೇತೃತ್ವದಲ್ಲಿ ಮೂರು ನಾಮಪತ್ರಗಳನ್ನು ಸಲ್ಲಿಸಲಾಗಿದೆ, ತನ್ನ ಅಧಿಕಾರದ ಅವಧಿಯಲ್ಲಿ ಸಾವಿರಾರು ಕೋಟಿ ಅನುದಾನವನ್ನು ತಂದು ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗಿತ್ತು, ಕಳೆದ ಅವಧಿಯಲ್ಲಿ ತಂದಿರುವ ಹಲವು ಯೋಜನೆಗಳು ನೆಲಕಚ್ಚಿವೆ ಜೊತೆಗೆ ಅಭಿವೃದ್ಧಿ ಎಂಬುವುದು ಮರೀಚಿಕೆಯಾಗಿದ್ದು, ಕ್ಷೇತ್ರದ ಮತದಾರರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲಿದ್ದಾರೆಂದು ವಿಶ್ವಾಸ ವ್ಯಕ್ತಪಡಿಸಿದರು.

ಮುನಿರಾಜು: ಮಳವಳ್ಳಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಜಿ.ಮುನಿರಾಜು ಅಪಾರ ಸಂಖ್ಯೆಯ ಅಭಿಮಾನಿಗಳೊಂದಿಗೆ ತಾಲೂಕು ಕಚೇರಿಯಲ್ಲಿ ಬುಧವಾರ ನಾಮಪತ್ರ ಸಲ್ಲಿಸಿದರು. ಇದಕ್ಕೂ ಮೊದಲು ಪಟ್ಟಣದ ಪಟ್ಟಲದಮ್ಮ ದೇವಸ್ಥಾನದ ಆವರಣದಿಂದ ತಮ್ಮ ಬೆಂಬಲಿಗ ರೊಡನೆ ಪಟ್ಟಣದಲ್ಲಿ ಮೆರವಣಿಗೆ ಮಾಡಿ ತಾಲೂಕು ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಜಿ.ಮುನಿರಾಜು, ಕೇಂದ್ರದ ನರೇಂದ್ರ ಮೋದಿ ಮತ್ತು ರಾಜ್ಯದ ಬಸವರಾಜ ಬೊಮ್ಮಾಯಿ ಸರ್ಕಾರದ ಜನಪರ ಯೋಜನೆಗಳೇ ಈ ಬಾರಿ ನಮಗೆ ಗೆಲುವಿನ ಶ್ರೀರಕ್ಷೆಯಾಗಿದೆ, ಮಳವಳ್ಳಿ ಕ್ಷೇತ್ರದ ಅಭಿವೃದ್ಧಿಗಾಗಿ ಮತದಾರರು ಈ ಬಾರಿ ನಮಗೊಂದು ಅವಕಾಶ ಮಾಡಿಕೊಡುತ್ತಾರೆ ಎಂಬ ವಿಶ್ವಾಸ ನನಗಿದೆ ಎಂದರು.

ಮೆರವಣಿಗೆ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಉಮೇಶ್, ಪುರಸಭೆ ಸದಸ್ಯ ಹಾಗೂ ಮಂಡಲದ ಅಧ್ಯಕ್ಷ ಕೃಷ್ಣ, ಮುಖಂಡರಾದ ಕೆ.ಸಿ. ನಾಗೇಗೌಡ, ಮಡಿವಾಳ ಸಮುದಾಯ ಪ್ರಸನ್ನ ಹಲವರು ಪಾಲ್ಗೊಂಡಿದ್ದರು.

ಕದಲೂರು ಉದಯ್: ಮದ್ದೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಎಂ.ಉದಯ್ ನಾಮಪತ್ರ ಸಲ್ಲಿಸಿದರು. ಮದ್ದೂರು ಪಟ್ಟಣದ ಐತಿಹಾಸಿಕ ಹೊಳೆ ಆಂಜನೇಯಸ್ವಾಮಿ, ಶ್ರೀ ಉಗ್ರನರಸಿಂಹ ಸ್ವಾಮಿ ಮತ್ತು ಮದ್ದೂರಮ್ಮ ದೇವಾಲಯದಲ್ಲಿ ಪತ್ನಿಯೊಡನೆ ಪೂಜೆ ಸಲ್ಲಿಸಿದ ಕೆ.ಎಂ.ಉದಯ್ ತೆರೆದ ವಾಹನದಲ್ಲಿ ಕಾಂಗ್ರೆಸ್ ಮುಖಂಡ ರೊಡನೆ ಮೆರವಣಿಗೆ ತೆರಳಿ ತಾಲೂಕು ಕಚೇರಿಯಲ್ಲಿ ಚುನಾವಣಾಧಿಕಾರಿ ಆರ್. ನಾಗರಾಜು ಅವರಿಗೆ ನಾಮಪತ್ರ ಸಲ್ಲಿಸಿದರು.

ಮಾಜಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ದಿನೇಶ್ ಗೂಳೀಗೌಡ, ಮಧು.ಜಿ.ಮಾದೇಗೌಡ, ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್ ನೇತೃತ್ವದಲ್ಲಿ ಅಭ್ಯರ್ಥಿ ಕದಲೂರು ಉದಯ್ ಚುನಾವಣಾಧಿಕಾರಿಗೆ ತಮ್ಮ ಉಮೇದುವಾರಿಕೆ ಸಲ್ಲಿಸಿದರು.

ಬಳಿಕ ಮಾತನಾಡಿದ ಅಭ್ಯರ್ಥಿ ಕೆ.ಎಂ.ಉದಯ್, ಸಾಮಾನ್ಯ ರೈತ ಕುಟುಂಬದಿಂದ ಬಂದಿರುವ ನಾನು ಜಿಲ್ಲೆಯ ಮತ್ತು ರಾಜ್ಯದ ಕಾಂಗ್ರೆಸ್ ನಾಯಕರ ಆಶೀರ್ವಾದದಿಂದ ಮದ್ದೂರು ಕ್ಷೇತ್ರದ ಅಭ್ಯರ್ಥಿಯಾಗಿದ್ದು ಸ್ಥಳೀಯ ಜನರ ಕೃಪಾಶೀರ್ವಾದ ನನ್ನ ಮೇಲಿದ್ದು ಮುಂದಿನ ದಿನಗಳಲ್ಲಿ ತನು, ಮನ, ಧನ ಅರ್ಪಿಸಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಮುಂದಿನ ದಿನಗಳಲ್ಲೂ ಇದೇ ರೀತಿಯ ಸಹಕಾರ, ಪ್ರೋತ್ಸಾಹ ತಮ್ಮ ಮೇಲಿ ರಲೆಂದು ನೆರೆದಿದ್ದ ಜನರತ್ತ ನಮಸ್ಕರಿಸಿ ಮನವಿ ಮಾಡಿದರು.

ಇಂದು ಹೆಚ್ಡಿಕೆ ನಾಮಪತ್ರ ಸಲ್ಲಿಕೆ? ಸುಮಲತಾ ಕೂಡಾ ಸಜ್ಜು?

ಮಂಡ್ಯ, ಏ.19– ರಾಮಚಂದ್ರಗೆ ಟಿಕೆಟ್ ಘೋಷಣೆಯಾಗಿರುವ ಹಿನ್ನಲೆಯಲ್ಲಿ ಹಾಲಿ ಶಾಸಕ ಎಂ.ಶ್ರೀನಿವಾಸ್ ಬಂಡಾಯ ಎದ್ದಿದ್ದು, ಗುರುವಾರ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ.



ಹಾಗೊಂದು ವೇಳೆ ಎರಡು ಬಣವನ್ನು ಸಮಾಧಾನ ಪಡಿಸಲು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅನಿರೀಕ್ಷಿತವಾಗಿ ನಾಮಪತ್ರ ಸಲ್ಲಿಕೆ ಮಾಡುವ ಸಾಧ್ಯತೆ ಇದ್ದು, ಈ ನಿಟ್ಟಿನಲ್ಲಿ ಹೆಚ್ಡಿಕೆ ಗುರುವಾರ ಮಂಡ್ಯಗೆ ಆಗಮಿಸಲಿದ್ದಾರೆ. ಇದರ ಸುಳಿವು ಅರಿತ ಸಂಸದೆ ಸುಮಲತಾ ಅಂಬರೀಷ್, ಮಧ್ಯಾಹ್ನ 2.30ಕ್ಕೆ ನಾಮಪತ್ರ ಸಲ್ಲಿಕೆಯಾಗುವ ತಾಲೂಕು ಕಚೇರಿಯಲ್ಲಿ ಸಮಯಾವಕಾಶ ನಿಗದಿ ಮಾಡಿಕೊಂಡಿದ್ದಾರೆ.

ಹೆಚ್ಡಿಕೆ ಮಂಡ್ಯದಿಂದ ಸ್ಪರ್ಧೆ ಮಾಡಲಿದ್ದಾರೆ ಎಂಬ ವದಂತಿ ಕಳೆದೊಂದು ವಾರದಿಂದ ಜಿಲ್ಲೆಯಲ್ಲಿ ಹರಿದಾಡುತ್ತಿದೆ. ಇದಕ್ಕೆ ಪೂರಕ ಎಂಬಂತೆ ಶಾಸಕ ಸಿ.ಎಸ್.ಪುಟ್ಟರಾಜು ಹಾದಿಯಾಗಿ ಹಲವರು ಬಹಿರಂಗ ಆಹ್ವಾನ ನೀಡಿದ್ದು, ಇದೇ ಸಂದರ್ಭದಲ್ಲಿ ಮಂಡ್ಯ ಟಿಕೆಟ್ ಸಹ ಬದಲಾವಣೆಯಾಗಿದೆ. ಹಾಗೊಂದು ವೇಳೆ ಹಾಲಿ ಶಾಸಕ ಶ್ರೀನಿವಾಸ್ ಬಂಡಾಯ ಹೆಚ್ಚಾದರೆ, ಬಂಡಾಯವನ್ನು ಶಮನಗೊಳಿಸಿ, ಎರಡೂ ಬಣವನ್ನು ಸಮಾಧಾನ ಪಡಿಸಲು ಸ್ವತಃ ತಾವೇ ಅಖಾಡಕ್ಕೆ ಇಳಿಯುವ ಸಾಧ್ಯತೆ ಇದೆ.



ಮಂಡ್ಯ ಜಿಲ್ಲೆಗೆ ಆಗಮಿಸುತ್ತಿರುವ ಹೆಚ್ಡಿಕೆ, ನಾಗಮಂಗಲದ ಆದಿಚುಂಚನಗಿರಿಯಲ್ಲಿ ಅಮಾವಾಸ್ಯೆ ಪೂಜೆ ಮುಗಿಸಿ, ಮದ್ದೂರಿನಲ್ಲಿ ಎಸ್.ಎಂ.ಕೃಷ್ಣ ತಮ್ಮನ ಮಗ ಗುರುಚರಣ್‌ರನ್ನು ಜೆಡಿಎಸ್‌ಗೆ ಸೇರ್ಪಡೆ ಕಾರ್ಯಕ್ರಮ ಮುಗಿಸಿಕೊಂಡು, ನೇರ ಮಂಡ್ಯ ನಗರಕ್ಕೆ ಆಗಮಿಸಲಿದ್ದಾರೆ. ಈಗಾಗಲೇ ಹೆಚ್ಡಿಕೆ, ಮಂಡ್ಯದ ಎಚ್.ಡಿ.ಎಫ್.ಸಿ. ಬ್ಯಾಂಕ್‌ನಲ್ಲಿ ಖಾತೆ ಸಹ ತೆರೆದಿದ್ದು, ಗುರುವಾರ ಮಧ್ಯಾಹ್ನ 3 ಗಂಟೆಯವರೆಗೂ ಹೆಚ್ಡಿಕೆ ನಡೆಯ ಬಗ್ಗೆ ಭಾರೀ ಕುತೂಹಲವಿದೆ.

ಈ ನಡುವೆ ಸಂಸದೆ ಸುಮಲತಾ ಅಂಬರೀಷ್ ಸಹ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಚುನಾವಣಾಧಿಕಾರಿಗಳನ್ನು ಭೇಟಿ ಮಾಡಲು ಮಧ್ಯಾಹ್ನ 2.30ಕ್ಕೆ ಸಮಯ ಕೇಳಿದ್ದು, ಅವರು ಸಹ ಈಗಾಗಲೇ ಬ್ಯಾಂಕ್ ಆಫ್ ಬರೋಡಾದಲ್ಲಿ ಖಾತೆ ತೆರೆದು ನಾಮಪತ್ರ ಸಲ್ಲಿಕೆಗೆ ಸಿದ್ಧತೆ ನಡೆಸಿದ್ದಾರೆ ಎನ್ನಲಾಗಿದೆ. ಒಂದು ವೇಳೆ ಹೆಚ್ಡಿಕೆ ಮಂಡ್ಯದಿಂದ ನಾಮ ಪತ್ರ ಸಲ್ಲಿಸಿದರೆ, ಬಿಜೆಪಿ ಅಭ್ಯರ್ಥಿಯಾಗಿ ಸುಮಲತಾ ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ.

ಜೆಡಿಎಸ್ ಟಿಕೆಟ್ ಬದಲು: ರಾಮಚಂದ್ರಗೆ ಮಣೆ

ಮಂಡ್ಯ, ಏ.19– ಮಹತ್ವದ ಬೆಳವಣಿಗೆಯಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದ ಟಿಕೆಟ್ ಬದಲಾವಣೆಯಾಗಿದ್ದು, ಘೋಷಿತ ಅಭ್ಯರ್ಥಿ ಹಾಲಿ ಜೆಡಿಎಸ್ ಶಾಸಕ ಎಂ.ಶ್ರೀನಿವಾಸ್‌ಗೆ ಟಿಕೆಟ್ ನೀಡದೇ ಮನ್‌ಮುಲ್ ಅಧ್ಯಕ್ಷ ಬಿ.ಆರ್. ರಾಮಚಂದ್ರಗೆ ಬಿ.ಫಾರಂ ನೀಡಲಾಗಿದೆ.

ಕಳೆದ ಮೂರು ತಿಂಗಳ ಹಿಂದೆ ಮೊದಲ ಪಟ್ಟಿ ಘೋಷಣೆಯಾಗಿದ್ದಾಗಲೇ ಎಂ.ಶ್ರೀನಿವಾಸ್‌ಗೆ ಟಿಕೆಟ್ ಘೋಷಿಸಲಾಗಿತ್ತು. ಆದರೆ ಶ್ರೀನಿವಾಸ್ ಅವರ ಅನಾರೋಗ್ಯ, ಹಾಗೂ ಆಕಾಂಕ್ಷಿಗಳು ಹೆಚ್ಚಾಗಿದ್ದರಿಂದ ಶ್ರೀನಿವಾಸ್‌ಗೆ ಟಿಕೆಟ್ ತಪ್ಪಿಸಿ ರಾಮಚಂದ್ರಗೆ ಟಿಕೆಟ್ ನೀಡಲಾಗಿದೆ. ರಾಮಚಂದ್ರ ಮಂಡ್ಯ ಕ್ಷೇತ್ರದ ಮೇಲೆ ಕಣ್ಣಿಟ್ಟು, ಹಲವು ಸಮಾಜ ಸೇವೆ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರು. ನಿರೀಕ್ಷೆಯಂತೆ ಅವರಿಗೆ ಬಿ.ಫಾರಂ ಅನ್ನು ಸ್ವತಃ ಮಾಜಿ ಪ್ರಧಾನಿ ದೇವೇಗೌಡರೇ ನೀಡಿದ್ದು, ಗುರುವಾರ ನಾಮಪತ್ರ ಸಲ್ಲಿಸಲಿದ್ದಾರೆ.

ಶ್ರೀನಿವಾಸ್ ಆಕ್ರೋಶ

ಮಂಡ್ಯ: ಮಂಡ್ಯ ವಿಧಾನಸಭಾ ಕ್ಷೇತ್ರದ ಟಿಕೆಟ್ ಮಾರಾಟವಾಗಿದ್ದು, ಮಂಡ್ಯದವರೇ ಅಲ್ಲದ ಮೇಲುಕೋಟೆ ಕ್ಷೇತ್ರದ ರಾಮಚಂದ್ರಗೆ ಟಿಕೆಟ್ ನೀಡಲಾಗಿದೆ. ನಾನು ಸಮರ್ಥನಿಲ್ಲ ಎಂದು ನಾಯಕರೇ ನಿರ್ಧಾರ ಮಾಡಿದ್ದು, ನನ್ನ ಶಕ್ತಿ ತೋರಿಸುವೆ ಎಂದು ಟಿಕೆಟ್ ವಂಚಿತ ಹಾಲಿ ಶಾಸಕ ಎಂ.ಶ್ರೀನಿವಾಸ್ ಜೆಡಿಎಸ್ ವಿರುದ್ಧ ಕಿಡಿಕಾರಿದ್ದಾರೆ.

ಈ ನಿರ್ಧಾರವನ್ನು ನಾನು ನಿರೀಕ್ಷೆ ಮಾಡಿರಲಿಲ್ಲ. ನನಗೆ ಟಿಕೆಟ್ ಕೊಡಲ್ಲ ಎಂದ ಮೇಲೆ ಮಂಡ್ಯದವರೇ ಆಗಿದ್ದ ಟಿಕೆಟ್ ಆಕಾಂಕ್ಷಿಗಳಿಗೆ ನೀಡಬೇಕಿತ್ತು. ಆದರೆ ಮೇಲುಕೋಟೆ ಕ್ಷೇತ್ರದ ರಾಮಚಂದ್ರಗೆ ಮಣೆ ಹಾಕಿರುವುದು ಏತಕ್ಕೆ ಎಂದು ಪ್ರಶ್ನಿಸಿದರು. ಸ್ವಾಭಿಮಾನಿ ಮಂಡ್ಯ ಹೆಸರಲ್ಲಿ ನಾನು ಅಥವಾ ನನ್ನ ಬೆಂಬಲಿಗರೊಬ್ಬರು ನಾಮಪತ್ರ ಸಲ್ಲಿಸ ಲಿದ್ದು, ಜೆಡಿಎಸ್ ಅಭ್ಯರ್ಥಿಯನ್ನು ಸೋಲಿಸುವುದೇ ನನ್ನ ಗುರಿ ಎಂದರು.

ಇಂದು ಕೆ.ಆರ್. ಪೇಟೆಗೆ ಡಿಕೆಶಿ

ಕೆ.ಆರ್.ಪೇಟೆ, ಏ.19– ಕರ್ನಾಟಕ ಪದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಏ.20ರಂದು ಬೆಳಗ್ಗೆ 11 ಗಂಟೆಗೆ ಕೆ.ಆರ್.ಪೇಟೆಗೆ ಆಗಮಿಸುತ್ತಿದ್ದು, ಕಾರ್ಯಕರ್ತರ ಸಮಕ್ಷಮದಲ್ಲಿ ಪಟ್ಟಣದಲ್ಲಿ ರೋಡ್ ಶೋ ನಡೆಸಿ ಕಾಂಗ್ರೆಸ್ ಅಭ್ಯರ್ಥಿ ಬಿ.ಎಲ್. ದೇವರಾಜು ಜೊತೆ ನಾಮಪತ್ರ ಸಲ್ಲಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಅಧ್ಯಕ್ಷರಾದ ಸಿ.ಡಿ.ಗಂಗಾಧರ್ ತಿಳಿಸಿದರು.



ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದು ನಿಶ್ಚಿತ: ಚಲುವರಾಯಸ್ವಾಮಿ



ನಾಗಮಂಗಲ, ಏ.19– ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಅಗತ್ಯ ಮೂಲಸೌಕರ್ಯ ಮತ್ತು ಸಾಮಾಜಿಕ ನ್ಯಾಯ ಒದಗಿಸುವ ಯಾವುದಾದರೂ ಸರ್ಕಾರವಿದ್ದರೆ ಅದು ಕಾಂಗ್ರೆಸ್ ನೇತೃತ್ವದ ಸರ್ಕಾರ ಮಾತ್ರ ಎಂದು ಎನ್.ಚಲುವರಾಯಸ್ವಾಮಿ ತಿಳಿಸಿದರು.

ಜೆಡಿಎಸ್ ಪಕ್ಷ ತೊರೆದ ಹಲವು ಮುಖಂಡರು ಹಾಗೂ ಕಾರ್ಯಕರ್ತರನ್ನು ಕಾಂಗ್ರೆಸ್‌ಗೆ ಸೇರ್ಪಡೆ ಮಾಡಿಕೊಂಡ ನಂತರ ಅವರು ಮಾತನಾಡಿದರು.

ರಾಜ್ಯದಲ್ಲಿ ಗ್ರಾಮೀಣ ಪ್ರದೇಶದ ಯಾವುದೇ ವರ್ಗದ ಜನರು ಹಸಿವಿನಿಂದ ಬಳಲಬಾರದು. ಹಳ್ಳಿಗಾಡಿನ ಮಕ್ಕಳು ಶೈಕ್ಷಣಿಕವಾಗಿ ಪ್ರಗತಿ ಸಾಧಿಸಬೇಕೆಂಬ ಉದ್ದೇಶದಿಂದ ಈ ಹಿಂದಿನ ಕಾಂಗ್ರೆಸ್ ಸರ್ಕಾರ ಅನ್ನಭಾಗ್ಯ, ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ, ಕ್ಷೀರಭಾಗ್ಯ, ಮೈತ್ರಿ ಯೋಜನೆ, ಮನಸ್ವಿನಿ ಯೋಜನೆ, ಕೃಷಿ ಭಾಗ್ಯ ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿತ್ತು. ನಂತರದಲ್ಲಿ ಅಧಿಕಾರಕ್ಕೆ ಬಂದ ಸರ್ಕಾರಗಳು ಆ ಯೋಜನೆಗಳನ್ನು ಸಮರ್ಪಕವಾಗಿ ಮುಂದುವರಿಸಲಾಗದೆ ವಿಫಲವಾದವು. ಇದರಿಂದ ಬೇಸತ್ತಿರುವ ಜನರು ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವ ನಿರ್ಧಾರಕ್ಕೆ ಬಂದಿದ್ದಾರೆ ಎಂದು ತಿಳಿಸಿದರು.

ಕಳೆದ ಐದು ವರ್ಷಗಳಲ್ಲಿ ತಾಲೂಕಿನಲ್ಲಿ ಎಷ್ಟರ ಮಟ್ಟಿಗೆ ಅಭಿವೃದ್ಧಿ ಕೆಲಸಗಳಾಗಿವೆ ಎಂಬುದು ಜನರಿಗೆ ಮನವರಿಕೆಯಾಗಿದೆ. ಶಾಸಕರಾಗಿ ಆಯ್ಕೆ ಯಾದವರಿಗೆ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಆಡಳಿತಾರೂಢ ಸರ್ಕಾರವೇ ಇರಬೇಕೆಂದೇನಿಲ್ಲ ಎಂದರು. ಹೊಣಕೆರೆ ಗ್ರಾಮದ ಪ್ರಭಣ್ಣ, ಬೊಮ್ಮೇ ಗೌಡ ಸೇರಿದಂತೆ ಬೋಗಾದಿ ಗ್ರಾಪಂ ವ್ಯಾಪ್ತಿಯ ಜೆಡಿಎಸ್ ಪಕ್ಷದ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಪಕ್ಷ ತೊರೆದು ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಹೊಣಕೆರೆ ಗ್ರಾಪಂ ಅಧ್ಯಕ್ಷ ಬಸವರಾಜು, ಅಲ್ಪಹಳ್ಳಿ ಡಿ.ಕೃಷ್ಣೇಗೌಡ, ಲಕ್ಷ್ಮೀನಾರಾಯಣ, ಮನ್‌ಮುಲ್ ಮಾಜಿ ನಿರ್ದೇಶಕ ರಾಮಚಂದ್ರು ಸೇರಿದಂತೆ ಹಲವರಿದ್ದರು.

ಐದನೇ ಪುಟದಿಂದ

ಬಸವರಾಜ ಬೊಮ್ಮಾಯಿಯೇ ಮುಖ್ಯಮಂತ್ರಿ

ಎಂದು ವಿವರಿಸಿದರು. ಕರ್ನಾಟಕದಲ್ಲಿ ವಿಕಾಸದ ಸ್ಥಿರತೆ ಇರಬೇಕು ಎಂಬುದು ಚುನಾ ವಣೆಯ ವಿಷಯ ಎಂದ ಅವರು, ಮೋದಿಜೀ ಅವರ ಆಶೀರ್ವಾದ ಮುಂದುವರಿಯಲು ಮತ್ತು ಅಭಿವೃದ್ಧಿಯನ್ನು ಮುಂದುವರಿಸಲು ಬಿಜೆಪಿಯನ್ನೇ ಗೆಲ್ಲಿಸಿ ಎಂದು ವಿನಂತಿಸಿದರು. ಕರ್ನಾಟಕಕ್ಕೆ ಮೋದಿಜೀ ಅವರು ಕಳುಹಿಸಿದ ಹಣ ಸಮರ್ಪಕವಾಗಿ ಬಳಕೆಯಾಗಲು, ಇಲ್ಲಿ ಅಭಿವೃದ್ಧಿ ಕಾರ್ಯ ನಿರಂತರವಾಗಿ ನಡೆಯಲು ಕಮಲದ ಚಿಹ್ನೆಯನ್ನು ಬೆಂಬಲಿಸಿ ಎಂದು ಕೋರಿದರು. ರಸ್ತೆಗಳ ನಿರ್ಮಾಣ, ಅಭಿವೃದ್ಧಿ, ತುಮಕೂರಿನಲ್ಲಿ ಹೆಲಿಕಾಪ್ಟರ್ ನಿರ್ಮಾಣದ ಕೈಗಾರಿಕೆ ಆರಂಭಿಸಿದ್ದನ್ನು ವಿವರಿಸಿದ ಅವರು, ವಿಮಾನನಿಲ್ದಾಣಗಳ ನಿರ್ಮಾಣ, ವಂದೇ ಭಾರತ್ ರೈಲುಗಳ ಆರಂಭಕ್ಕೆ ಕಮಲದ ಚಿಹ್ನೆಗೆ ಮತ ಕೊಡಿ ಎಂದು ತಿಳಿಸಿದರು.

ಕೆಲಸ ಮಾಡೋರಿಗೆ ನನ್ನ ಬೆಂಬಲ

ಇದೇ ಸಂದರ್ಭದಲ್ಲಿ ಮಾತನಾಡಿದ ನಟ ಸುದೀಪ್, ಸಂತ ಶಿಶುನಾಳ ಷರೀಫ್ ನಾಡಿದು. ಶಿಗ್ಗಾಂವಿಯಲ್ಲಿ ಪ್ರಚಾರ ಆರಂಭಿಸಿದ್ದಕ್ಕೆ ನನಗೆ ಬಹಳ ಖುಷಿಯಾಗಿದೆ. ನಾನು ಸುಮ್ಮನೆ ಪ್ರಚಾರಕ್ಕೆ ಬರುವುದಿಲ್ಲ. ನಾನು ಕೆಲಸ ಮಾಡೋರಿಗೆ ಮಾತ್ರ ಬೆಂಬಲ ನೀಡುವವನು ಎಂದರು. ಈ ಕಿಚ್ಚ, ಬಸವರಾಜ ಬೊಮ್ಮಾಯಿ ಮಾಮ ಅವರನ್ನು ಗೆಲ್ಲಿಸಿ ಹೋಗುತ್ತಾನೆ. ಕಡಿಮೆ ಅವಧಿಯಲ್ಲಿ ಮಾಮ ಉತ್ತಮವಾಗಿ ಕೆಲಸ ಮಾಡಿದ್ದಾರೆ. ನನ್ನನ್ನು ಆಹ್ವಾನಿಸಿದ್ದಕ್ಕೆ ಅವರಿಗೆ ಧನ್ಯವಾದ ಹೇಳುತ್ತೇನೆ. ನಾನು ಭಾರತೀಯನಾಗಿ ಪ್ರಧಾನಿ ಮೋದಿ ಕೆಲಸವನ್ನು ಮೆಚ್ಚುತ್ತೇನೆ. ಗೆದ್ದೇ ಗೆಲ್ಲುವೆ ಒಂದು ದಿನ, ಗೆಲ್ಲಲೇ ಬೇಕು ಒಳ್ಳೆಯತನ ಎಂದು ಸುದೀಪ್ ಸಿಎಂ ಬೊಮ್ಮಾಯಿ ಅವರನ್ನು ಹಾಡಿ ಹೊಗಳಿದರು.

ಗೋಡೌನ್‌ನಲ್ಲಿ ಭಾರೀ ಅಗ್ನಿ ಅವಘಡ

ರಸ್ತೆಯ ಎಡ ಭಾಗದಲ್ಲಿ ಹೆಬ್ಬಾಳು ಕೆರೆಗೆ ಹೊಂದಿ ಕೊಂಡಂತಿರುವ ಆನಂದ ರಾಜಗೋಪಾಲ ಶೆಟ್ಟಿ ಎಂಬುವರ ಒಡೆತನದ ಜುಪಿಟರ್ ಪಟಾಕಿ ಅಂಗಡಿ ಗೋಡೌನ್‌ನಲ್ಲಿ ಮಧ್ಯಾಹ್ನ 1.15ರ ಸುಮಾರಿನಲ್ಲಿ ಹಠಾತ್ತನೆ ಬೆಂಕಿ ಕಾಣಿಸಿಕೊಂಡು ಪಟಾಕಿಗಳು ಭಾರೀ ಶಬ್ದದೊಂದಿಗೆ ಸಿಡಿಯಲಾರಂಭಿಸಿದವು. ರಾಕೆಟ್‌ಗಳು ಆಗಸಕ್ಕೆ

ಯದ್ವಾತದ್ವಾ ಚಿಮ್ಮುತ್ತಿದ್ದವು. ಬೆಂಕಿ ಹಾಗೂ ಹೊಗೆ ಮುಗಿಲು ಮುಟ್ಟುವಂತೆ ಕಾಣುತ್ತಿತ್ತು. ಇದೇ ವೇಳೆ ಗೋಡೌನ್‌ನ ಒಂದು ಭಾಗದಲ್ಲಿ ಪ್ಯಾಕಿಂಗ್ ಕೆಲಸ ಮಾಡುತ್ತಿದ್ದ ಕಾರ್ಮಿಕರು ಗಾಬರಿಯಾಗಿ ಅಲ್ಲಿಂದ ಹೊರ ಓಡಿದರು. ಈ ಗೋಡೌನ್‌ನಲ್ಲಿ ಅಗ್ನಿಶಾಮಕ ಉಪಕರಣಗಳಿದ್ದರೂ, ಅದನ್ನು ನಿರ್ವಹಿಸುವವರು ಯಾರೂ ಇಲ್ಲದ ಕಾರಣ ಕನಿಷ್ಠ ಪಕ್ಷ ಬೆಂಕಿಯನ್ನು ಪ್ರಾರಂಭಿಕ ಹಂತದಲ್ಲೇ ನಂದಿಸುವ ಪ್ರಯತ್ನವನ್ನೂ ಕೂಡ ಮಾಡಲಾಗದಂತಹ ಸ್ಥಿತಿಯಲ್ಲಿ ಭಾರೀ ಅನಾಹುತವೇ ಸಂಭವಿಸಿಬಿಟ್ಟಿತು. ಸಮಾಧಾನಕರವೆಂದರೆ ಯಾವುದೇ ಪ್ರಾಣಾಪಾಯ ಆಗಿಲ್ಲ.

ಬೆಂಕಿ ಕೆನ್ನಾಲಿಗೆಗೆ ಗೋಡೌನ್‌ನ ಮೂರು ಹಂತಗಳಲ್ಲಿದ್ದ ಲಕ್ಷಾಂತರ ರೂ. ಮೌಲ್ಯದ ಪಟಾಕಿಗಳು ಸುಟ್ಟು ಭಸ್ಮವಾದವು. ಗೋಡೌನ್‌ನ ಹೊರ ಆವರಣದಲ್ಲಿ ನಿಲ್ಲಿಸಿದ್ದ ಮಾಲೀಕನ ಕಿಯೋ ಕಾರು ಸುಟ್ಟು ಕರಕಲಾಯಿತು. ವಿಷಯ ತಿಳಿಯುತ್ತಿದ್ದಂತೆಯೇ ಹೆಬ್ಬಾಳು, ಬನ್ನಿಮಂಟಪ ಹಾಗೂ ಸರಸ್ವತಿಪುರಂ ಅಗ್ನಿಶಾಮಕ ದಳದ 14 ವಾಹನಗಳಲ್ಲಿ ಆಗಮಿಸಿದ 150ಕ್ಕೂ ಹೆಚ್ಚು ಸಿಬ್ಬಂದಿ ಸಂಜೆ 5 ಗಂಟೆವರೆಗೆ ನಿರಂತರವಾಗಿ ಕಾರ್ಯ ನಿರ್ವಹಿಸಿ ಬೆಂಕಿ ನಂದಿಸಿದರು. ಈ ಅವಘಡದಲ್ಲಿ ಪಟಾಕಿಗಳು ಸಂಪೂರ್ಣವಾಗಿ ಸುಟ್ಟು ಹೋಗಿದ್ದಲ್ಲದೇ ಕಟ್ಟಡದ ಕೆಲ ಭಾಗ ಬಿರುಕು ಬಿಟ್ಟಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಅಗ್ನಿ ಅನಾಹುತದ ವಿಷಯ ತಿಳಿಯುತ್ತಿದ್ದಂತೆಯೇ ಎಸಿಪಿ ಗಜೇಂದ್ರ ಪ್ರಸಾದ್ ನೇತೃತ್ವದಲ್ಲಿ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಪ್ರದೀಪ್, ಹೆಬ್ಬಾಳು ಠಾಣೆ ಇನ್ಸ್‌ಪೆಕ್ಟರ್ ಪ್ರಸಾದ್ ಅವರನ್ನೊಳಗೊಂಡ ಪೊಲೀಸರ ತಂಡ ಕಾರ್ಯಪ್ರವೃತ್ತರಾಗಿ ಈ ರಸ್ತೆಯಲ್ಲಿ ವಾಹನ ಸಂಚಾರವನ್ನು ಬಂದ್ ಮಾಡಿ ವಾಹನಗಳು ಪರ್ಯಾಯ ರಸ್ತೆಯಲ್ಲಿ ಚಲಿಸಲು ಸೂಚಿಸಿದರು. ಇವರ ಜೊತೆ ವಿವಿ ಪುರಂ ಸಂಚಾರ ಠಾಣೆಯ ಪೊಲೀಸರೂ ಕೂಡ ಕೈಜೋಡಿಸಿದ್ದರು. ಘಟನಾ ಸ್ಥಳಕ್ಕೆ ಚೆಸ್ಕಾಂ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ವಿಮಾ ಕಂಪನಿ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ಪಟಾಕಿ ವರ್ತಕ ಆನಂದ್ ಈ ಗೋಡೌನ್ ಹಾಗೂ ಅಂಗಡಿಗೆ ಕಾನೂನು ಬದ್ಧವಾಗಿ ಪರವಾನಗಿ ಪಡೆದಿದ್ದಾರೆ. ಅಲ್ಲದೇ ವಿಮೆಯನ್ನೂ ಮಾಡಿಸಿದ್ದಾರೆ. ನಿಯಮಾನುಸಾರ ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸಿದ್ದಾರೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆಯಾದರೂ, ಅಗ್ನಿಶಾಮಕ ಉಪಕರಣ ಬಳಸುವವರು ಅನಾಹುತ ಸಂಭವಿಸಿದಾಗ ಗೋಡೌನ್‌ನಲ್ಲಿ ಇರಲಿಲ್ಲ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಅನಾಹುತ ನಡೆದ ವೇಳೆ 3 ಹಂತಗಳಿರುವ ಈ ಗೋಡೌನ್‌ನ ಕೆಳ ಭಾಗದಲ್ಲಿ ಕೆಲ ಕಾರ್ಮಿಕರು ಪ್ಯಾಕಿಂಗ್ ಕೆಲಸ ಮಾಡುತ್ತಿದ್ದರು. ಆದರೆ ಅವರಿಗೆ ಅಗ್ನಿಶಾಮಕ ಉಪಕರಣ ಬಳಸುವುದರ ಬಗ್ಗೆ ತಿಳುವಳಿಕೆ ಇರಲಿಲ್ಲವೆಂದು ಅನಿಸುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೊಮ್ಮಗ ಧವನ್ ರಾಕೇಶ್!

ಧವನ್ ರಾಕೇಶ್‌ಗೆ ಜೈಕಾರ ಕೂಗಿದರು. ನಂತರ ಸಿದ್ದರಾಮಯ್ಯ ಮಾತನಾಡುತ್ತಿದ್ದ ವೇಳೆ ವೇದಿಕೆಯಲ್ಲಿದ್ದ ಮುಖಂಡರು, ಆಸನದಲ್ಲಿ ಕುಳಿತ್ತಿದ್ದ ಧವನ್‌ನನ್ನು ಸಿದ್ದರಾಮಯ್ಯ ಬಳಿ ನಿಲ್ಲುವಂತೆ ಸೂಚಿಸಿ ಕಳುಹಿಸಿದರು. ತಮ್ಮ ಭಾಷಣದಲ್ಲಿ ಪುತ್ರ ದಿವಂಗತ ರಾಕೇಶ್ ಚಾಮುಂಡೇಶ್ವರಿ ಮತ್ತು ವರುಣ ಕ್ಷೇತ್ರಗಳಲ್ಲಿ ಜನಾನುರಾಗಿ ನಾಯಕರಾಗಿದ್ದರು ಎಂಬುದನ್ನು ಉಲ್ಲೇಖಿಸುವ ಜೊತೆಗೆ ರಾಕೇಶ್ ಪುತ್ರ ಭವಿಷ್ಯದ ದಿನಗಳಲ್ಲಿ ರಾಜಕಾರಣಕ್ಕೆ ಬರುತ್ತಾನೆ ಎಂಬುದನ್ನೂ ಕೂಡ ಘೋಷಿಸಿದರು.

ಜೆಡಿಎಸ್–ಬಿಜೆಪಿ ಒಳ ಒಪ್ಪಂದ: ಮುಂದುವರೆದು ಮಾತನಾಡಿದ ಸಿದ್ದರಾಮಯ್ಯ, ಬಿಜೆಪಿ ಮತ್ತು ಜೆಡಿಎಸ್‌ನವರು ಒಳ ಒಪ್ಪಂದ ಮಾಡಿಕೊಂಡು ಹೇಗಾದರೂ ಮಾಡಿ ನನ್ನನ್ನು ಸೋಲಿಸಲು ಷಡ್ಯಂತ್ರ ರೂಪಿಸಿದ್ದಾರೆ. ಆದರೆ, ವರುಣ ಕ್ಷೇತ್ರದ ಜನತೆ ಇದ್ಯಾವುದಕ್ಕೂ ಸೊಪ್ಪು ಹಾಕದೇ ನನ್ನನ್ನು ಲಕ್ಷ ಮತಗಳ ಅಂತರದಲ್ಲಿ ಗೆಲ್ಲಿಸುತ್ತಾರೆ ಎಂದರು. ನನ್ನನ್ನು ಸೋಲಿಸಲೇಬೇಕೆಂದು ನಿರ್ಧರಿಸಿ ಬಿಜೆಪಿಯವರು ಬೆಂಗಳೂರು ನಿವಾಸಿಯಾದ ಸೋಮಣ್ಣ ಅವರನ್ನು ಕರೆಸಿ ನಿಲ್ಲಿಸಿದ್ದಾರೆ. ಮತ್ತೊಂದೆಡೆ ದಲಿತರ ಮತ ವಿಭಜನೆ ಮಾಡುವ ದೃಷ್ಟಿಯಿಂದ ಜೆಡಿಎಸ್ ಡಾ. ಭಾರತಿ ಶಂಕರ್ ಅವರನ್ನು ಕಣಕ್ಕಿಳಿಸಿದೆ. ಬಿಜೆಪಿ ಮತ್ತು ಜೆಡಿಎಸ್‌ನವರು ಎಷ್ಟೇ ಕುತಂತ್ರ ಮಾಡಲಿ, ಹಣದ ಹೊಳೆಯನ್ನೇ ಹರಿಸಲಿ ಸ್ವಾಭಿಮಾನಿಗಳಾಗಿರುವ ವರುಣ ಕ್ಷೇತ್ರದ ಜನತೆ ಯಾವುದೇ ಆಮಿಷಗಳಿಗೆ ಒಳಗಾಗುವುದಿಲ್ಲ. ಬಿಜೆಪಿ ಮತ್ತು ಜೆಡಿಎಸ್ ಕುತಂತ್ರಗಳನ್ನು ಅರ್ಥ ಮಾಡಿಕೊಂಡು ಅವರನ್ನು ಕಾಲ ಕಸದಂತೆ ಕಂಡು ನನ್ನನ್ನು ಗೆಲ್ಲಿಸಲಿದ್ದಾರೆ ಎಂಬ ವಿಶ್ವಾಸವಿದೆ. ನಾನು ಕೇವಲ ಎರಡು ದಿನ ಮಾತ್ರ ಪ್ರಚಾರಕ್ಕೆ ಬರುತ್ತೇನೆ. ಉಳಿದಂತೆ ನನ್ನ ಪರ ಡಾ. ಯತೀಂದ್ರ ಮತ ಯಾಚನೆ ಮಾಡಲಿದ್ದಾರೆ. 2013ರಲ್ಲಿ 31 ಸಾವಿರ ಮತಗಳ ಅಂತರದಲ್ಲಿ ನನ್ನನ್ನು ಗೆಲ್ಲಿಸಿದ್ದೀರಿ. ಕಳೆದ ಚುನಾವಣೆಯಲ್ಲಿ ಡಾ. ಯತೀಂದ್ರ ಅವರನ್ನು 59 ಸಾವಿರ ಮತಗಳ ಅಂತರದಿಂದ ಗೆಲ್ಲಿಸಿದ್ದೀರಿ. ವರುಣಾ ನಾನು ಹುಟ್ಟಿ ಬೆಳೆದ ಹೋಬಳಿ. ಈ ಕ್ಷೇತ್ರ ನನ್ನ ಸ್ವಂತ ಕ್ಷೇತ್ರ. ಇದೇ ಕ್ಷೇತ್ರದಿಂದ ಸ್ಪರ್ಧಿಸಿ ಚುನಾವಣಾ ರಾಜಕೀಯದಿಂದ ನಿವೃತ್ತಿಯಾಗಲು ಬಯಸಿದ್ದೇನೆ. ಇದನ್ನು ಅರ್ಥ ಮಾಡಿಕೊಂಡು ಈ ಬಾರಿ ಲಕ್ಷ ಮತಗಳ ಅಂತರದಿಂದ ಗೆಲ್ಲಿಸುವ ಮೂಲಕ ಶಕ್ತಿ ತುಂಬಿ ನನ್ನನ್ನು ವಿಧಾನಸಭೆಗೆ ಕಳುಹಿಸಿಕೊಡಿ ಎಂದು ಮನವಿ ಮಾಡಿದರು.

ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದರೆ ವರುಣವನ್ನು ತಾಲೂಕು ಕೇಂದ್ರ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಕಳೆದ ನಾಲ್ಕು ವರ್ಷದಿಂದ ಇವರದೇ ಪಕ್ಷ ಅಧಿಕಾರದಲ್ಲಿತ್ತು. ಆಗ ಏಕೆ ವರುಣವನ್ನು ತಾಲೂಕು ಕೇಂದ್ರ ಮಾಡಲಿಲ್ಲ? ಇಲ್ಲಿ ಹುಟ್ಟಿ ಬೆಳೆಯದ ಬೆಂಗಳೂರಿನ ನಿವಾಸಿ ಸೋಮಣ್ಣ ವಸತಿ ಸಚಿವ, ಇದೇ ಜಿಲ್ಲೆಯ ಉಸ್ತುವಾರಿ ಮಂತ್ರಿಯಾಗಿದ್ದರೂ ಬಡವರಿಗೆ ಒಂದು ಮನೆಯನ್ನೂ ಸಹ ಕೊಟ್ಟಿಲ್ಲ. ಹೀಗಿರುವಾಗ ಇವರು ಕ್ಷೇತ್ರವನ್ನು ಹೇಗೆ ಅಭಿವೃದ್ಧಿ ಮಾಡುತ್ತಾರೆ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಬಿಜೆಪಿ ಕೋಮುವಾದಿ ಪಕ್ಷವಾಗಿದ್ದು, ರಾಜ್ಯದ ಬೊಕ್ಕಸವನ್ನು ಖಾಲಿ ಮಾಡುವ ಮೂಲಕ ರಾಜ್ಯವನ್ನು ಆರ್ಥಿಕವಾಗಿ ದಿವಾಳಿಯಾಗಿಸಿದೆ. ಶೇ. 40ರಷ್ಟು ಕಮಿಷನ್ ಪಡೆದು, ಭ್ರಷ್ಟಾಚಾರದಲ್ಲಿ ಮುಳುಗಿದೆ. ಬಿಜೆಪಿಯಲ್ಲಿ ಹಿರಿಯರಿಗೆ ನೆಲೆ ಇಲ್ಲದಂತಾಗಿದೆ. ಜಗದೀಶ್ ಶೆಟ್ಟರ್ ಮತ್ತು ಲಕ್ಷ್ಮಣ ಸವದಿ ಕಾಂಗ್ರೆಸ್ ಸೇರಿ ಅಭ್ಯರ್ಥಿಗಳಾಗಿ ಸ್ಪರ್ಧಿಸುತ್ತಿದ್ದಾರೆ. ಇನ್ನು ಜೆಡಿಎಸ್ ಎಂದೂ ಸ್ವಂತ ಬಲದಿಂದ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಅತಂತ್ರ ಫಲಿತಾಂಶ ಬಂದು ಕಾಂಗ್ರೆಸ್ ಅಥವಾ ಬಿಜೆಪಿ ಜೊತೆ ಹೋಗಬೇಕೆಂದು ಆ ಪಕ್ಷ ಬಯಸಿದೆ. ಈಗ ಎಲ್ಲೆಡೆ ಕಾಂಗ್ರೆಸ್ ಪರ ಒಲವು ಎದ್ದು ಕಾಣುತ್ತಿದೆ. ಈ ಚುನಾವಣೆಯಲ್ಲಿ ಕಾಂಗ್ರೆಸ್ 150 ಸ್ಥಾನ ಪಡೆದು ಅಧಿಕಾರ ಹಿಡಿಯಲಿದೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ 15 ಸ್ಥಾನಗಳನ್ನೂ ಗೆದ್ದು ಕಾಂಗ್ರೆಸ್ ಇತಿಹಾಸ ನಿರ್ಮಿಸಲಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಸಿದ್ದುಗಿಂತ ಪತ್ನಿ ಪಾರ್ವತಿ 'ಶ್ರೀಮಂತರು'

ಮೈಸೂರು: ವರುಣ ವಿಧಾನಸಭಾ ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಆಸ್ತಿ ಘೋಷಣೆ ಮಾಡಿದ್ದು, ಪತ್ನಿಯೇ 'ಶ್ರೀಮಂತರು' ಎಂಬ ಅಂಶ ಬಹಿರಂಗವಾಗಿದೆ.

2018ರಲ್ಲಿ 18.55 ಕೋಟಿ ಮೌಲ್ಯದ ಆಸ್ತಿ ಘೋಷಿಸಿದ್ದ ಸಿದ್ದರಾಮಯ್ಯ, 2023ರಲ್ಲಿ 19 ಕೋಟಿ ಆಸ್ತಿ ಘೋಷಿಸಿಕೊಂಡಿದ್ದಾರೆ.

ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಆಸ್ತಿ ವಿವರ ಹೀಗಿದೆ

ಆಸ್ತಿ (ಸಿದ್ದರಾಮಯ್ಯ ಬಳಿ): 19 ಕೋಟಿ ರೂ.

ಆಸ್ತಿ (ಪತ್ನಿ ಪಾರ್ವತಿ ಬಳಿ): 32.12 ಕೋಟಿ ರೂ.

ಚರಾಸ್ತಿ: 9.58 ಕೋಟಿ ರೂ.

ಸ್ಥಿರಾಸ್ತಿ: 9.43 ಕೋಟಿ ರೂ.

ಚರಾಸ್ತಿ (ಪತ್ನಿ ಪಾರ್ವತಿ ಹೆಸರಲ್ಲಿ): 11.26 ಕೋಟಿ ರೂ.

ಸ್ಥಿರಾಸ್ತಿ (ಪತ್ನಿ ಪಾರ್ವತಿ ಹೆಸರಲ್ಲಿ): 19.56 ಕೋಟಿ ರೂ.

ಸಾಲ: 6.84 ಕೋಟಿ ರೂ.

ನಾಮಪತ್ರ ಸಲ್ಲಿಕೆ

ಸಿದ್ದರಾಮಯ್ಯ ಅವರು ತಮ್ಮ ಹುಟ್ಟೂರು ಸಿದ್ದರಾಮನ ಹುಂಡಿ ಗ್ರಾಮಕ್ಕೆ ತೆರಳಿ, ಮನೆ ದೇವರಿಗೆ ಪೂಜೆ ಸಲ್ಲಿಸಿದ ನಂತರ ಚಾಮುಂಡಿಬೆಟ್ಟಕ್ಕೆ ತೆರಳಿ, ತಾಯಿ ಚಾಮುಂಡೇಶ್ವರಿಗೆ ಹಾಗೂ ಉತ್ತನಹಳ್ಳಿ ಶ್ರೀ ತ್ರಿಪುರ ಸುಂದರಿ ದೇವಿಗೆ ಪೂಜೆ ಸಲ್ಲಿಸಿದರು.

ಸಿದ್ದರಾಮಯ್ಯ ತಮ್ಮ ಸ್ವಗ್ರಾಮಕ್ಕೆ ಮೊಮ್ಮಗ (ದಿವಂಗತ ರಾಕೇಶ್ ಪುತ್ರ) ಧವನ್ ರಾಕೇಶ್ ಜೊತೆ ತೆರಳಿದಾಗ ಇಡೀ ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದರು. ಸಿದ್ದರಾಮಯ್ಯನವರಂತೆಯೇ ವೇಷ ಭೂಷಣ ತೊಟ್ಟ ಧವನ್ ರಾಕೇಶ್ ನೋಡಲು ಗ್ರಾಮಸ್ಥರು ಉತ್ಸಾಹದಿಂದ ಮುಗಿ ಬಿದ್ದರು. ಸಿದ್ದರಾಮಯ್ಯ ಮತ್ತು ಮೊಮ್ಮಗನಿಗೆ ಜೈಕಾರ ಕೂಗಿದರು. ಹಲವಾರು ಮಹಿಳೆಯರು ಇಬ್ಬರಿಗೂ ಆರತಿ ಬೆಳಗಿದರೆ, ಮತ್ತೆ ಹಲವರು ಹೂಮಳೆ ಸುರಿಸಿದರು.

47 ಮಂದಿ ನಾಮಪತ್ರ ಸಲ್ಲಿಕೆ

ಶ್ರೀನಿವಾಸ್, ಎಂ.ಶ್ರೀನಿವಾಸ್, ಜಿ.ಎಂ. ಮಹದೇವ್, ನಂಜನಗೂಡಿನಲ್ಲಿ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಆರ್.ಮಹದೇಶನ್, ಪಕ್ಷೇತರ ಜಿ.ಆನಂದ, ಹೆಚ್.ಡಿ.ಕೋಟೆಯಲ್ಲಿ ಬಿಜೆಪಿಯಿಂದ ಕೆ.ಎಂ.ಕೃಷ್ಣ, ಪಕ್ಷೇತರ ಜಿ.ಎನ್.ದೇವದತ್ತ, ಹುಣಸೂರು ಕ್ಷೇತ್ರದಿಂದ ಬಿಎಸ್‌ಪಿಯ ಪ್ರಸನ್ನ ಕುಮಾರ್, ಆಮ್ ಆದ್ಮಿ ಪಾರ್ಟಿಯ ಜಿ.ರವಿಕುಮಾರ್, ಉತ್ತಮ ಪ್ರಜಾಕೀಯ ಪಾರ್ಟಿಯ ಡಿ.ಎನ್.ಸುನಿಲ್, ಪಕ್ಷೇತರರಾಗಿ ಬಿ.ಎಲ್.ಲೋಕೇಶ್ ಹಾಗೂ ಚನ್ನೇಗೌಡ ಅವರು ಉಮೇದುವಾರಿಕೆ ಸಲ್ಲಿಸಿದವರಾಗಿದ್ದಾರೆ.

ಕೃಷ್ಣರಾಜನಗರದಲ್ಲಿ ಕಾಂಗ್ರೆಸ್‌ನ ಡಿ.ರವಿಶಂಕರ್, ಆಮ್ ಆದ್ಮಿ ಪಾರ್ಟಿಯ ಮುರುಗೇಶ್, ಪಕ್ಷೇತರ ಶಿವನಂಜಪ್ಪ, ಪಿರಿಯಾಪಟ್ಟಣದಿಂದ ಬಿಎಸ್‌ಪಿಯ ಸಿ.ಎಸ್.ಪ್ರದೀಪ್, ಪಕ್ಷೇತರರಾಗಿ ಹೆಚ್.ಜಿ ಕೃಷ್ಣಕುಮಾರ್ ಹಾಗೂ ಪಿ.ಶ್ರೀನಿವಾಸ್ ಅವರು ಸ್ಪರ್ಧೆ ಬಯಸಿ ಇಂದು ನಾಮಪತ್ರ ಸಲ್ಲಿಸಿದ್ದಾರೆ. ಆ ಮೂಲಕ ಇದುವರೆಗೆ ಮೈಸೂರು ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳಿಂದ ಒಟ್ಟು 146 ಮಂದಿ ತಮ್ಮ ನಾಮಪತ್ರ ಸಲ್ಲಿಸಿದಂತಾಗಿದೆ. ನಾಳೆ (ಏ.20) ಮಧ್ಯಾಹ್ನ 3 ಗಂಟೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಅಂತ್ಯಗೊಳ್ಳಲಿದೆ. ಕಡೇ ದಿನವಾದ ಗುರುವಾರ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀವತ್ಸ, ಎನ್.ಆರ್. ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಅಬ್ದುಲ್ ಖಾದರ್ ಶಾಹಿದ್, ಕೆ.ಆರ್. ನಗರ ಜೆಡಿಎಸ್ ಅಭ್ಯರ್ಥಿಯಾಗಿ ಶಾಸಕ ಸಾರಾ. ಮಹೇಶ್ ಸೇರಿದಂತೆ ಹಲವರು ನಾಮಪತ್ರ ಸಲ್ಲಿಸಲಿದ್ದಾರೆ.

ಶೇ.3ರಷ್ಟು ಮಂದಿ ಅಂಚೆ ಮತದಾನಕ್ಕೆ ಸಮ್ಮತಿ

ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಒಟ್ಟು 31,304 ವಿಶೇಷ ಚೇತನರು ಹಾಗೂ 80,994 ಹಿರಿಯ ನಾಗರಿಕರಿಗೆ(80+) 'ಫಾರ್ಮ್ 12ಡಿ' ವಿತರಿಸಲಾಗಿತ್ತು. ಆದರೆ 403(ಶೇ.1.28) ವಿಶೇಷ ಚೇತನರು ಹಾಗೂ 2,404(ಶೇ.2.96) ಹಿರಿಯರು ಮಾತ್ರ ಫಾರ್ಮ್ 12ಡಿ ಭರ್ತಿ ಮಾಡಿ, ವಾಪಸ್ ನೀಡುವ ಮೂಲಕ ಅಂಚೆ ಮತದಾನಕ್ಕೆ ಅವಕಾಶ ಬಯಸಿದ್ದಾರೆ. ಜಿಲ್ಲೆಯವರಾಗಿದ್ದು ಬೇರೆ ಸ್ಥಳದಲ್ಲಿ ಅಗತ್ಯ ಸೇವೆಯಲ್ಲಿರುವ 694 ಮಂದಿ ಹಾಗೂ 989 ಚುನಾವಣಾ ಸಿಬ್ಬಂದಿಗೆ ಫಾರ್ಮ್ 12ಡಿ ನೀಡಲಾಗಿತ್ತು. ಇವರಲ್ಲಿ ಎಲ್ಲರೂ(ಶೇ.100) ಫಾರ್ಮ್ ಭರ್ತಿ ಮಾಡಿ, ಅಂಚೆ ಮೂಲಕ ಮತ ಚಲಾಯಿಸಲು ಅವಕಾಶ ಪಡೆದುಕೊಂಡಿದ್ದಾರೆ.

ಬಿಜೆಪಿ ಶ್ರೀವತ್ಸ, ಜೆಡಿಎಸ್‌ನ ಹೆಚ್.ಕೆ.ರಮೇಶ್ ಇಂದು ನಾಮಪತ್ರ ಸಲ್ಲಿಕೆ

ಮೈಸೂರು,ಏ.19–ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆ ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್. ಶ್ರೀವತ್ಸ, ಜೆಡಿಎಸ್‌ನ ಹೆಚ್.ಕೆ.ರಮೇಶ್ ಸೇರಿದಂತೆ ಹಲವರು ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ. ಮೈಸೂರಿನ ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್. ಶ್ರೀವತ್ಸ ಅವರು ಬೆಳಗ್ಗೆ 10 ಗಂಟೆಗೆ ನಗರದ ಅಗ್ರಹಾರದಲ್ಲಿರುವ 101 ಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ನಂತರ ಅಲ್ಲಿಂದ ಮೆರವಣಿಗೆ ಮೂಲಕ ನಗರ ಪಾಲಿಕೆಯಲ್ಲಿರುವ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಲಿದ್ದಾರೆ. ಹಾಗೆಯೇ ಚಾಮರಾಜ ವಿಧಾನಸಭಾ ಕ್ಷೇತ್ರ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್(ರವಿ) ಅವರು ಬೆಳಗ್ಗೆ 11 ಗಂಟೆಗೆ ಶಾಂತಲಾ ಚಿತ್ರಮಂದಿರದ ಸಮೀಪದ ಶ್ರೀರಾಘವೇಂದ್ರ ಸ್ವಾಮಿಯ ಮಠಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಅಲ್ಲಿಂದ ಪಾದಯಾತ್ರೆ ಮೂಲಕ ನಗರ ಪಾಲಿಕೆಯಲ್ಲಿರುವ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಉಮೇದುವಾರಿಕೆ ಸಲ್ಲಿಸಲಿದ್ದಾರೆ. ಅದರಂತೆ ನರಸಿಂಹರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಅಬ್ದುಲ್ ಖಾದರ್ ಶಾಹೀದ್ ಅವರು ನಾಮಪತ್ರ ಸಲ್ಲಿಸಲಿದ್ದು, ಕಡೇ ದಿನವಾಗಿರುವುದರಿಂದ ವಿವಿಧ ಪಕ್ಷಗಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲಿದ್ದಾರೆ.

ಮೋದಿ, ಯೋಗಿ, ಬಿಎಸ್‌ವೈ ಸೇರಿ 40 ಘಟಾನುಘಟಿ ನಾಯಕರು ತಾರಾ ಪ್ರಚಾರಕರು







ಬೆಂಗಳೂರು, ಏ.19(ಕೆಎಂಶಿ)– ಪ್ರಧಾನಿ ನರೇಂದ್ರ ಮೋದಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೇರಿದಂತೆ 40 ಘಟಾನುಘಟಿಗಳು ಕರ್ನಾಟಕ ವಿಧಾನಸಭಾ ಚುನಾವಣೆಗೆ ಬಿಜೆಪಿ ತನ್ನ ತಾರಾಪ್ರಚಾರಕರ ಪಟ್ಟಿ ಬಿಡುಗಡೆ ಮಾಡಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮ್ಮುಖದಲ್ಲಿ ಬಿಜೆಪಿ ಬೆಂಬಲಿಸಿ, ಆಯ್ದ ಅಭ್ಯರ್ಥಿಗಳ ಪರ ಪ್ರಚಾರ ಮಾಡುವುದಾಗಿ ಹೇಳಿದ್ದ ಚಿತ್ರನಟ ಸುದೀಪ್ ತಾರಾ ಪ್ರಚಾರಕ ಪಟ್ಟಿಯಲ್ಲಿಲ್ಲ.

ಬಸವರಾಜ ಬೊಮ್ಮಾಯಿ ಜೊತೆಗೆ ಮಧ್ಯ ಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚವ್ಹಾಣ್, ಅಸ್ಸಾಂ ಮುಖ್ಯಮಂತ್ರಿ ಹೀಮಂತ್ ಬಿಸ್ವಶರ್ಮಾ, ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಪ್ರಮುಖರಾಗಿದ್ದಾರೆ. ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಷಾ, ಮೋದಿ ಸಂಪುಟದಲ್ಲಿರುವ ಮನ್ಸುಖ್ ಮಾಂಡವೀಯ, ನಿತೀನ್ ಗಡ್ಕರಿ, ಪ್ರಹ್ಲಾದ್ ಜೋಶಿ, ನಿರ್ಮಲಾ ಸೀತಾರಾಮನ್, ಸ್ಮೃತಿ ಇರಾನಿ, ಧರ್ಮೇಂದ್ರ ಪ್ರಧಾನ್, ಶೋಭಾ ಕರಂದ್ಲಾಜೆ, ಎ. ನಾರಾಯಣಸ್ವಾಮಿ, ಭಗವಂತ ಖೂಬಾ, ವಿಧಾನಸಭಾ ಚುನಾವಣೆಗೆ ಟಿಕೆಟ್ ಆಕಾಂಕ್ಷಿಗಳಾಗಿ ಟಿಕೆಟ್ ಸಿಗದೆ ನಿರಾಸೆಗೊಂಡಿರುವ ಕೆ.ಎಸ್.ಈಶ್ವರಪ್ಪ, ಅರವಿಂದ ಲಿಂಬಾವಳಿ ಹಾಗೂ ಶ್ರೀನಿವಾಸ ಪೂಜಾರಿ ತಾರಾ ಪ್ರಚಾರಕರು. ಅಲ್ಲದೆ, ನಳಿನ್ ಕುಮಾರ್ ಕಟೀಲ್, ಗೋವಿಂದ್ ಕಾರಜೋಳ, ಸದಾನಂದಗೌಡ, ಆರ್.ಅಶೋಕ್, ಕೆ.ಅಣ್ಣಾಮಲೈ, ಅರುಣ್ ಸಿಂಗ್, ಡಿ.ಕೆ.ಅರುಣಾ, ಸಿ.ಟಿ. ರವಿ, ಪ್ರಭಾಕರ್ ಕೋರೆ, ಬಿ. ಶ್ರೀರಾಮುಲು, ಬಸನಗೌಡ ಪಾಟೀಲ್ ಯತ್ನಾಳ್, ಉಮೇಶ್ ಜಾದವ್, ಚಲವಾದಿ ನಾರಾಯಣಸ್ವಾಮಿ, ಎನ್.ರವಿಕುಮಾರ್, ಜಿ.ವಿ.ರಾಜೇಶ್, ಜಗ್ಗೇಶ್, ತಾರಾ ಅನುರಾಧಾ ಸಹ ತಾರಾ ಪ್ರಚಾರಕರಾಗಿದ್ದಾರೆ.

ಮೈಸೂರು ಮಿತ್ರ ಗುರುವಾರ 20 ಏಪ್ರಿಲ್ 2023



ಮಾಜಿ ಮುಖ್ಯಮಂತ್ರಿ, ವಿಪಕ್ಷ ನಾಯಕ ಹಾಗೂ ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಬುಧವಾರ ನಾಮಪತ್ರ ಸಲ್ಲಿಕೆ ಮುನ್ನ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ್ದ ಸಂದರ್ಭ ಕೆಪಿಸಿಸಿ ಕಾರ್ಯದರ್ಶಿ, ವೀರಶೈವ ಲಿಂಗಾಯತ ಹಿರಿಯ ಮುಖಂಡ ಗುರುಪಾದ ಸ್ವಾಮಿ ರೇಷ್ಮೆಗೂಡಿನ ಹೂವಿನ ಹಾರ ಹಾಕಿ ಸನ್ಮಾನಿಸಿದರು. ಈ ವೇಳೆ ಕೆಪಿಸಿಸಿ ಸಂಯೋಜಕ ಎನ್.ಎಸ್.ರಾಜೇಂದ್ರ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಅಹಲ್ಯ ಪ್ರಭು ಇನ್ನಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಸೇರಿದ ಅಹಿಂದ ಜವರಪ್ಪ



ಮೈಸೂರು,ಏ.19(ಎಂಟಿವೈ)–ವರುಣ ಮತ್ತು ಚಾಮುಂಡೇಶ್ವರಿ ಕ್ಷೇತ್ರದ ಪ್ರಭಾವಿ ಅಹಿಂದ ಮುಖಂಡ ಜವರಪ್ಪ, ಮಾಜಿ ಸಿಎಂ ಸಿದ್ದರಾಮಯ್ಯ ನಿವಾಸದಲ್ಲಿ ಕಾಂಗ್ರೆಸ್ ಸೇರಿದ್ದು, ವಿಧಾನಸಭಾ ಎರಡೂ ಕ್ಷೇತ್ರದಲ್ಲೂ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬಲ ಬಂದಂತಾಗಿದೆ.

ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಅಭ್ಯರ್ಥಿಗಳು ಪ್ರಭಾವಿ ಮುಖಂಡರನ್ನು ಸೆಳೆಯಲು ಹವಣಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅಹಿಂದ ಹೋರಾಟದಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡು ಪ್ರಭಾವಿ ಮುಖಂಡ ಎನಿಸಿದ್ದ ನಾಡನಹಳ್ಳಿ ಗ್ರಾಮದ ಜವರಪ್ಪ, ಸಾಮಾಜಿಕ ಕಾರ್ಯಕರ್ತರೂ ಆಗಿದ್ದಾರೆ. ಮೈಸೂರು ಎಪಿಎಂಸಿಯ ಮಾಜಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಅವರು, ಕೆಲವು ವರ್ಷಗಳಿಂದ ರಾಜಕೀಯ ಕ್ಷೇತ್ರದಲ್ಲಿಯೂ ಗುರುತಿಸಿಕೊಂಡು ವರುಣ ಮತ್ತು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಗಳಲ್ಲಿ ತಮ್ಮದೇ ಆದ ಪ್ರಭಾವ ಹೊಂದಿದ್ದಾರೆ.

ಸಿದ್ದರಾಮಯ್ಯ ಅವರ ಮನವಿ ಮೇರೆಗೆ ಮೈಸೂರು ತಾ.ಪಂ ಮಾಜಿ ಅಧ್ಯಕ್ಷ ಮೂಡಲಹುಂಡಿ ಎಂ.ಟಿ.ರವಿಕುಮಾರ್ ಮತ್ತು ದಂಡಿಕೆರೆ ನಾಗರಾಜ್ ಅವರು ಬುಧವಾರ ಬೆಳಗ್ಗೆ ಅಹಿಂದ ಜವರಪ್ಪ ಅವರೊಂದಿಗೆ ರಾಮಕೃಷ್ಣನಗರದಲ್ಲಿರುವ ಸಿದ್ದರಾಮಯ್ಯ ಅವರ ನಿವಾಸಕ್ಕೆ ಆಗಮಿಸಿ ಪ್ರಸ್ತುತ ವಿದ್ಯಮಾನದ ಬಗ್ಗೆ ಚರ್ಚಿಸಿದರು. ಬಳಿಕ ಸಿದ್ದರಾಮಯ್ಯ ಅವರು ಜವರಪ್ಪರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಜವರಪ್ಪ ಮಾತನಾಡಿ, ಪಕ್ಷ ನೀಡುವ ಯಾವುದೇ ಜವಾಬ್ದಾರಿಯನ್ನು ನಿಭಾಯಿಸಲು ಬದ್ಧನಾಗಿರುತ್ತೇನೆ. ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿರುವ ಸಿದ್ದರಾಮಯ್ಯ ಅವರ ಕೈ ಬಲಪಡಿಸಲೇಬೇಕಾಗಿದೆ. ಈ ಚುನಾವಣೆಯಲ್ಲಿ ಶೋಷಿತ ಸಮುದಾಯಗಳು ವರುಣ ಹಾಗೂ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು. ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಮೈಸೂರು ವಿವಿ ಸಂಶೋಧಕರ ಸಂಘದ ಅಧ್ಯಕ್ಷ ಸೋಸಲೆ ಮಹೇಶ್ ಇತರರಿದ್ದರು.

ವರದಕ್ಷಿಣೆ ಕಿರುಕುಳ ಆರೋಪ

ಗ್ರಾಪಂ ಕಾರ್ಯದರ್ಶಿ ನೇಣಿಗೆ ಶರಣು

ಮೈಸೂರು, ಏ.19(ಆರ್‌ಕೆ)–ವರದಕ್ಷಿಣೆ ಕಿರುಕುಳ ತಾಳಲಾರದೆ ನವವಿವಾಹಿತೆ, ಬೆಟ್ಟದಪುರ ಗ್ರಾಮ ಪಂಚಾಯ್ತಿ ಕಾರ್ಯದರ್ಶಿ (ಗ್ರೇಡ್–1) ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಹೆಬ್ಬಾಳು ಬಡಾವಣೆಯಲ್ಲಿ ಮಂಗಳವಾರ ರಾತ್ರಿ ಸಂಭವಿಸಿದೆ.

ಹೆಬ್ಬಾಳಿನಲ್ಲಿ ಮಂಗಳವಾರ ರಾತ್ರಿ ಘಟನೆ, ಪತಿ ಬಂಧನ

ಮೈಸೂರಿನ ಹೆಬ್ಬಾಳು ಬಡಾವಣೆಯ ಸಿಐಟಿಬಿ ಕಲ್ಯಾಣ ಮಂಟಪದ ಎದುರಿನ ನಿವಾಸಿ ಶಿವಶಂಕರ್ ಪತ್ನಿ ವನಿತಾ (31) ಆತ್ಮಹತ್ಯೆ ಮಾಡಿಕೊಂಡಿರುವವರು.

ಚನ್ನಪಟ್ಟಣದವರಾದ ವನಿತಾ ಮೈಸೂರಿನ ಈವೆಂಟ್ ಮ್ಯಾನೇಜ್‌ಮೆಂಟ್ ವೃತ್ತಿಯಲ್ಲಿದ್ದ ಶಿವಶಂಕರ್‌ನನ್ನು 11 ತಿಂಗಳ ಹಿಂದೆಯಷ್ಟೇ ಪ್ರೀತಿಸಿ ಮದುವೆಯಾಗಿದ್ದರು. ಪಿರಿಯಾಪಟ್ಟಣ ತಾಲೂಕು, ಬೆಟ್ಟದಪುರ ಗ್ರಾಮ ಪಂಚಾಯ್ತಿ ಕಚೇರಿಯಲ್ಲಿ ಕಾರ್ಯದರ್ಶಿ (ಗ್ರೇಡ್–1)ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಆಕೆಗೆ ಮದುವೆ ನಂತರ ವರದಕ್ಷಿಣೆಗಾಗಿ ಒತ್ತಾಯಿಸಿ ಪತಿ ಶಿವಶಂಕರ್ ಪ್ರತೀ ದಿನ ಹಿಂಸೆ ನೀಡುತ್ತಿದ್ದ ಎನ್ನಲಾಗಿದೆ. ಮಂಗಳವಾರ ರಾತ್ರಿ ಹೆಬ್ಬಾಳಿನ ಪತಿ ಮನೆಯಲ್ಲಿ ವನಿತಾ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಹೆಬ್ಬಾಳು ಠಾಣೆ ಇನ್ಸ್‌ಪೆಕ್ಟರ್ ಪ್ರಸಾದ್ ಹಾಗೂ ಸಿಬ್ಬಂದಿ ಮಹಜರು ನಡೆಸಿ, ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಂತರ ದೇಹವನ್ನು ವಾರಸುದಾರರಿಗೆ ಇಂದು ಹಸ್ತಾಂತರಿಸಿದರು.

ತಾಯಿ ಪುಟ್ಟತಾಯಮ್ಮ ಅವರು ನೀಡಿದ ದೂರಿನನ್ವಯ ವರದಕ್ಷಿಣೆ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಯಾದ ಪತಿ ಶಿವಶಂಕರ್‌ನನ್ನು ಬಂಧಿಸಿದ್ದಾರೆ.

ಮನೆ ಗೇಟ್‌ಗೆ ಬೈಕ್ ಡಿಕ್ಕಿ: ಸವಾರ ಸಾವು

ಮೈಸೂರು, ಏ. 19– ಮನೆಯ ಗೇಟ್‌ಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ವಿದ್ಯಾರ್ಥಿ ಸಾವನ್ನಪ್ಪಿದ್ದು, ಮತ್ತೋರ್ವ ವಿದ್ಯಾರ್ಥಿ ಗಾಯಗೊಂಡ ಘಟನೆ ಮೈಸೂರಿನ ಕನಕದಾಸನಗರದಿಂದ ವರದಿಯಾಗಿದೆ. ಕನಕದಾಸನಗರದಲ್ಲಿ ವಾಸವಿದ್ದು, ಮೈಸೂರಿನ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದ ಚಿತ್ರದುರ್ಗ ಜಿಲ್ಲೆ ಕವಲಟ್ಟಿ ಗ್ರಾಮದ ಹೆಚ್.ಜಿ. ಯಶ್ವಂತ್(21) ಅಪಘಾತದಲ್ಲಿ ಸಾವನ್ನಪ್ಪಿದವನಾಗಿದ್ದು, ಈತನ ಸ್ನೇಹಿತನೇ ಆದ ಶಿವಮೊಗ್ಗ ನಿವಾಸಿಯಾಗಿದ್ದು, ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್. ಕೌಶಿಕ್ ಗಾಯಗೊಂಡು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಓರ್ವನಿಗೆ ಗಾಯ

ವಿವರ: ವಿದ್ಯಾರ್ಥಿ ಯಶ್ವಂತ್ ಏಪ್ರಿಲ್ 17ರಂದು ರಾತ್ರಿ 10.20ರ ಸುಮಾರಿನಲ್ಲಿ ಪಲ್ಸರ್ ಬೈಕ್ (ಕೆಎ 09–ಹೆಚ್‌ಪಿ 0551)ನಲ್ಲಿ ಸ್ನೇಹಿತ ಕೌಶಿಕ್ ಜೊತೆ ವೇಗವಾಗಿ ಬಂದು ನಿಯಂತ್ರಣ ತಪ್ಪಿ ಬೈಕ್ ಅನ್ನು ಕನಕದಾಸನಗರದ 3ನೇ ಹಂತ, 3ನೇ ಮುಖ್ಯರಸ್ತೆ ಹಾಗೂ 3ನೇ ಕ್ರಾಸ್‌ನಲ್ಲಿರುವ ಬಿ.ಎಲ್. ಮಂಜುನಾಥ್ ಎಂಬುವರ ಗೇಟ್‌ಗೆ ಡಿಕ್ಕಿ ಹೊಡೆದಿದ್ದಾನೆ. ಈ ರಭಸಕ್ಕೆ ಗೇಟ್ ಮುರಿದು ಮನೆಯ ಸೇಫ್ಟಿ ಕಬ್ಬಿಣದ ಬಾಗಿಲಿಗೆ ಬೈಕ್ ಗುದ್ದಿದೆ. ಇದೇ ವೇಳೆ ಯಶ್ವಂತ್‌ನ ತಲೆ ಬಾಗಿಲಿಗೆ ಅಪ್ಪಳಿಸಿದ್ದು, ತೀವ್ರವಾಗಿ ಗಾಯಗೊಂಡಿದ್ದಾನೆ. ಹಿಂಬದಿ ಸವಾರನಾಗಿದ್ದ ಕೌಶಿಕ್ ಕೂಡ ಗಾಯಗೊಂಡಿದ್ದು, ಮಾಹಿತಿ ಪಡೆದ ಪೊಲೀಸರು ಹೈವೇ ಪೆಟ್ರೋಲಿಂಗ್ ವಾಹನದಲ್ಲಿ ಕೌಶಿಕ್‌ನನ್ನು ಖಾಸಗಿ ಆಸ್ಪತ್ರೆಗೆ ಹಾಗೂ ಯಶ್ವಂತ್‌ನನ್ನು ಕೆಆರ್ ಆಸ್ಪತ್ರೆಗೆ ರವಾನಿಸಿದ್ದು, ಮಾರ್ಗಮಧ್ಯೆ ಯಶ್ವಂತ್ ಸಾವನ್ನಪ್ಪಿದ್ದಾನೆ ಎಂದು ವೈದ್ಯರು ದೃಢಪಡಿಸಿದ್ದಾರೆ. ಈ ಸಂಬಂಧ ಕೆಆರ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಳ್ಳಕ್ಕೆ ಬೈಕ್ ಬಿದ್ದು ಸವಾರ ಸಾವು

ಹುಲ್ಲಹಳ್ಳಿ,ಏ.19–ಹಳ್ಳಕ್ಕೆ ಬೈಕ್ ಬಿದ್ದ ಪರಿಣಾಮ ಸವಾರ ಸಾವನ್ನಪ್ಪಿ, ಇಬ್ಬರು ಹಿಂಬದಿ ಸವಾರರು ಗಾಯಗೊಂಡ ಘಟನೆ ಹುಲ್ಲಹಳ್ಳಿ ಸಮೀಪದ ಹರದನಹಳ್ಳಿ–ಹೊಮ್ಮರಗಳ್ಳಿ ಮಾರ್ಗದ ಚಂದ್ರಪ್ಪನ ಕಾಲುವೆ ಬಳಿ ಸಂಭವಿಸಿದೆ.

ಮತ್ತಿಬ್ಬರಿಗೆ ಗಾಯ

ಹೆಚ್.ಡಿ.ಕೋಟೆ ತಾಲೂಕು ಚಿಕ್ಕನಂದಿ ಗ್ರಾಮದ ಕೂಲಿ ಕಾರ್ಮಿಕ ಶಿವಕುಮಾರ್(23) ಅಪಘಾತದಲ್ಲಿ ಮೃತಪಟ್ಟವನಾಗಿದ್ದು, ಹಿಂಬದಿ ಸವಾರರಾಗಿದ್ದು, ಅದೇ ಗ್ರಾಮದ ರಾಹುಲ್(18) ಮತ್ತು ಮಹದೇವಸ್ವಾಮಿ(18) ಗಾಯಗೊಂಡಿದ್ದಾರೆ. ಈ ಮೂವರು ಏಪ್ರಿಲ್ 17ರಂದು ರಾತ್ರಿ 8.30ರಲ್ಲಿ ಹೀರೋ ಹೋಂಡಾ ಸ್ಪ್ಲೆಂಡರ್ ಪ್ಲಸ್ ಬೈಕ್‌ನಲ್ಲಿ (ಕೆಎ 09–ಹೆಚ್‌ಕ್ಯೂ 8666) ಹರದನಹಳ್ಳಿಯಿಂದ ಚಿಕ್ಕನಂದಿ ಗ್ರಾಮಕ್ಕೆ ತೆರಳುತ್ತಿದ್ದರು. ಶಿವಕುಮಾರ್ ಚಾಲನೆ ಮಾಡುತ್ತಿದ್ದ ಬೈಕ್ ನಿಯಂತ್ರಣ ತಪ್ಪಿ ಚಂದ್ರಪ್ಪನ ಕಾಲುವೆ ಬಳಿ ಹಳ್ಳಕ್ಕೆ ಬಿದ್ದಿದೆ. ಈ ಅಪಘಾತದಲ್ಲಿ ಶಿವಕುಮಾರ್ ಸ್ಥಳದಲ್ಲೇ ಸಾವನ್ನಪ್ಪಿದ್ದು, ರಾಹುಲ್ ಮತ್ತು ಮಹದೇವಸ್ವಾಮಿ ಗಾಯಗೊಂಡಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತನ್ವೀರ್ ಸೇಠ್, ಹರೀಶ್‌ಗೌಡ ಸೇರಿ ಹಲವರ ನಾಮಪತ್ರ ಸಲ್ಲಿಕೆ

● ಬೃಹತ್ ಮೆರವಣಿಗೆ ಮೂಲಕ ಶಕ್ತಿ ಪ್ರದರ್ಶನ ಮಾಡಿದ ಉಭಯ ಅಭ್ಯರ್ಥಿಗಳು ● ಎಲ್ಲೆಡೆ ರಾರಾಜಿಸಿದ ಕೈ ಬಾವುಟ



ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೊಮ್ಮಗ ಧವನ್ ರಾಕೇಶ್ ಕಾರ್ಯಕರ್ತರಿಗೆ ನಮಿಸುತ್ತಿರುವುದು.



ಎನ್.ಆರ್.ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ತನ್ವೀರ್ ಸೇಠ್ ಭರ್ಜರಿ ರೋಡ್ ಶೋ ನಡೆಸಿದರು.

ಮೈಸೂರು,ಏ.19 (ಆರ್‌ಕೆ, ಎಂಟಿವೈ)–ವಿಧಾನಸಭಾ ಚುನಾವಣೆ ಕಾವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಹಾಲಿ ಶಾಸಕ ತನ್ವೀರ್ ಸೇಠ್, ಮುಖಂಡರಾದ ಕೆ.ಹರೀಶ್ ಗೌಡ ಹಾಗೂ ಕರ್ನಾಟಕ ಪ್ರಜಾ ಪಾರ್ಟಿ ಅಧ್ಯಕ್ಷ ಬಿ.ಶಿವಣ್ಣ ಸೇರಿದಂತೆ ಇನ್ನಿತರರು ಉಮೇದುವಾರಿಕೆ ಸಲ್ಲಿಸಿದರು.

ತನ್ವೀರ್ ಸೇಠ್ ನಾಮಪತ್ರ ಸಲ್ಲಿಕೆ: ಮೈಸೂರಿನ ಎನ್.ಆರ್.ಕ್ಷೇತ್ರದಿಂದ ಮತ್ತೆ ವಿಧಾನಸಭೆಗೆ ಆಯ್ಕೆ ಬಯಸಿ ಶಾಸಕ ತನ್ವೀರ್ ಸೇಠ್ ಅವರು ಅಪಾರ ಬೆಂಬಲಿಗರೊಂದಿಗೆ ತಮ್ಮ ನಾಮಪತ್ರ ಸಲ್ಲಿಸಿದರು.

ಮೈಸೂರಿನ ಉದಯಗಿರಿಯಲ್ಲಿರುವ ನಿವಾಸದಿಂದ ಎನ್.ಆರ್. ಮೊಹಲ್ಲಾದ ಗಾಂಧಿನಗರದ ಫೋರಂ ಮಾಲ್ ಬಳಿಗೆ ಬಂದು ಅಲ್ಲಿ ನೆರೆದಿದ್ದ ನೂರಾರು ಮಂದಿ ಕಾಂಗ್ರೆಸ್ ಕಾರ್ಯಕರ್ತರು, ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಎಸ್ಪಿ ಕಚೇರಿ ಸರ್ಕಲ್ ಮೂಲಕ ಸಾಗಿ ನಜರ್‌ಬಾದಿನ ಚಾಮುಂಡಿ ವಿಹಾರ ಕ್ರೀಡಾಂಗಣದ ಚುನಾವಣಾ ಕಚೇರಿಗೆ ತಲುಪಿದ ತನ್ವೀರ್ ಸೇಠ್, ನರಸಿಂಹರಾಜ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧೆ ಬಯಸಿ ತಮ್ಮ ಉಮೇದುವಾರಿಕೆ ಸಲ್ಲಿಸಿದರು.

ಮಾಜಿ ಮೇಯರ್ ಅಯೂಬ್ ಖಾನ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮುಖಂಡರಾದ ಉದಯಕುಮಾರ್ ಹಾಗೂ ಜಿ.ಎನ್.ಮಂಜುನಾಥ್ ಅವರು ನಾಮಪತ್ರ ಸಲ್ಲಿಸುವ ವೇಳೆ ತನ್ವೀರ್ ಸೇಠ್ ಜೊತೆ ಉಪಸ್ಥಿತರಿದ್ದರು. ಫೋರಂ ಮಾಲ್‌ನಿಂದ ಪಾದಯಾತ್ರೆ ಮೂಲಕ ಮೆರವಣಿಗೆಯಲ್ಲಿ ಬಂದ ತನ್ವೀರ್ ಸೇಠ್ ಅವರನ್ನು ಹೊತ್ತು ಮೆರೆದ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಪಕ್ಷದ ಬಾವುಟ ಹಿಡಿದು ಜೈಕಾರ ಕೂಗಿದರು.

ಮೆರವಣಿಗೆ ವೇಳೆ ಫೋರಂ ಮಾಲ್‌ನಿಂದ ನಜರ್‌ಬಾದ್ ಠಾಣೆ ಸರ್ಕಲ್‌ವರೆಗೆ ಆ ಮಾರ್ಗದ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅರ್ಧ ತಾಸು ಅಡ್ಡಿಯುಂಟಾಯಿತು. ಎನ್.ಆರ್. ಮತ್ತು ನಜರ್‌ಬಾದ್ ಠಾಣೆ ಪೊಲೀಸರು ವ್ಯಾಪಕ ಬಂದೋಬಸ್ತ್ ಮಾಡಿದ್ದರಲ್ಲದೆ, ಎನ್.ಆರ್. ಸಂಚಾರ ಠಾಣೆ ಪೊಲೀಸರು ಉಪಸ್ಥಿತರಿದ್ದು, ವಾಹನ ಸಂಚಾರ ಸುಗಮಗೊಳಿಸಿದರು.

ಪ್ರದೀಪ್‌ಚಂದ್ರ, ಬಷೀರ್ ಅಹಮದ್, ಅಯಾಜ್ ಪಾಷ, ಶಾಂತಕುಮಾರಿ, ಶ್ರೀಧರ, ವಿಶ್ವರಾಜ್, ಶಿವರಾಜ್, ಎ.ಜೆ. ಅರ್ಜುನ್ ಕುಮಾರ್, ಸುಲ್ಯೆಮಾನ್, ಮಂಜುಳ, ಭಾಗ್ಯ, ಕುಮಾರಿ, ಎಂ.ಎ.ಕಮಲ ಅನಂತರಾಮು ಸೇರಿದಂತೆ 600ಕ್ಕೂ ಹೆಚ್ಚು ಮಂದಿ ಕಾಂಗ್ರೆಸ್ ಕಾರ್ಯಕರ್ತರು, ಬೆಂಬಲಿಗರು ಮೆರವಣಿಗೆಯಲ್ಲಿ ತನ್ವೀರ್ ಸೇಠ್ ಜೊತೆ ಪಾಲ್ಗೊಂಡಿದ್ದರು.

ನಂತರ ಪ್ರತಿಕ್ರಿಯೆ ನೀಡಿದ ಅವರು, ಎಲ್ಲಾ ವರ್ಗದ ಜನರಿರುವ ಎನ್.ಆರ್. ಕ್ಷೇತ್ರದಲ್ಲಿ ಮತ್ತೊಮ್ಮೆ ಸ್ಪರ್ಧಿಸಲು ಅವಕಾಶ ಕಲ್ಪಿಸಿರುವ ಕಾಂಗ್ರೆಸ್ ಪಕ್ಷ ನನ್ನ ಮೇಲಿಟ್ಟಿರುವ ವಿಶ್ವಾಸವನ್ನು ನಾನೆಂದೂ ಮರೆಯುವುದಿಲ್ಲ. ಸಮಾನತೆ, ಸಾಮಾಜಿಕ ನ್ಯಾಯ, ಸಮಗ್ರ ಅಭಿವೃದ್ಧಿ ಮಂತ್ರದೊಂದಿಗೆ ಜನರ ಸೇವೆ ಮಾಡಲೆಂದು ನಾನು ಶಾಸಕನಾಗಿ ಆಯ್ಕೆ ಬಯಸಿ ನಾಮಪತ್ರ ಸಲ್ಲಿಸಿದ್ದೇನೆ. ಈ ಬಾರಿಯೂ ಕ್ಷೇತ್ರದ ಮತದಾರರು ನನ್ನನ್ನು ಕೈ ಹಿಡಿಯುತ್ತಾರೆಂದು ನಂಬಿಕೆ ಇದೆ ಎಂದರು.

ಚಾಮರಾಜದಲ್ಲಿ ಕೆ.ಹರೀಶ್‌ಗೌಡ ಶಕ್ತಿ ಪ್ರದರ್ಶನ: ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡ ಅಪಾರ ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಬಂದು ಪಾಲಿಕೆ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದರು.

ಇಂದು ಬೆಳಗ್ಗೆ ಕುಂಬಾರಕೊಪ್ಪಲಿನ ಮಹಾದೇಶ್ವರ ದೇವಾಲಯ, ಕೆ.ಜಿ. ಕೊಪ್ಪಲಿನ ಚಂದ್ರಮೌಳೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಬಳಿಕ ತೆರೆದ ವಾಹನದಲ್ಲಿ ಮುಡಾ ಮಾಜಿ ಅಧ್ಯಕ್ಷ ಡಿ.ಧ್ರುವಕುಮಾರ್, ಎನ್.ಆರ್.ಕ್ಷೇತ್ರದ ಮುಖಂಡ ಅಬ್ದುಲ್ಲಾ, ಪಾಲಿಕೆ ಸದಸ್ಯ ಜೆ.ಗೋಪಿ ಹಾಗೂ ಇನ್ನಿತರ ಮುಖಂಡರೊಂದಿಗೆ ಕೆ.ಜಿ.ಕೊಪ್ಪಲಿನ ಪೈಲ್ವಾನ್ ಬಸವಯ್ಯ ಅವರ ಪುತ್ಥಳಿಗೆ ಮಾಲಾರ್ಪಣೆ, ಚಾಮುಂಡೇಶ್ವರಿ ದೇವಾಲಯ, ಕಾಂತರಾಜ ಅರಸ್ ರಸ್ತೆ, ಫೈರ್ ಬ್ರಿಗೇಡ್ ರೋಡ್, ರಾಮಸ್ವಾಮಿ ವೃತ್ತ, ನಾರಾಯಣಶಾಸ್ತ್ರಿ ರಸ್ತೆ, ರಮಾವಿಲಾಸ ರಸ್ತೆ, ಸಯ್ಯಾಜಿರಾವ್ ರಸ್ತೆ, ಕಾಡಾ ಕಚೇರಿ ಮುಂಭಾಗ, ಗನ್‌ಹೌಸ್, ಬಿ.ಎನ್.ರಸ್ತೆ, ಹಾರ್ಡಿಂಗ್ ಸರ್ಕಲ್ ಮೂಲಕ ಕೋಟೆ ಆಂಜನೇಯಸ್ವಾಮಿ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಬಳಿಕ ಹಾರ್ಡಿಂಗ್ ವೃತ್ತ, ಬಿ.ಎನ್.ರಸ್ತೆ, ಪಾಠಶಾಲೆ ವೃತ್ತದ ಮೂಲಕ ಪಾಲಿಕೆ ಕಚೇರಿ ತಲುಪಿ ನಾಮಪತ್ರ ಸಲ್ಲಿಸಿದರು.

ಬೈಕ್ ರಾಲಿ: ಕಾಂಗ್ರೆಸ್ ಅಭ್ಯರ್ಥಿ ಹರೀಶ್ ಗೌಡ ನಾಮಪತ್ರ ಸಲ್ಲಿಕೆ ಹಿನ್ನೆಲೆಯಲ್ಲಿ ಕ್ಷೇತ್ರದ ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ಹೆಬ್ಬಾಳು ಬಡಾವಣೆ ಸೇರಿದಂತೆ ವಿವಿಧೆಡೆಯಿಂದ ನೂರಾರು ಮಂದಿ ಯುವಕರು ಬೈಕ್ ರಾಲಿ ನಡೆಸಿ ಹರೀಶ್‌ಗೌಡಗೆ ಬೆಂಬಲ ಸೂಚಿಸಿದರು.

ನಾಮಪತ್ರ ಸಲ್ಲಿಕೆ ವೇಳೆ ನಡೆದ ಮೆರವಣಿಗೆಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್‌ಗಳಾದ ಬಿ.ಕೆ.ಪ್ರಕಾಶ್, ಅಯೂಬ್ ಖಾನ್, ಕ್ಷೇತ್ರದ ಉಸ್ತುವಾರಿ ಈಶ್ವರ್ ಚಕ್ಕಡಿ, ಮುಖಂಡ ಮಾರ್ಕೆಟ್ ದಿನೇಶ್, ಪಾಲಿಕೆ ಸದಸ್ಯರಾದ ಗೋಪಿ, ಶಿವಕುಮಾರ್, ಉಷಾ ಕುಮಾರ್, ಪೈಲ್ವಾನ್ ಶ್ರೀನಿವಾಸ್, ಮಾಜಿ ಉಪಮೇಯರ್ ಮಹಾದೇವಪ್ಪ, ಮಾಜಿ ಸದಸ್ಯರಾದ ರಮೇಶ್, ಮುಖಂಡರಾದ ಬಾಲು, ಶಿವಮಾದು, ಒಂಟಿಕೊಪ್ಪಲು ಗುರುರಾಜ್, ಮೇಟಗಳ್ಳಿ ವಾಸು, ಡೆಲ್ಲಿ ರವಿ, ಕುಂಬಾರಕೊಪ್ಪಲು ಚೇತು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅಭ್ಯರ್ಥಿ ಕೆ.ಹರೀಶ್‌ಗೌಡ ಮಾತನಾಡಿ, ಕ್ಷೇತ್ರದ ನಾಯಕರು, ಕಾರ್ಯಕರ್ತರ ಸಮ್ಮುಖದಲ್ಲಿ ನಾಮಪತ್ರ ಸಲ್ಲಿಸಿದೆ. ಅಪಾರ ಸಂಖ್ಯೆಯ ಕಾರ್ಯಕರ್ತರು ಪಾಲ್ಗೊಳ್ಳುವ ಮೂಲಕ ಕಾಂಗ್ರೆಸ್ ಪಕ್ಷ ಗೆಲ್ಲಿಸುವ ಸಂದೇಶ ನೀಡಿದ್ದಾರೆ. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚುನಾವಣೆ ಎದುರಿಸುತ್ತೇನೆ. ಮಾಜಿ ಶಾಸಕ ವಾಸು ಕಾಂಗ್ರೆಸ್ ಪಕ್ಷದಲ್ಲಿ ಇರುತ್ತೇನೆ. ಮೋಸ ಮಾಡಲ್ಲ ಎಂದಿದ್ದಾರೆ. ಬಿಜೆಪಿಗೆ ಮಗ ಹೋಗಿದ್ದರೂ ಕಾಂಗ್ರೆಸ್‌ಗೆ ನಿಷ್ಠೆಯಾಗಿರುವುದಾಗಿ ಹೇಳಿದ್ದಾರೆ. ವಾಸು ಅವರು ಪ್ರಚಾರಕ್ಕೆ ಬರುತ್ತಾರೆ. ಕ್ಷೇತ್ರದ ಜನ ಬದಲಾವಣೆ ಬಯಸಿದ್ದಾರೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಗೆಲುವು ನಿಶ್ಚಿತ. ಪ್ರಚಾರಕ್ಕಾಗಿ ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಸಚಿವರಾದ ಡಾ.ಹೆಚ್.ಸಿ.ಮಹಾದೇವಪ್ಪ, ಚೆಲುವರಾಯಸ್ವಾಮಿ, ಜಮೀರ್ ಅಹ್ಮದ್ ಸೇರಿದಂತೆ ರಾಜ್ಯಮಟ್ಟದ ನಾಯಕರು ಪ್ರಚಾರಕ್ಕೆ ಬರುತ್ತಾರೆ ಎಂದರು.



ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡ ಅಪಾರ ಬೆಂಬಲಿಗರೊಂದಿಗೆ ಮೆರವಣಿಗೆ ಮೂಲಕ ಸಾಗಿದರು.

ನಾಮಪತ್ರ ಸಲ್ಲಿಸಲು ಗುರುವಾರ ಕೊನೆ ದಿನವಾಗಿದ್ದು, ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಘಟಾನುಘಟಿ ನಾಯಕರು ಬುಧವಾರ ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ತೆರಳಿ ಶಕ್ತಿ ಪ್ರದರ್ಶಿಸುವ ಮೂಲಕ ನಾಮಪತ್ರ ಸಲ್ಲಿಸಿದ್ದಾರೆ. ಎನ್.ಆರ್. ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಶಾಸಕ ತನ್ವೀರ್ ಸೇಠ್, ಚಾಮುಂಡಿ ವಿಹಾರ ಕ್ರೀಡಾಂಗಣದ ಕಚೇರಿಯಲ್ಲಿ, ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್ ಗೌಡ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕರ್ನಾಟಕ ಪ್ರಜಾ ಪಾರ್ಟಿ ಅಧ್ಯಕ್ಷ ಬಿ.ಶಿವಣ್ಣ ಮಿನಿ ವಿಧಾನಸೌಧದಲ್ಲಿ ನಾಮಪತ್ರ ಸಲ್ಲಿಸಿದರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕರ್ನಾಟಕ ಪ್ರಜಾ ಪಾರ್ಟಿ ಅಧ್ಯಕ್ಷ ಬಿ.ಶಿವಣ್ಣ ಬುಧವಾರ ತಮ್ಮ ಅಪಾರ ಬೆಂಬಲಿಗರೊಂದಿಗೆ ಮೆರವಣಿಗೆ ಮೂಲಕ ಸಾಗಿ ಮಿನಿ ವಿಧಾನಸೌಧದಲ್ಲಿ ನಾಮಪತ್ರ ಸಲ್ಲಿಸಿದರು.



50ನೇ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡ ಶ್ರೀಮತಿ ನಿಂಗಮ್ಮ ಮತ್ತು ಕೆ.ಶ್ರೀನಿವಾಸ್ (ರೈಲ್ವೆ ಇಲಾಖೆ) ದಂಪತಿಗೆ ನಗರ ಪಾಲಿಕೆ ಸದಸ್ಯ ಕೊಪ್ಪಲ್ ಶಿವಕುಮಾರ್, ಮುಖಂಡರಾದ ಎನ್.ಐ.ಶ್ರೀನಿವಾಸ್, ಕಾರ್ಪೊರೇಷನ್ ಸಂಬಣ್ಣ, ಜೆಟಿಪಿ ರಮೇಶ್, ರಂಗಪ್ಪ, ಬಸಪ್ಪ, ವಿಕ್ರಾಂತ್ ಪಿ.ದೇವೇಗೌಡ, ಮಾದಪ್ಪ, ಕೃಷ್ಣಪ್ಪ, ಬೋರೇಗೌಡ, ಮಕ್ಕಳಾದ ಸಂತೋಷ್, ಸುರೇಶ್ ಆತ್ಮೀಯವಾಗಿ ಶುಭ ಕೋರಿದರು.

ಉಚಿತ ಮದ್ಯವರ್ಜನಾ ಶಿಬಿರ

ಮೈಸೂರು,ಏ.19–ಮೈಸೂರಿನ ಶ್ರೀರಾಂಪುರದಲ್ಲಿರುವ ಚೈತನ್ಯ ಫೌಂಡೇಷನ್ ವತಿಯಿಂದ ಏ.24ರಿಂದ ಮೇ 30ರವರೆಗೆ ಕುಡಿತ ಚಟ ಬಿಡಿಸುವ ಉಚಿತ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರದಲ್ಲಿ ಊಟ, ವಸತಿ, ವೈದ್ಯರ ಸೌಲಭ್ಯ ಮತ್ತು ಮಾರ್ಗದರ್ಶನ, ಆಪ್ತ ಸಮಾಲೋಚನೆ, ಯೋಗ, ಧ್ಯಾನ ನೀಡಲಾಗುವುದು. ಆಸಕ್ತರು ಹೆಚ್ಚಿನ ಮಾಹಿತಿಗೆ ಮೊ. 9164469570, 6361744109 ಸಂಪರ್ಕಿಸಬಹುದು.

ರಾಜ್ಯದ ಬಹುಪಾಲು ಪತ್ರಿಕೆಗಳಲ್ಲಿ ತಮ್ಮ ಲೇಖನ, ಅಂಕಣ ಪ್ರಕಟಗೊಂಡ ಹೆಗ್ಗಳಿಕೆ

ಸಾಹಿತಿ ಬನ್ನೂರು ಕೆ.ರಾಜು ಭಾಜನ; ಸುತ್ತೂರು ಶ್ರೀಗಳ ಮೆಚ್ಚುಗೆ

ಬನ್ನೂರು ಕೆ.ರಾಜು ಅವರ 60ನೇ ಜನ್ಮದಿನದ ಪ್ರಯುಕ್ತ ಶುಭ ಹಾರೈಕೆ ಸಮಾರಂಭ



ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅವರನ್ನು ಅವರ ಪತ್ನಿ ಮಹಾಲಕ್ಷ್ಮೀ ಅವರೊಂದಿಗೆ ಸುತ್ತೂರು ಶ್ರೀಗಳು ಅಭಿನಂದಿಸಿದರು.

ಮೈಸೂರು,ಏ.19(ಪಿಎಂ)– ಜ್ಞಾನಕ್ಕೆ ಮಿತಿ ಎಂಬುದಿಲ್ಲ. ಅಧ್ಯಯನಕ್ಕೆ ತೊಡಗಿದಷ್ಟು ಜ್ಞಾನ ವಿಸ್ತಾರಗೊಳ್ಳಲಿದೆ. ಅಂತೆಯೇ ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅಧ್ಯಯನಶೀಲರು. ಕರ್ನಾಟಕದ ಬಹುಪಾಲು ಪತ್ರಿಕೆಗಳಲ್ಲಿ ತಮ್ಮ ಲೇಖನ ಮತ್ತು ಅಂಕಣ ಪ್ರಕಟಗೊಂಡಿರುವ ಹೆಗ್ಗಳಿಕೆಯನ್ನು ಅವರು ಹೊಂದಿದ್ದಾರೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಜಿಲ್ಲಾ ಪತ್ರಕರ್ತರ ಸಂಘ ಮತ್ತು ಮೈಸೂರು ಕನ್ನಡ ವೇದಿಕೆ ಜಂಟಿ ಆಶ್ರಯದಲ್ಲಿ ಹಿರಿಯ ಪತ್ರಕರ್ತರೂ ಆದ ಸಾಹಿತಿ ಬನ್ನೂರು ಕೆ.ರಾಜು ಅವರ 60ನೇ ಜನ್ಮದಿನದ ಪ್ರಯುಕ್ತ 'ಬನ್ನೂರು ಕೆ.ರಾಜು–60' ಶೀರ್ಷಿಕೆಯಡಿ ಬುಧವಾರ ಹಮ್ಮಿಕೊಂಡಿದ್ದ ಶುಭ ಹಾರೈಕೆ ಸಮಾರಂಭದ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದರು.

ಬನ್ನೂರು ರಾಜು ಅವರು ತಮ್ಮ ಲೇಖನ–ಅಂಕಣಗಳ ಮೂಲಕ ಹೆಸರಾಗಿದ್ದಾರೆ. ಪ್ರಸ್ತುತ ಹೆಚ್ಚು ಪ್ರಾಮುಖ್ಯತೆ ಪಡೆದುಕೊಂಡಿರುವ ಅಂಕಣ ಬರಹದಲ್ಲಿ ರಾಜು ತಮ್ಮ ಛಾಪು ಮೂಡಿಸಿದ್ದಾರೆ. ಮಹತ್ವದ ಕೃತಿಗಳ ರಚನೆ ಮೂಲಕ ಸಾಹಿತ್ಯ ಕೃಷಿ ಕೈಗೊಂಡು ಖ್ಯಾತನಾಮರಾಗಿದ್ದ ಹಾ.ಮಾ. ನಾಯಕರು, ಅಂಕಣ ಬರಹ ಬರೆಯಲು ಆರಂಭಿಸಿದಾಗ, ದೊಡ್ಡ ಲೇಖಕರಾಗಿ ಹೀಗೆ ಅಂಕಣ ಬರೆಯುವುದು ಸೂಕ್ತವಲ್ಲ ಎಂಬ ಅಭಿಪ್ರಾಯ ಆಗ ಇತ್ತು. ಆದರೆ ಈಗ ಅಂಕಣ ಬರಹ ಹೆಚ್ಚು ಪ್ರಾಮುಖ್ಯತೆ ಪಡೆದುಕೊಂಡಿದೆ. ಇಂತಹ ಅಂಕಣ ಬರಹದಲ್ಲಿ ರಾಜು ವಿಶಿಷ್ಟ ಛಾಪು ಮೂಡಿಸಿದ್ದಾರೆ ಎಂದು ಪ್ರಶಂಸಿಸಿದರು.

ರಾಜು ಅವರು ತಮ್ಮ ಲೇಖನಗಳಿಗೆ ಮಾಹಿತಿ ಸಂಗ್ರಹಿಸುವಲ್ಲಿ ವಿಶೇಷ ಪರಿಣಿತಿ ಹೊಂದಿದ್ದಾರೆ. ಪೂರ್ವಭಾವಿ ಸಿದ್ಧತೆ ಇಲ್ಲದೇ ಯಾವುದೇ ಮಾಹಿತಿ ಕೇಳಿದರೂ ತಕ್ಷಣಕ್ಕೆ ಕೊಡಬಲ್ಲ ಸಾಮರ್ಥ್ಯ ಅವರಿಗಿದೆ. ಮಕ್ಕಳ ಸಾಹಿತ್ಯದಲ್ಲೂ ಕೃಷಿ ಮಾಡಿರುವ ರಾಜು ಅವರು, ಮಕ್ಕಳಿಗೆ ಸರಳವಾಗಿ ಅರ್ಥವಾಗುವಂತೆ ಕಥೆಗಳ ಪುಸ್ತಕಗಳನ್ನು ಬರೆದಿದ್ದಾರೆ. ಸರಳ ಸಜ್ಜನಿಕೆ ವ್ಯಕ್ತಿ ರಾಜು ಅವರ 60ನೇ ವರ್ಷದ ಜನ್ಮದಿನದಂದು ಶುಭ ಹಾರೈಕೆ ಸಮಾರಂಭ ಏರ್ಪಡಿಸಿರುವುದು ಸಂತಸದ ಸಂಗತಿ. ಅವರ ಸಾಹಿತ್ಯದ ಕೈಂಕರ್ಯ ಹೀಗೆಯೇ ಮುಂದುವರೆಯಲಿ ಎಂದು ಜನ್ಮದಿನದ ಶುಭ ಹಾರೈಸಿ, ಆಶೀರ್ವದಿಸಿದರು.

ಸಮಾರಂಭ ಉದ್ಘಾಟಿಸಿದ ವೈದ್ಯರೂ ಆದ ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಕೆ.ಮಹದೇವ್ ಮಾತನಾಡಿ, ನಮ್ಮದೇ ಬನ್ನೂರಿನವರಾದ ರಾಜು ಬಹಳ ಸ್ವಾಭಿಮಾನಿಗಳು. 1975ರಲ್ಲಿ ನಾನು ಮೈಸೂರು ವಿವಿ ಸಿಂಡಿಕೇಟ್ ಸದಸ್ಯನಾಗಿದ್ದೆ. ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ರಾಜು ಅವರು ನಾನು ಅವರ ಊರಿನವನು ಎಂದು ಗೊತ್ತಿದ್ದರೂ ಯಾವುದೇ ಸಹಾಯ ಪಡೆಯಲಿಲ್ಲ. ಅವರ ವಿದ್ಯಾರ್ಥಿಜೀವನ ಕಷ್ಟ ದಿನಗಳಾಗಿದ್ದವು. ಆಗ ನನಗೆ ಸಹಾಯ ಮಾಡುವ ಅವಕಾಶ ಇದ್ದರೂ ಅವರು ಅದನ್ನು ಬಳಸಿಕೊಳ್ಳಲಿಲ್ಲ ಎಂದರು.

ಸಾಹಿತ್ಯ ಪರಿಷತ್ತಿನ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜು ಅವರು ಸ್ಪರ್ಧಿಸಿದಾಗ ಮಾತ್ರ ನನ್ನ ಸಹಕಾರ ದೊರೆಯುವಂತಾಯಿತು. ವಿದ್ವಾಂಸರು ಎನ್ನಿಸಿಕೊಂಡವರಿಗಿಂತಲೂ ಇವರಿಗೆ ವಿದ್ವತ್ ಇದೆ. ಅವರ ಅಭಿಮಾನಿಯಾಗಿ ಇಂದಿಲ್ಲಿಗೆ ಬಂದಿದ್ದೇನೆ. ಅವರ ಮುಂದಿನ ಕಾರ್ಯಚಟುವಟಿಕೆಗಳಿಗೆ ನನ್ನ ಸಹಕಾರ ಯಾವಾಗಲೂ ಇರುತ್ತದೆ. ನನ್ನ ಊರಿನ ಮಿತ್ರರಾದ ಅವರಿಗೆ ಜನ್ಮದಿನದ ಶುಭ ಹಾರೈಸುತ್ತೇನೆ ಎಂದು ಹೇಳಿದರು. ಸಾಹಿತಿ ಡಿ.ಎನ್. ಕೃಷ್ಣಮೂರ್ತಿ, ಬನ್ನೂರು ರಾಜು ಕುರಿತು ಮಾತನಾಡಿ ಅವರೊಂದಿಗಿನ ಒಡನಾಟ ಸ್ಮರಿಸಿದರು.

ಅಭಿನಂದನೆ: ಇದಕ್ಕೂ ಮುನ್ನ ಬನ್ನೂರು ರಾಜು ಅವರನ್ನು ಅವರ ಪತ್ನಿ ಮಹಾಲಕ್ಷ್ಮೀ ಅವರೊಂದಿಗೆ ಸನ್ಮಾನಿಸಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ಪತ್ರಕರ್ತ ರಾಘವೇಂದ್ರ, ನಿವೃತ್ತ ಪ್ರಾಂಶುಪಾಲ ಕಾಡ್ನೂರು ಶಿವೇಗೌಡ, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ ಮತ್ತಿತರರು ಹಾಜರಿದ್ದರು.

ಸುತ್ತೂರು ಶ್ರೀಗಳಾದಿಯಾಗಿ ಎಲ್ಲರ ಅಭಿನಂದನೆ ಲಭಿಸಿದ್ದು ಯೋಗ...

ನನಗೆ ಯೋಗ್ಯತೆ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಯೋಗವಂತೂ ಖಂಡಿತ ಇದೆ. ಏಕೆಂದರೆ ಸುತ್ತೂರು ಶ್ರೀಗಳಾದಿಯಾಗಿ ಎಲ್ಲರೂ ಸೇರಿ ಅಭಿನಂದನೆ ಸಲ್ಲಿಸುತ್ತಿರುವುದನ್ನು ನನ್ನ ಇಡೀ ಜೀವಮಾನದಲ್ಲಿ ಮರೆಯಲಾಗದು.

–ಬನ್ನೂರು ಕೆ.ರಾಜು

ಮೈಸೂರು ಮಿತ್ರ ಗುರುವಾರ 20 ಏಪ್ರಿಲ್ 2023

ಕೊಡವರಿಗೆ ಭೂ ರಾಜಕೀಯ ಸ್ವಾಯತ್ತತೆ ಬೇಡಿಕೆ

ಆಯೋಗ ರಚಿಸಲು ಹೈಕೋರ್ಟ್ ನೋಟೀಸ್

ಕೊಡವ ನ್ಯಾಷನಲ್ ಕೌನ್ಸಿಲ್ ಹೋರಾಟಕ್ಕೆ ಮೊದಲ ಜಯ



ಮಡಿಕೇರಿ, ಏ.19– ಕೊಡವ ನ್ಯಾಷನಲ್ ಕೌನ್ಸಿಲ್‌ನ ಬೇಡಿಕೆಯಾಗಿರುವ ಕೊಡವರಿಗೆ ಭೂ ರಾಜಕೀಯ ಸ್ವಾಯತ್ತತೆ ನೀಡಬೇಕು ಹಾಗೂ ಜನಾಂಗಕ್ಕೆ ದೊರಕಬೇಕಾದ ಬುಡಕಟ್ಟು ಸ್ಥಾನ ಮಾನದ ಬೇಡಿಕೆಯನ್ನು ಪೂರೈಸಲು ಆಯೋಗ ರಚಿಸಬೇಕೆಂದು ಕರ್ನಾಟಕ ಉಚ್ಚ ನ್ಯಾಯಾಲಯವು ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ನೋಟೀಸ್ ನೀಡಿದೆ.

ಜನಾಂಗದ ಬೇಡಿಕೆಗಳ ಪೂರೈಕೆಗೆ ಆಯೋಗ ರಚಿಸುವಂತೆ ಮಾಜಿ ಕೇಂದ್ರ ಕಾನೂನು ಸಚಿವ ಹಾಗೂ ಮಾಜಿ ರಾಜ್ಯಸಭಾ ಸದಸ್ಯ ಡಾ.ಸುಬ್ರಮಣಿಯನ್ ಸ್ವಾಮಿ ಅವರು ಏ.6ರಂದು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ಏ.17 ರಂದು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪ್ರಸನ್ನ ಬಿ.ವರಾಲೆ ಅವರನ್ನೊಳಗೊಂಡ ಪೀಠ, ಅರ್ಜಿಯಲ್ಲಿನ ಮನವಿಯಂತೆ ಸಿ.ಎನ್.ಸಿ ಬೇಡಿಕೆಗಳ ಈಡೇರಿಕೆಗೆ ಆಯೋಗ ರಚಿಸುವಂತೆ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ನೋಟೀಸ್ ಜಾರಿ ಮಾಡಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು. ನಾಚಪ್ಪ ತಿಳಿಸಿದ್ದಾರೆ. ಇದರಿಂದ ಸಿಎನ್‌ಸಿ ಹೋರಾಟಕ್ಕೆ ಮೊದಲ ಜಯ ಸಿಕ್ಕಿದಂತಾಗಿದೆ ಡಾ.ಸುಬ್ರಮಣಿಯನ್ ಸ್ವಾಮಿ ಅವರು ಏ.6ರಂದು ವಕೀಲ ಸತ್ಯ ಸಬರ್‌ವಾಲ ಅವರ ಮೂಲಕ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು.

ಯುವ ಅಧಿಕಾರಿ ವಿಂಗ್ ಕಮಾಂಡರ್ ಮಂದಪಂಡ ತಿಮ್ಮಯ್ಯಗೆ ಜನರಲ್ ತಿಮ್ಮಯ್ಯ ಪ್ರಶಸ್ತಿ

ಮಡಿಕೇರಿ, ಏ.19– ಭಾರತೀಯ ವಾಯುಪಡೆಯಲ್ಲಿ ಕರ್ತವ್ಯದಲ್ಲಿರುವ ಜಿಲ್ಲೆಯವರಾದ ಯುವ ಅಧಿಕಾರಿ ವಿಂಗ್ ಕಮಾಂಡರ್ ಮಂದಪಂಡ ತಿಮ್ಮಯ್ಯ ಅವರಿಗೆ ವೆಲ್ಲಿಂಗ್ಟನ್ ಸ್ಟಾಫ್ ಕಾಲೇಜಿನಲ್ಲಿ ತೋರಿರುವ ಸಾಧನೆಗಾಗಿ ಜನರಲ್ ತಿಮ್ಮಯ್ಯ ಪ್ರಶಸ್ತಿಯನ್ನು ನೀಡಲಾಗಿದೆ.



ಈ ಸ್ಟಾಫ್ ಕಾಲೇಜಿನಲ್ಲಿ ವಿವಿಧ ಚಟುವಟಿಕೆಗಳಲ್ಲಿ ಅತ್ಯುತ್ತಮ ಸಾಧನೆ ತೋರುವ ಅಧಿಕಾರಿಗಳಿಗೆ ಪ್ರಥಮ ಸ್ಥಾನಕ್ಕೆ ಫೀ.ಮಾ.ಮಾಣಿಕ್ ಷಾ ಪ್ರಶಸ್ತಿ ಹಾಗೂ 2ನೇ ಸ್ಥಾನಕ್ಕೆ ಜರರಲ್ ತಿಮ್ಮಯ್ಯ ಪ್ರಶಸ್ತಿಯನ್ನು ನೀಡಲಾಗುತ್ತದೆ. ಇದೀಗ ಮಂದಪಂಡ ತಿಮ್ಮಯ್ಯ ಅವರು ತಮ್ಮ ಸಾಧನೆಗಾಗಿ(ಬೆಸ್ಟ್ ಆಲ್‌ರೌಂಡ್ ಸಾಧನೆ) ಎರಡನೇ ಸ್ಥಾನ ಪಡೆಯುವುದರೊಂದಿಗೆ ಇವರಿಗೆ ಜನರಲ್ ತಿಮ್ಮಯ್ಯ ಪ್ರಶಸ್ತಿ ನೀಡಲಾಗಿದೆ.

ಈ ಹಿಂದೆ ಸ್ಕ್ವಾಡ್ರನ್ ಲೀಡರ್ ಆಗಿದ್ದ ತಿಮ್ಮಯ್ಯ ವಿಂಗ್ ಕಮಾಂಡರ್ ಆಗಿ ಬಡ್ತಿಯನ್ನು ಪಡೆದಿದ್ದಾರೆ. ಇವರು ಬೇಂಗೂರಿನವರಾದ ಮಂದಪಂಡ ಚಂಗಪ್ಪ (ಸದಾ) ಹಾಗೂ ಗೌರಮ್ಮ(ರಜನಿ–ತಾಮನೆ ಇಟ್ಟಿರ) ದಂಪತಿ ಪುತ್ರರಾಗಿದ್ದಾರೆ.

ಮಡಿಕೇರಿ 4, ವಿರಾಜಪೇಟೆಯಿಂದ 3 ನಾಮಪತ್ರ ಸಲ್ಲಿಕೆ

ಮಡಿಕೇರಿ, ಏ.19– ಮಡಿಕೇರಿ ವಿಧಾನಸಭಾ ಕ್ಷೇತ್ರಕ್ಕೆ ಬುಧವಾರ 4 ಮಂದಿ ನಾಮಪತ್ರ ಸಲ್ಲಿಸಿದ್ದಾರೆ. ಇದುವರೆಗೆ 13 ಮಂದಿ ನಾಮಪತ್ರ ಸಲ್ಲಿಸಿದ್ದು, 19 ನಾಮಪತ್ರ ಸಲ್ಲಿಕೆಯಾಗಿದೆ. ಹಾಗೆಯೇ ವಿರಾಜಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬುಧವಾರ 3 ಮಂದಿ ನಾಮಪತ್ರ ಸಲ್ಲಿಸಿದ್ದು, ಇದುವರೆಗೆ 6 ಮಂದಿ ನಾಮಪತ್ರ ಸಲ್ಲಿಸಿದ್ದಾರೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ವಿರಾಜಪೇಟೆ: ಜೆಡಿಎಸ್, ಎಎಪಿ, ಎಸ್‌ಕೆಪಿ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ







ವಿರಾಜಪೇಟೆ, ಏ.19– **ವಿರಾಜಪೇಟೆ ವಿಧಾನಸಭಾ ಕ್ಷೇತ್ರದಿಂದ ಜಾತ್ಯಾತೀತ ಜನತಾ ದಳದ ಅಭ್ಯರ್ಥಿ ಮನ್ಸೂರ್ ಆಲಿ, ಆಮ್ ಆದ್ಮಿ ಪಕ್ಷದಿಂದ ಸಿ.ಎಸ್. ರವೀಂದ್ರ ಹಾಗೂ ಸರ್ವೋದಯ ಕರ್ನಾಟಕ ಪಕ್ಷದಿಂದ ಕಾಡ್ಯಮಾಡ ಮನು ಸೋಮಯ್ಯ ಅವರುಗಳು ತಾಲೂಕು ಕಛೇರಿಯಲ್ಲಿ ಬುಧವಾರ ಚುನಾವಣಾಧಿಕಾರಿ ಶಬಾನಾ ಎಂ.ಶೆಖ್ ಅವರಿಗೆ ನಾಮಪತ್ರ ಸಲ್ಲಿಸಿದ್ದಾರೆ.**

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾ ಅಧ್ಯಕ್ಷ ಕೆ.ಎಂ.ಗಣೇಶ್ ಮಾತನಾಡಿ, ಈ ಹಿಂದೆ ಹೆಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಸಂದರ್ಭ 14 ತಿಂಗಳ ಅವದಿಯಲ್ಲಿ 2018 ಮತ್ತು 19ರಲ್ಲಿ ಕೊಡಗಿನ ಪ್ರಕೃತಿ ವಿಕೋಪ ಸಂಭವಿಸಿದಾಗ ಕೊಡಗಿನ ಜನರ ಸಂಕಷ್ಟಕ್ಕೆ ಸ್ಪಂದಿಸಿ ಪರಿಹಾರದ ಅನುದಾನ, ಮನೆ ನಿರ್ಮಾಣಕ್ಕೆ ಅನುದಾನ ಹಾಗೂ ಬಾಡಿಗೆ ಮನೆಯ ಭತ್ಯೆ ನೀಡಿ ಸಹಕಾರ ನೀಡಿದ್ದಾರೆ ಎಂದರು.

ಈ ಕ್ಷೇತ್ರದಲ್ಲಿ ಇಪ್ಪತ್ತು ವರ್ಷ ಜನಪ್ರತಿನಿಧಿಯಾಗಿದ್ದ ರಾಷ್ಟ್ರೀಯ ಪಕ್ಷದ ಕಾರ್ಯವೈಖರಿಯಿಂದ ಜನ ಭ್ರಮನಿರಶನಗೊಂಡಿದ್ದಾರೆ. ಸೂಕ್ತ ಅಭಿವೃದ್ಧಿ ಕೆಲಸಗಳು ಆಗಿಲ್ಲದಿರುವುದರಿಂದ ಬಿಜೆಪಿ ಪಕ್ಷದ ಮೇಲೆ ಜನರ ಒಲವು ಕಡಿಮೆಯಾಗಿದ್ದು, ಜೆಡಿಎಸ್ ಪಕ್ಷದಿಂದ ಈ ಕ್ಷೇತ್ರದಲ್ಲಿ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ನಾಮಪತ್ರ ಸಲ್ಲಿಕೆ ಸಂದರ್ಭ ಮಡಿಕೇರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ನಾಪಂಡ ಮುತ್ತಪ್ಪ, ಜಿಲ್ಲಾ ಅಲ್ಪ ಸಂಖ್ಯಾತ ಘಟಕದ ಅಧ್ಯಕ್ಷ ಇಸಾಕ್‌ಖಾನ್, ವಿರಾಜಪೇಟೆ ವಿಧಾನ ಸಭಾ ಕ್ಷೇತ್ರದ ಅಧ್ಯಕ್ಷ ಪಿ.ಎ.ಮಂಜುನಾಥ್, ಪಕ್ಷದ ಜಿಲ್ಲಾ ಘಟಕದ ಹಿರಿಯ ಉಪಾಧ್ಯಕ್ಷ ಪಾಣತಲೆ ವಿಶ್ವನಾಥ್ ಮಾತನಾಡಿದರು. ಈ ವೇಳೆ ಪಕ್ಷದ ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು. ಮೊದಲಿಗೆ ನಗರದ ಗಡಿಯಾರ ಕಂಬದಿಂದ ತಾಲೂಕು ಕಛೇರಿವರೆಗೆ ಪಕ್ಷದ ಕಾರ್ಯಕರ್ತರು, ಪ್ರಮುಖರು ಮೆರವಣಿಗೆ ನಡೆಸಿದರು.

ಆಮ್ ಆದ್ಮಿ ಪಾರ್ಟಿ: ವಿರಾಜಪೇಟೆ ವಿಧಾನಸಬಾ ಕ್ಷೇತ್ರದಿಂದ 'ಆಮ್ ಆದ್ಮಿ ಪಾರ್ಟಿ'ಯ ಅಭ್ಯರ್ಥಿ ಬಾಳೆಲೆ ಪೊನ್ನಪ್ಪ ಸಂತೆಯ ಸಿ.ಎಸ್. ರವೀಂದ್ರ ಅವರು ತಾಲೂಕು ಕಚೇರಿಯಲ್ಲಿ ಚುನಾವಣಾಧಿಕಾರಿ ಶಬನಾ ಎಂ.ಶೆಖ್ ಅವರಿಗೆ ಬುಧವಾರ ನಾಮಪತ್ರ ಸಲ್ಲಿಸಿದರು. ಈ ಸಂದರ್ಭ ಆಮ್ ಆದ್ಮಿ ಪಾರ್ಟಿಯ ಜಿಲ್ಲಾಧ್ಯಕ್ಷ ಬೋಜಣ್ಣ, ಸದಸ್ಯರಾದ ಅಪ್ಪಯ್ಯ, ಹೆಚ್.ಬಿ. ಪ್ರಥ್ವಿ ಮತ್ತಿತರರು ಉಪಸ್ಥಿತರಿದ್ದರು.

ಸರ್ವೋದಯ ಕರ್ನಾಟಕ ಪಕ್ಷ: ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಚುನಾವಣೆಗೆ 'ಸರ್ವೋದಯ ಕರ್ನಾಟಕ ಪಕ್ಷ'ದಿಂದ ರೈತ ಮುಖಂಡ ಕಾಡ್ಯಮಾಡ ಮನು ಸೋಮಯ್ಯ ಅವರು ಬುಧವಾರ ವಿರಾಜಪೇಟೆ ತಾಲೂಕು ಕಛೇರಿಯಲ್ಲಿ ಚುನಾವಣಾಧಿಕಾರಿ ಶಬಾನಾ ಎಂ.ಶೆಖ್ ಅವರಿಗೆ ನಾಮಪತ್ರ ಸಲ್ಲಿಸಿದರು. ಈ ಸಂದರ್ಭ ಸರ್ವೋದಯ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಪೂಣಚ್ಚ ಜಿಲ್ಲಾ ಖಜಾಂಚಿ ಇಟ್ಟಿರ ಬಬೀತಾ, ಜಿಲ್ಲಾ ಸಂಚಾಲಕ ಮಚ್ಚಿಮಾಡ ಶುಭಾಷ್ ಸುಬ್ಬಯ್ಯ, ಸಂಘಟನಾ ಕಾರ್ಯದರ್ಶಿ ದರ್ಶನ್ ಮಟ್ಟಣ್ಣಯ್ಯ, ವಕೀಲ ಸಿ.ಕೆಪೂವಣ್ಣ ಉಪಸ್ಥಿತರಿದ್ದರು.

ಏ.22ರಿಂದ ಬಾಳೆಯಡ ಕ್ರಿಕೆಟ್ ನಮ್ಮೆ 2023

ದಾಖಲೆಯ 252 ಕುಟುಂಬಗಳು ನೋಂದಾವಣೆ



ನಾಪೋಕ್ಲು, ಏ.19– ಇಲ್ಲಿಗೆ ಸಮೀಪದ ಚೆರಿಯಪರಂಬುವಿನ ಜನರಲ್ ಕೆ.ಎಸ್. ತಿಮ್ಮಯ್ಯ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿರುವ ಕೊಡವ ಕುಟುಂಬಗಳ ನಡುವಿನ ಬಾಳೆಯಡ ಕ್ರಿಕೆಟ್ ನಮ್ಮೆಗೆ ಭರದಿಂದ ಸಿದ್ಧತೆ ನಡೆದಿದ್ದು, ಏ.2 ರಂದು ಉದ್ಘಾಟನೆಯಾಗಲಿದೆ.

ಈ ಬಾರಿ ದಾಖಲೆಯ 252 ಕುಟುಂಬಗಳು ನೋಂದಾವಣೆ ಮಾಡಿಕೊಂಡಿವೆ ಎಂದು ಬಾಳೆಯಡ ಕ್ರಿಕೆಟ್ ನಮ್ಮೆ ಅಧ್ಯಕ್ಷ ಕರ್ನಲ್ ಸುಬ್ರಮಣಿ ನಾಪೋಕ್ಲುವಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಏ.22 ರ ಬೆಳಗ್ಗೆ 7.30 ಕ್ಕೆ ನಾಪೋಕ್ಲು ಭಗವತಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಕ್ರೀಡಾಂಗಣಕ್ಕೆ ಕುಟುಂಬಸ್ಥರು ಆಗಮಿಸಲಿದ್ದಾರೆ. 10.20ಕ್ಕೆ ಮುಖ್ಯ ಅತಿಥಿಗಳೊಂದಿಗೆ ಸಾಂಪ್ರದಾಯಿಕ ಉಡುಗೆಯೊಂದಿಗೆ ಮೈದಾನದಲ್ಲಿ ಜಾಥಾ ನಡೆಸಲಾಗುವುದು. ಧ್ವಜಾರೋಹಣ, ಉದ್ಘಾಟನಾ ಕಾರ್ಯಕ್ರಮ, ಸಾಂಸ್ಕೃತಿಕ ಕಾರ್ಯಕ್ರಮಗಳ ಬಳಿಕ ಚೆಟ್ಟಳ್ಳಿ ವಿಮೆನ್ಸ್ ತಂಡ–ಸಂಭ್ರಮ ಕೊಡವತೀಸ್ ಹಾಗೂ ಟಿ ಶೆಟ್ಟಿಗೇರಿ ಮಹಿಳಾ ತಂಡ–ಜೋಮಾಲೆ ಕೊಡವತೀಸ್ ತಂಡದಿಂದ ಪ್ರದರ್ಶನ ಪಂದ್ಯಾಟ ನಡೆಯಲಿದೆ.

ಏ.22ರಿಂದ ಮೇ ತಿಂಗಳ 21 ರವರೆಗೆ 30 ದಿನಗಳ ಕಾಲ ಪಂದ್ಯಾವಳಿ ನಡೆಯಲಿದ್ದು, ಉದ್ಘಾಟನಾ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಮಾಚಿಮಂಡ ಕರ್ನಲ್ ಮುತ್ತಪ್ಪ, ನಿವೃತ ಕರ್ನಲ್ ಮಹಾವೀರ ಚಕ್ರ ಪ್ರಶಸ್ತಿ ಪುರಸ್ಕೃತ ಪುಟ್ಟಿಚಂಡ ಗಣಪತಿ, ಪರ್ವತಾರೋಹಿ ಜಮ್ಮಡ ಪ್ರೀತಿ, ಒಲಂಪಿಯನ್ ಬೊಳ್ಳಂಡ ಪ್ರಮೀಳಾ ಅಯ್ಯಪ್ಪ ಪಾಲ್ಗೊಳ್ಳಲಿದ್ದಾರೆ. 30 ದಿನಗಳ ಕಾಲ ನಡೆಯುವ ಪಂದ್ಯಾವಳಿಯಲ್ಲಿ 2772 ಆಟಗಾರರು ಪಾಲ್ಗೊಳ್ಳಲಿದ್ದಾರೆ ಎಂದರು.

ವಿಜೇತ ತಂಡಗಳಿಗೆ ರಿಪಬ್ಲಿಕ್ ಟಿ.ವಿ ಚೇರಂಡ ಕಿಶನ್ ಪ್ರಾಯೋಜಿಸಿದ ಪ್ರಥಮ ಮತ್ತು ದ್ವಿತೀಯ ಆಕರ್ಷಕ ಟ್ರೋಫಿ, ನಗದು ಜೊತೆಗೆ ವೈಯಕ್ತಿಕ ಟ್ರೋಫಿ, ಪಂದ್ಯ ಪುರುಷ, ಉತ್ತಮ ಬ್ಯಾಟ್ಸ್ ಮನ್, ಆಲ್‌ರೌಂಡರ್, ಮ್ಯಾನ್ ಆಫ್ ದಿ ಫೈನಲ್, ಪಂದ್ಯ, ಮ್ಯಾನ್ ಆಫ್ ದಿ ಸೀರೀಸ್ ಪ್ರಶಸ್ತಿಗಳನ್ನು ನೀಡಲಾಗುವುದು.

ಮಾಜಿ ಒಲಂಪಿಯನ್ ಅರ್ಜುನ್ ಪ್ರಶಸ್ತಿ ಪುರಸ್ಕೃತ ಎಸ್.ವಿ. ಸುನಿಲ್ ಅವರು ಅವರ ತಾಯಿಯ ನೆನಪಿನಲ್ಲಿ ಅತೀ ಶಿಸ್ತುಬದ್ಧ ಆಟದ ತಂಡ, ಉತ್ತಮ ತಂಡ, ಉತ್ತಮ ಮಹಿಳಾ ಆಟಗಾರ್ತಿ, ಅಂತಿಮ ಆಟದ ಉತ್ತಮ ಆಟಗಾರ ಪ್ರಶಸ್ತಿ ನೀಡಲಿದ್ದಾರೆ. ಜೊತೆಗೆ ಬಾಳೆಯಡ ಕಿಶೋರ್ ಟ್ರೋಫಿ ನೀಡಲಿದ್ದಾರೆ ಎಂದು ಬಾಳೆಯಡ ಕ್ರಿಕೆಟ್ ನಮ್ಮೆ ಕಾರ್ಯದರ್ಶಿ ಸದಾ ಕುಶಾಲಪ್ಪ ಮಾಹಿತಿ ನೀಡಿದರು.

ಈ ಸಂದರ್ಭ ಬಾಳೆಯಡ ಕುಟುಂಬದ ಕಿಶೋರ್, ಪ್ರತೀಶ್, ಅಂಜು ಸುಬ್ರಮಣಿ ಹಾಜರಿದ್ದರು.

ಮಡಿಕೇರಿಯಲ್ಲಿ ಬೋಪಣ್ಣ ನಾಮಪತ್ರ ಸಲ್ಲಿಕೆ

ಮಡಿಕೇರಿ, ಏ.19– ಆಮ್ ಆದ್ಮಿ ಪಾರ್ಟಿಯ ಮಡಿಕೇರಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ದಕ್ಷಿಣ ಕೊಡಗಿನ ಕೆ.ಪಿ.ಬೋಪಣ್ಣ ಅವರು ಕಣಕ್ಕಿಳಿಯಲಿದ್ದಾರೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಭೋಜಣ್ಣ ಸೋಮಯ್ಯ ತಿಳಿಸಿದ್ದಾರೆ.



ಪತ್ರಿಕಾ ಹೇಳಿಕೆ ನೀಡಿರುವ ಅವರು ಆಮ್ ಆದ್ಮಿ ಪಾರ್ಟಿ ಜಿಲ್ಲೆಯ ಎರಡೂ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದು, ಬೋಪಣ್ಣ ಅವರು ಏ.20 ರಂದು ನಾಮಪತ್ರ ಸಲ್ಲಿಸಲಿದ್ದಾರೆ. ಪಕ್ಷದ ಇಬ್ಬರು ಅಭ್ಯರ್ಥಿಗಳನ್ನು ಮತದಾರರು ಗೆಲ್ಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬೋಪಣ್ಣ ಅವರು ಆಮ್ ಆದ್ಮಿ ಪಾರ್ಟಿಯಲ್ಲಿ ಹಲವು ವರ್ಷಗಳಿಂದ ಸಕ್ರಿಯರಾಗಿದ್ದು, ಕೋವಿಡ್ ಸಂದರ್ಭ ಮಾಸ್ಕ್, ನೊಂದವರಿಗೆ ಹಾಲು ಮತ್ತು ಆಹಾರ ವಿತರಣೆ ಮಾಡಿ ಸಮಾಜ ಸೇವೆ ಸಲ್ಲಿಸಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಸಹಿ ಸಂಗ್ರಹ ಅಭಿಯಾನ ಮತ್ತು ಬೆಂಗಳೂರಿನಲ್ಲಿ ಪಕ್ಷ ನಡೆಸಿದ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ ಎಂದು ಭೋಜಣ್ಣ ಸೋಮಯ್ಯ ತಿಳಿಸಿದ್ದಾರೆ.

ಇಂದಿನಿಂದ ದುರ್ಗಾ ಪರಮೇಶ್ವರಿ ದೇವರ ವಾರ್ಷಿಕ ಉತ್ಸವ

ಗೋಣಿಕೊಪ್ಪ, ಏ.19– ಅತ್ತೂರು ಗ್ರಾಮದ ದುರ್ಗಾಪರಮೇಶ್ವರಿ ದೇವರ ವಾರ್ಷಿಕ ಉತ್ಸವ ಏ.20 ರಿಂದ ಏ. 24 ರವರೆಗೆ ಜರುಗಲಿದೆ.

ಏ. 20 ರಂದು ಬೆಳಗ್ಗೆ 9 ಗಂಟೆಗೆ ಗನಪತಿ ಹೋಮ, ಮಹಾಪೂಜೆ, ಸಂಜೆ ಪ್ರಾರ್ಥನೆ, 6 ಗಂಟೆಗೆ ಕೊಡಿಮರ ನಿಲ್ಲಿಸುವ ಶಾಸ್ತ್ರ, ಅಂದಿ ಬೊಳಕ್, ಮಹಾಪೂಜೆ ನಡೆಯಲಿದೆ. ಏ.21 ರಂದು ಬೆಳಗ್ಗೆ 11 ಗಂಟೆಗೆ ಸಂಕಲ್ಪ ಇರ್‌ಬೊಳಕ್, ಮಧ್ಯಾಹ್ನ ಅನ್ನ ಸಂತರ್ಪಣೆ, ಸಂಜೆ 6 ಗಂಟೆಗೆ ಪ್ರಾರ್ಥನೆ, ತಂತ್ರಿ ಸುತ್ತು ಬಲಿ, ಮೂರ್ತಿ ಪರದಕ್ಷಿಣೆ, ಅಂದಿ ಬೊಳಕ್, ಸಾಮೂಹಿಕ ಅಲಂಕಾರ ಪೂಜೆ, ಅನ್ನ ಸಂತರ್ಪಣೆ ನಡೆಯಲಿದೆ. ಏ.22 ರಂದು ಬೆಳಗ್ಗೆ 5 ಗಂಟೆಗೆ ಇರ್‌ಬೊಳಕ್, 11 ಗಂಟೆಗೆ ಸಂಕಲ್ಪ ಇರ್‌ಬೊಳಕ್, ದೇವರ ಪ್ರದಕ್ಷಿಣೆ, ರಂಗಪೂಜೆ, ಮಹಾಪೂಜೆ, ಏ. 23 ರಂದು ಮುಂಜಾನೆ 5.30 ಗಂಟೆಗೆ ದೇವರ ದರ್ಶನ, ಉಷಾ ಪೂಜೆ, ನವಕಲಶ, ಭಕ್ತಾದಿಗಳ ಸೇವೆ, ಮಹಾಪೂಜೆ, ಅನ್ನಸಂತರ್ಪಣೆ, ನಿರ್ಮ, ತಮತ್ರ ಸುತ್ತು, ದೇವರ ಪ್ರದಕ್ಷಿಣೆ, ವಸಂತಪೂಜೆ, ಮಹಾಪೂಜೆ, ಏ. 24 ರಂದು ಬೆಳಗ್ಗೆ ನಿತ್ಯಪೂಜೆ, ಮಧ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ, ಸಾಯಂಕಾಲ 4.30 ಗಂಟೆಗೆ ದೇವರ ದರ್ಶನ, ಅವಬೃತ ಸ್ನಾನ, ರಾತ್ರಿ 7 ಗಂಟೆಗೆ ದೇವರ ನೃತ್ಯ, ಮಹಾಪೂಜೆ ನೆರವೇರಲಿದೆ.

ಅಪಾರ ಜನಸ್ತೋಮದ ನಡುವೆ ಸೋಮಣ್ಣ ನಾಮಪತ್ರ ಸಲ್ಲಿಕೆ





ಚಾಮರಾಜನಗರ, ಏ.19– ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಬುಧವಾರ ತಮ್ಮ ಅಪಾರ ಬೆಂಬಲಿಗರು ಹಾಗೂ ಕಾರ್ಯಕರ್ತರೊಂದಿಗೆ ತಾಲೂಕು ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಿದರು.

ಬೆಳಗ್ಗೆ ನಗರದ ಕೊಳದ ಗಣಪತಿ ದೇವಸ್ಥಾನ, ಮಾರಿಗುಡಿ ದೇವಸ್ಥಾನ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಬಳಿಕ ನಗರದಲ್ಲಿ ಆಯೋಜಿಸಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡರು. ನಂತರ ಸಹಸ್ರಾರು ಜನರ ಸಮ್ಮುಖದಲ್ಲಿ ಮೆರವಣಿಗೆಯಲ್ಲಿ ತೆರಳಿ ತಹಸೀಲ್ದಾರ್ ಕಚೇರಿಯಲ್ಲಿ ಚುನಾವಣಾಧಿಕಾರಿ ಯೋಗನಂದ ಅವರಿಗೆ ಉಮೇದುವಾರಿಕೆ ಸಲ್ಲಿಸಿದರು. ಸಂಸದ ಪ್ರತಾಪ ಸಿಂಹ, ಮಾಜಿ ಶಾಸಕ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಜಿಪಂ ಮಾಜಿ ಅಧ್ಯಕ್ಷೆ ನಾಗಶ್ರೀ ಪ್ರತಾಪ್, ಎಂ. ರಾಮಚಂದ್ರ ಹಾಜರಿದ್ದರು.

ಬೃಹತ್ ಮೆರವಣಿಗೆ: ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದ ಪಕ್ಕದ ಮೈದಾನದಿಂದ ಮೆರವಣಿಗೆ ಆರಂಭವಾಯಿತು. ಸೋಮಣ್ಣ ಸೇರಿದಂತೆ ಇತರ ನಾಯಕರು ತೆರೆದ ವಾಹನದಲ್ಲಿ ನಿಂತು ತೆರಳಿದರು. ಮುಂಭಾಗದಲ್ಲಿ ಸಹಸ್ರಾರು ಜನರು ಸಾಗಿದರು. ಪಕ್ಷದ ಬಾವುಟವನ್ನು ಹಿಡಿದು ತೆರಳಿದ ಪಕ್ಷದ ಕಾರ್ಯ ಕರ್ತರು ಬಿಜೆಪಿ ಹಾಗೂ ಸೋಮಣ್ಣ ಪರ ಘೋಷಣೆಗಳನ್ನು ಕೂಗಿದರು. ಉರಿ ಬಿಸಿಲನ್ನು ಲೆಕ್ಕಿಸದೆ ಸಾವಿರಾರು ಜನರು ಮೆರವಣಿಗೆಯಲ್ಲಿ ಸಾಗಿದರು. ದಾರಿಯುದ್ದಕ್ಕೂ ನೀರು, ಮಜ್ಜಿಗೆ ವಿತರಿಸಲಾಯಿತು. ಸಾವಿರಾರು ಜನರು ಆಗಮಿಸಿದ್ದರಿಂದ ನಗರದೆಲ್ಲೆಡೆ ಇಂದು ಬಿಜೆಪಿ ಆರ್ಭಟ ಜೋರಾಗಿತ್ತು.

ಕಾಲವೇ ಎಲ್ಲದಕ್ಕೂ ಉತ್ತರ

ಚಾಮರಾಜನಗರ, ಏ.19– ಕಾಲವೇ ಎಲ್ಲದಕ್ಕೂ ಉತ್ತರ ನೀಡಲಿದೆ ಎಂದು ಸಚಿವ ಹಾಗೂ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಹೇಳಿದರು.

ನಾಮಪತ್ರ ಸಲ್ಲಿಸುವ ಮೊದಲು ದೇವಸ್ಥಾನಗಳಿಗೆ ತೆರಳಿ ಪೂಜೆ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಸೋಮಣ್ಣ ಅವರಿಗೆ ಅವರ ಪಕ್ಷದ ವರಿಷ್ಠರು ಎರಡು ಕ್ಷೇತ್ರಗಳಿಗೆ ಟಿಕೆಟ್ ನೀಡಿ ಅವರನ್ನು ಹರಕೆಯ ಕುರಿ ಮಾಡಿದ್ದಾರೆ ಎಂದು ಸಿದ್ದರಾಮಯ್ಯ ಅವರು ಟೀಕಿಸಿದ್ದರು. ಇದಕ್ಕೆ ಉತ್ತರಿಸಿದ ಅವರು, ಕಾಲವೇ ಎಲ್ಲದಕ್ಕೂ ಉತ್ತರ ಕೊಡುತ್ತದೆ ಎಂದು ಮಾರ್ಮಿಕವಾಗಿ ಹೇಳಿದರು.

ಯಡಿಯೂರಪ್ಪ ಅವರು ಇದೇ ತಿಂಗಳು 25ರೊಳಗೆ ಪ್ರಚಾರಕ್ಕೆ ಬರಲಿದ್ದಾರೆ. ನನಗೆ ಎರಡು ಕ್ಷೇತ್ರ ಕೊಟ್ಟಿದ್ದಾರೆ. ಇದನ್ನು ಸವಾಲಾಗಿ ಸ್ವೀಕಾರ ಮಾಡುತ್ತೇನೆ. ನನಗೆ ಎಲ್ಲಾ ಸಮುದಾಯದವರು ಸಹಕಾರ ನೀಡುತ್ತಿದ್ದಾರೆ ಎಂದರು.

ಬಿಜೆಪಿ ಉಪಾಧ್ಯಕ್ಷನ ಮನೆ, ಶೋರೂಂ ಮೇಲೆ ಐಟಿ ದಾಳಿ

ಚಾಮರಾಜನಗರ, ಏ.19– ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪಿ. ವೃಷಬೇಂದ್ರಪ್ಪ ಅವರ ದ್ವಿಚಕ್ರ ವಾಹನ ಶೋ ರೂಂ ಹಾಗೂ ಮನೆ ಮೇಲೆ ಬುಧವಾರ ಆದಾಯ ತೆರಿಗೆ ಇಲಾಖೆ (ಐಟಿ) ಅಧಿಕಾರಿಗಳು ದಾಳಿ ನಡೆಸಿ ಪರಿಶೀಲಿಸಿದರು.

ನಗರದ ಜೋಡಿ ರಸ್ತೆಯಲ್ಲಿರುವ ವೃಷಬೇಂದ್ರಪ್ಪ ಮಾಲೀಕತ್ವದ ದ್ವಿಚಕ್ರ ವಾಹನ ಶೋ ರೂಂಗೆ ಅಧಿಕಾರಿಗಳು ವಾಹನ ಖರೀದಿಸುವ ನೆಪದಲ್ಲಿ ದಾಳಿ ನಡೆಸಿದರು. ಈ ವೇಳೆ ಶೋ ರೂಂನಲ್ಲಿದ್ದ ವೃಷಬೇಂದ್ರಪ್ಪ ಅವರನ್ನು ಅಧಿಕಾರಿಗಳು ಸಂಪರ್ಕಿಸಿ ನಮ್ಮ ಕಂಪನಿಗೆ ವಾಹನಗಳು ಬೇಕು ಎಂದಿದ್ದಾರೆ. ಇದಕ್ಕೆ ಉತ್ತರವಾಗಿ ವೃಷಬೇಂದ್ರಪ್ಪ ಮ್ಯಾನೇಜರ್ ಅವರನ್ನು ಸಂಪರ್ಕಿಸುವಂತೆ ಸೂಚಿಸಿ ಹೊರ ಹೋಗುವರು. ಈ ವೇಳೆ ಐಟಿ ಅಧಿಕಾರಿಗಳು ತಮ್ಮ ಗುರುತಿನ ಚೀಟಿ ತೋರಿಸಿ ತಾವು ಪರಿಶೀಲನೆಗಾಗಿ ಬಂದಿರುವುದಾಗಿ ತಿಳಿಸಿದರು ಎನ್ನಲಾಗಿದೆ.

"ಐಟಿಯವರು ಇಂದು ನನ್ನ ಮನೆ ಮತ್ತು ಶೋ ರೂಂ ಮೇಲೆ ದಾಳಿ ನಡೆಸಿ ಪರಿಶೀಲಿಸಿದರು. ನಾನು ರಾಜಕೀಯದ ಜೊತೆಗೆ ಉದ್ಯಮಿಯಾಗಿದ್ದೇನೆ. ಸರ್ಕಾರಕ್ಕೆ ಕಾನೂನುಬದ್ಧವಾಗಿ ತೆರಿಗೆಯನ್ನು ಪಾವತಿಸುತ್ತಿದ್ದೇನೆ. ಕೆಲವು ದಾಖಲಾತಿಗಳನ್ನು ಕಚೇರಿಗೆ ತರುವಂತೆ ಸೂಚಿಸಿದ್ದರು. ನಾನು ಅವುಗಳನ್ನು ಸಲ್ಲಿಸಿದೆ. ನನ್ನ ಏಳಿಗೆ ಸಹಿಸದವರು ದೂರು ನೀಡಿದ್ದರ ಪರಿಣಾಮ ಈ ದಾಳಿ ನಡೆದಿದೆ. – ಪಿ. ವೃಷಬೇಂದ್ರಪ್ಪ.

ನಂತರ ಅಧಿಕಾರಿಗಳು ಶೋ ರೂಂನಲ್ಲಿದ್ದ ದಾಖಲಾತಿಗಳನ್ನು ಪರಿಶೀಲಿಸಿದರು. ಬಳಿಕ ಭ್ರಮರಾಂಬ ಬಡಾವಣೆಯಲ್ಲಿರುವ ಅವರ ಮನೆಗೆ ತೆರಳಿ ಅಲ್ಲಿದ್ದ ದಾಖಲಾತಿಗಳನ್ನು ಪರಿಶೀಲಿಸಿದರು ಎನ್ನಲಾಗಿದೆ. ಅಧಿಕಾರಿಗಳಿಗೆ ಈ ವೇಳೆ ಅಕ್ರಮದ ಬಗ್ಗೆ ಯಾವುದೇ ದಾಖಲಾತಿಗಳು ದೊರೆತಿಲ್ಲ ಎನ್ನಲಾಗಿದೆ.

ನಾಗರಾಜು ನಿಧನ

ಚಾಮರಾಜನಗರ, ಏ.19– ನಗರದ ಕರಿನಂಜನಪುರ ಬಡಾವಣೆ ನಿವಾಸಿ ನಾಗರಾಜು(57) ಹೃದಯಾಘಾತದಿಂದ ಬುಧವಾರ ನಿಧನರಾದರು.



ಮೃತರು ಪತ್ನಿ, ಇಬ್ಬರು ಪುತ್ರರು ಅಪಾರ ಬಂಧು ಬಳಗವನ್ನ ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಕರಿನಂಜನಪುರದಲ್ಲಿ ನೆರವೇರಲಿದೆ.

ನನ್ನ ಸ್ಟೈಲೇ ಬೇರೆ: ಬಿಜೆಪಿ ಅಭ್ಯರ್ಥಿ ಸೋಮಣ್ಣ



ಚಾಮರಾಜನಗರ, ಏ.19– ನನ್ನ ಸ್ಟೈಲ್ ಬೇರೆ. ನನ್ನ ಕಾರ್ಯವೈಖರಿಯೇ ಬೇರೆ. ಬೆಂಗಳೂರಿನ ಗೋವಿಂದರಾಜ ನಗರದಂತೆ ಜಿಲ್ಲೆಯನ್ನು ಅಭಿವೃದ್ಧಿ ಪಡಿಸಲು ಮತದಾರರು ನನ್ನನ್ನು ಬೆಂಬಲಿಸುವಂತೆ ಸಚಿವ ಹಾಗೂ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಮನವಿ ಮಾಡಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದ ಬಳಿ ಇರುವ ಮೈದಾನದಲ್ಲಿ ಬುಧವಾರ ಆಯೋಜಿಸಿದ್ದ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು. ನನಗೆ ಪಕ್ಷದ ವರಿಷ್ಠರು ವರುಣ ಹಾಗೂ ಚಾಮರಾಜನಗರ ಕ್ಷೇತ್ರದಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಿದ್ದಾರೆ. ಕಾಲಾವಕಾಶ ಕಡಿಮೆ ಇದೆ. ನಾನು ವರುಣ ಕ್ಷೇತ್ರಕ್ಕೆ ಹೆಚ್ಚು ದಿನ ಪ್ರಚಾರಕ್ಕೆ ತೆರಳುತ್ತೇನೆ. ಇಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರೇ ಸೋಮಣ್ಣ. ನೀವೇ ಬಿಜೆಪಿ ಎಂದು ಪಕ್ಷದ ಕಾರ್ಯಕರ್ತರನ್ನು ಹುರಿದುಂಬಿಸಿದರು.

ಚಾಮರಾಜನಗರ ಬೇರೆ ಜಿಲ್ಲೆಯ ಹಾಗೆ ಅಭಿವೃದ್ಧಿ ಆಗಿಲ್ಲ. ಅಧಿಕಾರ ನನ್ನ ಅಪ್ಪನ ಆಸ್ತಿ ಅಲ್ಲ. ಆದರೆ ಭಗವಂತ ಅವಕಾಶ ಕಲ್ಪಿಸಿದ್ದಾನೆ. ಇದನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ಚಿಂತನೆ ಹಾಗೂ ದೂರದೃಷ್ಟಿ ನನಗಿದೆ. ಈ ಕ್ಷೇತ್ರದಲ್ಲಿ ಕಳೆದ 15 ವರ್ಷಗಳಿಂದ ಕಾಂಗ್ರೆಸ್‌ಗೆ ಅವಕಾಶ ಕಲ್ಪಿಸಿದ್ದೀರಿ. ಈ ಮುಂದಿನ 5 ವರ್ಷ ಬಿಜೆಪಿಗೆ ಅಧಿಕಾರ ನೀಡಿ ಎಂದು ಮತದಾರರಲ್ಲಿ ಸೋಮಣ್ಣ ಮನವಿ ಮಾಡಿದರು.

ಸಿದ್ದರಾಮಯ್ಯ ಅವರು ಸೋಮಣ್ಣನಿಗೂ ವರುಣಕ್ಕೂ ಏನು ಸಂಬಂಧ ಎಂದಿದ್ದಾರೆ. ನೀವು (ಸಿದ್ದರಾಮಯ್ಯ) ಬಾದಾಮಿಗೆ ಏಕೆ ಹೋಗಿದ್ರಿ. ಕೋಲಾರ ಕ್ಷೇತ್ರ ಕೊಡಿ ಎಂದು ಯಾಕ್ ಗಂಟು ಬಿದ್ದಿದ್ರಿ. ಸೋನಿಯಾಗಾಂಧಿ, ರಾಹುಲ್‌ಗಾಂಧಿಗೂ ಕೇರಳಕ್ಕೂ, ಕರ್ನಾಟಕಕ್ಕೂ ಏನ್ ಸಂಬಂಧ ಎಂದು ಪ್ರಶ್ನಿಸಿದ ವಿ. ಸೋಮಣ್ಣ, ನಾನು ಈ ಜಿಲ್ಲೆಯ ಮಗ ಅಲ್ಲ. ಇಲ್ಲಿ ಹುಟ್ಟಿಲ್ಲ. ಇಲ್ಲಿ ಸೋಮಣ್ಣನ ಶಕ್ತಿ ಇದಿಯಾ ಇಲ್ಲವ ಅಂತ ಮತದಾರರು ತೀರ್ಮಾನ ಮಾಡಬೇಕು ಎಂದರು.

ಸಿದ್ದರಾಮಯ್ಯಗೆ ಭಯ: ಸಂಸದ ಪ್ರತಾಪ್‌ಸಿಂಹ ಮಾತನಾಡಿ, ಸಿದ್ದರಾಮಯ್ಯ ಅವರು ವರುಣ ಕ್ಷೇತ್ರಕ್ಕೆ ಬಂದಿದ್ದರಿಂದ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹುಮ್ಮಸ್ಸು, ಉತ್ಸಾಹ ಉಂಟಾಗಿತ್ತು. ಇದನ್ನು ತಗ್ಗಿಸಲು ಈ ಭಾಗಕ್ಕೆ ವಿ. ಸೋಮಣ್ಣ ಅವರನ್ನು ಕರೆತರಲಾಗಿದೆ. ಸಿದ್ದರಾಮಯ್ಯ ಅವರ ಎದೆಯಲ್ಲಿ ಭಯ ಬರಬೇಕಿತ್ತು. ಈಗ ಆ ಭಯ ಬಂದಿದೆ. ಆ ಭಯ ನಮಗೆ ಖುಷಿ ಕೊಟ್ಟಿದೆ ಎಂದರು.

ವರುಣದಲ್ಲಿ ನಾನು ಗೋಲಿ, ಬುಗುರಿ ಆಡುತ್ತಿದ್ದೆ ಅಂತ ಸಿದ್ದರಾಮಯ್ಯ ಹೇಳಿದ್ದಾರೆ. ಇಂದಿರಾಗಾಂಧಿ ಚಿಕ್ಕಮಗಳೂರು, ಬಳ್ಳಾರಿಯಲ್ಲಿ ಸೋನಿಯಾಗಾಂಧಿ, ರಾಹುಲ್‌ಗಾಂಧಿ ವಯನಾಡಿನಲ್ಲಿ ಚುನಾವಣೆಯಲ್ಲಿ ನಿಂತಿದ್ದರು. ಇವರೆಲ್ಲಾ ಅಲ್ಲಿ ಗೋಲಿ, ಬುಗುರಿ ಹಾಡಿದ್ರಾ ಎಂದು ಪ್ರಶ್ನಿಸಿದ ಪ್ರತಾಪ್‌ಸಿಂಹ, ಈಗ ಸಿ. ಬಸವೇಗೌಡರ ಮನೆಗೆ ಭೇಟಿ ನೀಡಿದ್ದಾರೆ. ಅವರನ್ನು ಬಿಟ್ಟು ಎಷ್ಟೋ ವರ್ಷವಾಗಿತ್ತು. ಈಗ ನಾನು ನೀನು ಗೋಲಿ ಆಡುತ್ತಿದ್ದೆವು ಅಂತ ಹೇಳಿದ್ದಾರೆ. ರಾಜಶೇಖರ ಮೂರ್ತಿ ಅವರ ಸಂಬಂಧಿಕರ ಮನೆ, ತೋಟಗಳಿಗೆ ಸಿದ್ದರಾಮಯ್ಯ ದಾಳಿ ಮಾಡಿಸಿದ್ದಾರೆ. ಸಿದ್ದರಾಮಯ್ಯ ಅವರಿಗೆ ಸೋಲಿನ ಭಯ ಕಾಡುತ್ತಿದೆ. ಇಂತಹವನ್ನು ನಂಬಿಕೊಂಡ ಕಾಂಗ್ರೆಸ್‌ನವರಿಗೆ ಭವಿಷ್ಯ ಇಲ್ಲ ಎಂದರು.

ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣಸ್ವಾಮಿ, ಕ್ಷೇತ್ರ ಚುನಾವಣಾ ಪ್ರಭಾರಿ ಕೋಟೆ ಎಂ. ಶಿವಣ್ಣ, ಮಾಜಿ ಶಾಸಕ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಜಿಪಂ ಮಾಜಿ ಅಧ್ಯಕ್ಷೆ ಜಿ. ನಾಗಶ್ರೀ ಪ್ರತಾಪ್ ಮಾತನಾಡಿದರು. ಜಿಲ್ಲೆಯ ಚುನಾವಣಾ ಉಸ್ತುವಾರಿ ದಿಲೀಪ್ ಜಸ್ವಾಲ್, ಶಾಸಕ ಸಿ.ಎಸ್. ನಿರಂಜನ್‌ಕುಮಾರ್, ಕಾಡಾ ಅಧ್ಯಕ್ಷ ನಿಜಗುಣರಾಜು, ಜಿಲ್ಲಾಧ್ಯಕ್ಷ ನಾರಾಯಣ ಪ್ರಸಾದ್, ಮಂಗಲ ಶಿವಕುಮಾರ್, ಮುಖಂಡರಾದ ಎಂ. ರಾಮಚಂದ್ರ, ಡಾ. ಎ.ಆರ್. ಬಾಬು, ಅಮ್ಮನಪುರ ಮಲ್ಲೇಶ್, ಹನುಮಂತಶೆಟ್ಟಿ, ಸೋಮನಾಯಕ, ಪಾಪು, ಪ್ರಭುಸ್ವಾಮಿ, ಶಿವಕುಮಾರ್, ಆಶಾ ನಟರಾಜ್, ಬಾಲರಾಜು, ಶಾಂತಮೂರ್ತಿ, ವೃಷಭೇಂದ್ರಪ್ಪ, ವೀರಭದ್ರಸ್ವಾಮಿ, ಆರ್. ಸುಂದರ್, ದಯಾನಿಧಿ, ಕುಮಾರಸ್ವಾಮಿ, ಹೆಚ್.ಎಸ್. ಬಸವರಾಜು ಇತರರು ಉಪಸ್ಥಿತರಿದ್ದರು.

ಇಂದಿನಿಂದ ಚಿಣ್ಣರ ಬೇಸಿಗೆ ಸಂಭ್ರಮ

ಚಾಮರಾಜನಗರ, ಏ.19– 10 ರಿಂದ 16 ನೇ ವರ್ಷದ ವಯಸ್ಸಿನ ಮಕ್ಕಳಿಗೆ ಸ್ಥಳೀಯ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಪ್ರಕಾಶ ಭವನದಲ್ಲಿ ಏ.20, 21, 22 ರವರೆಗೆ 3 ದಿನಗಳವರೆಗೆ ಚಿಣ್ಣರ ಬೇಸಿಗೆ ಸಂಭ್ರಮದ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರಿಜಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಕ್ಕಳಲ್ಲಿ ಆನಂದಿಸಿ ಉತ್ತೇಜಿಸಿ ವಿನೋದ ತುಂಬಿದ ಬೇಸಿಗೆಯಲ್ಲಿ ವಿಶ್ರಾಂತಿ, ಪುನರುಜ್ಜೀವನಗೊಳಿಸುವಿಕೆ, ಆತ್ಮವಿಶ್ವಾಸ ಮತ್ತು ಮನಸ್ಸನ್ನು ಪ್ರೇರೇಪಿಸುವುದು, ವಿದ್ಯಾರ್ಥಿಗಳ ಜೀವನದ ಸಬಲೀಕರಣಕ್ಕೆ ಬೇಸಿಗೆ ಕ್ಯಾಂಪನ್ನು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ಶಿಬಿರವನ್ನು ಹಮ್ಮಿ ಕೊಳ್ಳಲಾಗಿದೆ. ಮಕ್ಕಳು ನೋಟ್ ಪುಸ್ತಕ ಮತ್ತು ಪೆನ್ನನ್ನು ಕಡ್ಡಾಯವಾಗಿ ತರಬೇಕಾಗಿ ಸೂಚಿಸಲಾಗಿದೆ. ವಿವರಗಳಿಗೆ 7483520495ನ್ನು ಇಲ್ಲವೆ 7899820430 ಸಂಪರ್ಕಿಸುವಂತೆ ಕೋರಿದೆ.

ಕಾಡಾನೆ ದಾಳಿ: ನಾಲ್ವರು ಬಾಲಕರಿಗೆ ಗಾಯ

ಚಾಮರಾಜನಗರ, ಏ.19– ದೇವಸ್ಥಾನದ ಜಾತ್ರೆ ಮಹೋತ್ಸವದ ಅಂಗವಾಗಿ ಚಪ್ಪರ ಹಾಕಿ ಮಲಗಿದ್ದ ಗಿರಿಜನರ ಮೇಲೆ ಕಾಡಾನೆ ದಾಳಿ ನಡೆಸಿದ ಪರಿಣಾಮ ನಾಲ್ವರು ಗಾಯಗೊಂಡಿರುವ ಘಟನೆ ಪುಣಜನೂರು ವಲಯ ಅರಣ್ಯ ಪ್ರದೇಶದ ವ್ಯಾಪ್ತಿಗೆ ಬರುವ ವೀರನ ಪುರ ಸಮೀಪದ ಎತ್ತೇಗೌಡನದೊಡ್ಡಿಯಲ್ಲಿ ಕಳೆದ ಬುಧವಾರ ರಾತ್ರಿ 2 ಗಂಟೆ ಸಮಯದಲ್ಲಿ ನಡೆದಿದೆ.



ಎತ್ತೇಗೌಡನದೊಡ್ಡಿ ಗ್ರಾಮದ ಗಿರಿಜನ ಬಾಲಕರಾದ ಮಣಿಕಂಠ (17), ಹರ್ಷ (14), ಸ್ವಾಮಿ (11), ಹಾಗೂ ಅಭಿ (16) ಕಾಡಾನೆ ದಾಳಿಗೆ ಒಳಗಾಗಿ ಯಡಪುರ ಬಳಿ ಇರುವ ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಗ್ರಾಮದ ಬಳಿ ಇರುವ ಜಡೇಸ್ವಾಮಿ ಜಾತ್ರಾ ಮಹೋತ್ಸವ ಇದೇ 24 ರಂದು ಹಮ್ಮಿಕೊಳ್ಳಲಾಗಿದ್ದು ಅದರ ಅಂಗವಾಗಿ ಗ್ರಾಮದ ಗಿರಿಜನರು ದೇವಸ್ಥಾನದ ಮುಂಭಾಗ ಚಪ್ಪರ ಹಾಕಲು ಮುಂದಾಗಿದ್ದರು. ಸ್ವಲ್ಪ ಕೆಲಸ ಮುಗಿಯುತ್ತಿದ್ದಂತೆ ರಾತ್ರಿ ಆಗಿದ್ದರಿಂದ ಎಲ್ಲರೂ ದೇವಾಲಯದ ಬಳಿ ಬೆಂಕಿ ಹಚ್ಚಿ ಮಲಗಿದ್ದರು.

ಏಕಾಏಕಿ ಕಾಡಿನಿಂದ ಬಂದ ಒಂಟೀ ಸಲಗ ಮಲಗಿದ್ದ 20 ಮಂದಿ ಗಿರಿಜನರ ಮೇಲೆ ತೀವ್ರ ದಾಳಿ ನಡೆಸಿತು, ಇದರಲ್ಲಿ ನಾಲ್ವರು ಬಾಲಕರನ್ನು ಎತ್ತಿ ಬೀಸಾಡಿದ ಪರಿಣಾಮ ಕೈ, ಕಾಲು ಮತ್ತು ಇತರ ಭಾಗಗಳಿಗೆ ಗಾಯವುಂಟಾಗಿ ರಕ್ತ ಹರಿಯಲಾರಂಭಿಸಿತು, ಇನ್ನು ಕೆಲವರಿಗೆ ಸಣ್ಣ ಪುಟ್ಟ ಗಾಯವಾಗಿದೆ. ಮಕ್ಕಳು ಮೇಲಲ್ಲದೇ ದೇವಸ್ಥಾನದ ಮುಂಭಾಗ ವಿರುವ ಚಪ್ಪರದ ಕಲ್ನಾರ್ ಶೀಟ್‌ಗಳನ್ನು ಕಿತ್ತು ಧ್ವಂಸ ಮಾಡಿದೆ, ಘಟನೆಯಿಂದ ಎಚ್ಚರವಾಗುತ್ತಿದ್ದಂತೆ ಉಳಿದವರು ಎದ್ದು ಬಿದ್ದು ಓಡಿ ಪ್ರಾಣ ಉಳಿಸಿಕೊಂಡಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆ ಪುಣಜನೂರು ವಲಯ ಅರಣ್ಯಾಧಿಕಾರಿ ನಿಸಾರ್ ಅಹಮದ್ ಹಾಗೂ ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿ ಗಾಯಗೊಂಡ ಬಾಲಕರನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲು ನೆರವಾಗಿದ್ದಾರೆ.

ವಿದ್ಯುತ್ ಕಡಿತದಿಂದ ಆನೆ ದಾಳಿ: ಸೆಸ್ಕ್ ರಾತ್ರಿ ವಿದ್ಯುತ್ ಕಡಿತ ಮಾಡಿದ ಪರಿಣಾಮ ಕಾಡಾನೆ ದಾಳಿ ಮಾಡಿದೆ, ಬೆಳಕು ಇದ್ದರೆ ಆನೆ ಇತ್ತ ಸುಳಿಯುತ್ತ ಇರಲಿಲ್ಲ ಎಂದು ಗಾಮದ ಮುಖಂಡ ನಾಗನಾಯ್ಕ ತಿಳಿಸಿದರು. ಆಗಿಂದಾಗ್ಗೆ ಕಾಡು ಪ್ರಾಣಿಗಳು ಗ್ರಾಮಕ್ಕೆ ದಾಳಿ ನಡೆಸಿ ಬೆಳೆ ಹಾನಿ ಹಾಗೂ ದುರ್ಘಟನೆ ಗಳು ನಡೆಯುತ್ತಿರುತ್ತದೆ ಆದ್ದರಿಂದ ಅರಣ್ಯ ಇಲಾಖೆ ಅಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕು, ಈಗ ಗಾಯಗೊಂಡಿರುವ ಬಾಲಕರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಒತ್ತಾಯಿಸಿದ್ದಾರೆ.

ವಿವಿಧ ಮಠಾಧೀಶರ ಆಶೀರ್ವಾದ ಪಡೆದ ಕೆ.ಆರ್.ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀವತ್ಸ







ಮೈಸೂರು, ಏ.19(ಎಸ್‌ಬಿಡಿ)– ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಬುಧವಾರ ವಿವಿಧ ಮಠಾಧೀಶರ ಭೇಟಿ ಮಾಡಿ, ಆಶೀರ್ವಾದ ಪಡೆದರು. ಪರಕಾಲ ಮಠದ ಪೀಠಾಧಿಪತಿಗಳಾದ ಶ್ರೀ ಅಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳ ವರ್ಧಂತಿ ಮಹೋತ್ಸವದ ಹಿನ್ನೆಲೆಯಲ್ಲಿ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದ ಶ್ರೀವತ್ಸ, ಬಳಿಕ ಸುತ್ತೂರು ಮಠದ ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಸ್ವಾಮೀಜಿ, ಅವಧೂತ ದತ್ತಪೀಠ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀದತ್ತವಿಜಯಾನಂದ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿಯವರ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಶಿಕ್ಷಕರ ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯ ನಿರಂಜನ ಮೂರ್ತಿ, ನಗರ ಪಾಲಿಕೆ ಮಾಜಿ ಸದಸ್ಯ ಜಗದೀಶ್, ಮಾಧ್ಯಮ ಸಹ ಸಂಚಾಲಕ ಪ್ರದೀಪ್ ಕುಮಾರ್, ನಗರ ಮಾಧ್ಯಮ ಸಹ ವಕ್ತಾರ ಕೇಬಲ್ ಮಹೇಶ್, ಖಜಾಂಚಿ ಖಂಡೇಶ್ ಕಿಶೋರ್, ನಾಗರಾಜು, ರಘುನಂದನ್ ಮತ್ತಿತರ ಮುಖಂಡರಿದ್ದರು.

ಮಕ್ಕಳ ಸ್ಮರಣ ಶಕ್ತಿ ಯೋಗ ಶಿಬಿರದ ಉಚಿತ ಪರಿಚಯ ಕಾರ್ಯಕ್ರಮ

ಮೈಸೂರು,ಏ.19–ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಋಷಿ ಸಂಸ್ಕೃತಿ ವಿದ್ಯಾಕೇಂದ್ರದಲ್ಲಿ ಏ.22ರಂದು ಬೆಳಗ್ಗೆ 10.30ಕ್ಕೆ ಮಕ್ಕಳ ಸ್ಮರಣ ಶಕ್ತಿ ಯೋಗ ಶಿಬಿರದ ಉಚಿತ ಪರಿಚಯ ಕಾರ್ಯಕ್ರಮ ಏರ್ಪಡಿಸಲಾಗಿದೆ. ಏ. 23 ರಿಂದ 10 ದಿನಗಳ ಮಕ್ಕಳ ಸ್ಮರಣಶಕ್ತಿ ಯೋಗ ತರಗತಿಗಳು ಪ್ರಾರಂಭವಾಗಲಿವೆ. ನೋಂದಣಿ ಮತ್ತು ವಿವರಗಳಿಗೆ ಹೆಚ್.ಎಸ್. ರಮೇಶ್‌ಚಂದ್ರ, ಮೊ. 94484 58050, ಪಿ.ಎ. ಮನೋಹರ್‌ರಾವ್, ಮೊ. 86187 62110 ಸಂಪರ್ಕಿಸಬಹುದು.

ಸಿದ್ದರಾಮಯ್ಯ ಸ್ವಯಂ ಘೋಷಿತ ಅಹಿಂದ ನಾಯಕ ಅಷ್ಟೇ!

ಬಿಜೆಪಿ ರಾಷ್ಟ್ರೀಯ ವಕ್ತಾರ ಡಾ.ಸುಧಾಂಶು ತ್ರಿವೇದಿ ವಾಗ್ದಾಳಿ



ಮೈಸೂರು, ಏ.19(ಎಂಕೆ)– ಸ್ವಯಂ ಘೋಷಿತ ಅಹಿಂದ ನಾಯಕ ಸಿದ್ದರಾಮಯ್ಯ, ನಿಜವಾದ ಅಹಿಂದ ನಾಯಕರಲ್ಲ. ಅಹಿಂದ ಹೆಸರಿನಲ್ಲಿ ಜಾತಿ ಕಾರ್ಡ್ ಪ್ರಮೋಟ್ ಮಾಡುತ್ತಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಹಾಗೂ ರಾಜ್ಯಸಭಾ ಸದಸ್ಯ ಡಾ.ಸುಧಾಂಶು ತ್ರಿವೇದಿ ವಾಗ್ದಾಳಿ ನಡೆಸಿದರು.

ಮೈಸೂರಿನ ಚಾಮರಾಜಪುರಂನಲ್ಲಿರುವ ಬಿಜೆಪಿ ಮಾಧ್ಯಮ ಕೇಂದ್ರದಲ್ಲಿ ಬುಧವಾರ ಪತ್ರಿಕಾಗೋಷ್ಠಿ ನಡೆಸಿದ ಅವರು, ಅಹಿಂದ ನಾಯಕ ಎಂದು ಕರೆಯಿಸಿಕೊಳ್ಳುವ ಸಿದ್ದರಾಮಯ್ಯ ಅವರು ದಲಿತರು, ಹಿಂದುಳಿದ ವರ್ಗದವರು ಹಾಗೂ ಎಸ್‌ಸಿ–ಎಸ್ಟಿ ಸಮುದಾಯದವರ ಅಭಿವೃದ್ಧಿಗಾಗಿ ಏನನ್ನೂ ಮಾಡಲಿಲ್ಲ. ಕೇವಲ ಮುಸ್ಲಿಮರನ್ನು ಓಲೈಸುವ ಏಜೆಂಟರಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಐದು ವರ್ಷಗಳ ಆಡಳಿತಾವಧಿಯಲ್ಲಿ ಹೇಳಿಕೊಳ್ಳುವಂತಹ ಯಾವುದೇ ಅಭಿವೃದ್ಧಿ ಕೆಲಸಗಳಾಗಿಲ್ಲ. ಹಾಗೆಯೇ ಕಾಂಗ್ರೆಸ್ ಈ ಸಮುದಾಯಗಳನ್ನು ರಾಜಕೀಯ ಲಾಭಕ್ಕಾಗಿ, ಮತ ಬ್ಯಾಂಕ್ ಆಗಿ ಬಳಸಿಕೊಂಡಿದೆಯೇ ಹೊರತು ಮೀಸಲಾತಿ ಹೆಚ್ಚಳ ಸೇರಿದಂತೆ ಸಮುದಾಯಗಳ ಯಾವ ಬೇಡಿಕೆಗಳಿಗೂ ಸ್ಪಂದಿಸಿಲ್ಲ ಎಂದು ದೂರಿದರು.

ಚುನಾವಣೆಗಳು ಹತ್ತಿರ ಬಂದಾಗಲೆಲ್ಲಾ ಕಾಂಗ್ರೆಸ್‌ನವರು ಈಡೇರಿಸಲಾಗದಂತಹ ಸುಳ್ಳು ಭರವಸೆಗಳನ್ನು ನೀಡುವುದನ್ನು ರೂಢಿ ಮಾಡಿಕೊಂಡು ಬಂದಿದ್ದಾರೆ. 200 ಯೂನಿಟ್ ಉಚಿತ ವಿದ್ಯುತ್, 10 ಕೆ.ಜಿ ಅಕ್ಕಿ, ಮನೆ ಗೃಹಿಣಿಗೆ 2 ಸಾವಿರ ರೂ. ಹೀಗೆ ಅನೇಕ ಸುಳ್ಳು ಭರವಸೆಗಳನ್ನು ನೀಡುವ ಮೂಲಕ ಜನರನ್ನು ಮರುಳು ಮಾಡಿ, ಅಧಿಕಾರಕ್ಕೆ ಬರಬೇಕೆಂಬ ಪ್ರಯತ್ನವನ್ನು ನಡೆಸುತ್ತಿದ್ದಾರೆ. ಸುಳ್ಳು ಭರವಸೆಗಳನ್ನು ನೀಡಿ ಹಿಮಾಚಲ ಪ್ರದೇಶ, ರಾಜಸ್ಥಾನ, ಛತ್ತೀಸ್‌ಗಡ ಸೇರಿ ಕೆಲವು ರಾಜ್ಯಗಳಲ್ಲಿ ನೀಡಿದ ಒಂದೇ ಒಂದು ಭರವಸೆಯನ್ನು ಈಡೇರಿಸಿಲ್ಲ. ಇದೆಲ್ಲವನ್ನು ಕರ್ನಾಟಕ ರಾಜ್ಯದ ಮತದಾರರು ಗಮನಿಸಿದ್ದು, ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಸುಳ್ಳು ಆರೋಪ: ರಾಜ್ಯ ಬಿಜೆಪಿ ಸರ್ಕಾರ 40 ಪರ್ಸೆಂಟ್ ಕಮಿಷನ್ ಸರ್ಕಾರವೆಂದು ಸುಳ್ಳು ಆರೋಪ ಮಾಡುತ್ತಿದ್ದಾರೆ. ಆದರೆ ಈ ಆರೋಪಗಳಿಗೆ ಅವರ ಬಳಿ ಯಾವುದೇ ದಾಖಲೆಗಳಿಲ್ಲ. ಕಾಂಗ್ರೆಸ್ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಲೇಬಾರದು ಎಂದು ಹೇಳಿದರು.

ಯಾವುದೇ ನಷ್ಟವಿಲ್ಲ: ಚುನಾವಣೆ ಸಂದರ್ಭದಲ್ಲಿ ಮಾಜಿ ಸಿಎಂ ಜಗದೀಶ್ ಶೆಟ್ಟರ್ ಸೇರಿದಂತೆ ಕೆಲವರು ಬಿಜೆಪಿ ಬಿಟ್ಟು ಹೋಗಿದ್ದಾರೆ. ಆದರೆ ಇದರಿಂದ ಪಕ್ಷಕ್ಕೆ ಯಾವುದೇ ನಷ್ಟವಿಲ್ಲ. ಬಿಜೆಪಿ ಕೇಡಾರ್ ಬೇಸ್ಡ್ ಪಕ್ಷವಾಗಿದ್ದು, ಯಾರೇ ಬಿಟ್ಟು ಹೋದರೂ ಅದರಿಂದ ಪಕ್ಷಕ್ಕೆ ಹಾನಿ ಆಗುವುದಿಲ್ಲ. ಈ ಹಿಂದೆ ಬಂಗಾರಪ್ಪ, ಎಸ್.ಎಂ.ಕೃಷ್ಣ ಮುಂತಾದ ನಾಯಕರು ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ಬಂದಿದ್ದರು. ಇದೀಗ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಕಿರಣ್ ಕುಮಾರ್ ರೆಡ್ಡಿ ಕೂಡ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದಾರೆ ಎಂದರು. ಸಿದ್ದರಾಮಯ್ಯ ಕಾಂಗ್ರೆಸ್ ಪಕ್ಷದಲ್ಲಿ ಯಾವ ದಲಿತ ನಾಯಕರನ್ನು ಬೆಳೆಯಲು ಬಿಟ್ಟಿಲ್ಲ. ಡಾ.ಜಿ.ಪರಮೇಶ್ವರ್ ಅವರನ್ನು ರಾಜಕೀಯವಾಗಿ ಮುಗಿಸಿದ್ದಾರೆ. ಅಖಂಡ ಶ್ರೀನಿವಾಸ್ ಮನೆಗೆ ಬೆಂಕಿ ಹಚ್ಚಿದ ದಾಳಿಕೋರರ ವಿರುದ್ಧ ಕ್ರಮ ಕೈಗೊಳ್ಳಲಿಲ್ಲ. ಪಿಎಫ್‌ಐ ಹಾಗೂ ಎಸ್‌ಡಿಪಿಐ ವಿರುದ್ಧ ಕ್ರಮ ಕೈಗೊಳ್ಳಲಿಲ್ಲ. ತಮ್ಮ ಹಗರಣಗಳನ್ನು ಮುಚ್ಚಿ ಹಾಕಿಕೊಳ್ಳಲು ಲೋಕಾಯುಕ್ತ ಸಂಸ್ಥೆಯನ್ನೇ ಮುಚ್ಚಿ ಎಸಿಬಿ ರಚಿಸಿದ್ದರು ಎಂದು ಕಿಡಿಕಾರಿದರು.

ಐತಿಹಾಸಿಕ ದಾಖಲೆ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕಳೆದ ಎಂಟು ವರ್ಷಗಳಲ್ಲಿ ಐತಿಹಾಸಿಕ ದಾಖಲೆ ಆಡಳಿತ ನೀಡಿದೆ. ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ ಮೂಲಕ ಮಧ್ಯವರ್ತಿಗಳ ಹಾವಳಿಗೆ ಬ್ರೇಕ್ ಹಾಕಿದೆ. ಸೆಮಿ ಕಂಡಕ್ಟರ್ ಹಬ್‌ನ್ನು ಸ್ಥಾಪನೆ ಮೂಲಕ ಮೈಸೂರನ್ನು ಗ್ಲೋಬಲ್ ಸೆಂಟರ್ ಆಗಿ ಮಾಡಲಾಗುತ್ತಿದೆ. ಮೈಸೂರು–ಬೆಂಗಳೂರು ನಡುವೆ ದಶಪಥ ರಸ್ತೆಯಾಗಿದೆ. ರಾಜ್ಯದಲ್ಲಿ ವಿಮಾನ ನಿಲ್ದಾಣ ಸಂಖ್ಯೆ ಹೆಚ್ಚಾಗಿದೆ. ವಂದೇ ಭಾರತ್ ರೈಲು ಸಂಚಾರ ಆರಂಭವಾಗಿದ್ದು, 920 ಕೋಟಿ ರೂ. ಗಳನ್ನು ಮೈಸೂರು ರೈಲ್ವೆ ವಿಭಾಗಕ್ಕೆ ನೀಡಲಾಗಿದೆ. ವಿದ್ಯುತ್ ಚಾಲಿತ ರೈಲು ಸಂಚಾರದ ಕೆಲಸ ಶೇ.90 ರಷ್ಟಾಗಿದ್ದು, ಆತ್ಮ ನಿರ್ಭರ ಭಾರತ್ ಯೋಜನೆಯಡಿ ಮೊಬೈಲ್‌ಗಳನ್ನು ಉತ್ಪಾದನೆಯಾಗುತ್ತಿದೆ ಎಂದು ವಿವರಿಸಿದರು.

ಬಿಜೆಪಿ ರಾಜ್ಯ ವಕ್ತಾರ ಗಿರೀಶ್ ಉಪಾಧ್ಯಾಯ, ಜಿಲ್ಲಾ ವಕ್ತಾರ ಡಾ.ಕೆ.ವಸಂತ್ ಕುಮಾರ್, ನಗರ ವಕ್ತಾರ ಎಂ.ಎ.ಮೋಹನ್, ಮೈಸೂರು ವಿಭಾಗ ಮಾಧ್ಯಮ ಕೇಂದ್ರ ಸಂಯೋಜಕ ನಾಗೇಶ್, ಜಿಲ್ಲಾ ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್ ಮತ್ತಿತರರು ಉಪಸ್ಥಿತರಿದ್ದರು.

ಸಾಮಾಜಿಕ ನ್ಯಾಯ ನೀಡಿದ ರಾಜ್ಯ ಬಿಜೆಪಿ ಸರ್ಕಾರ...

“ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರ ವೀರಶೈವ, ಒಕ್ಕಲಿಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾತಿಯನ್ನು ಹೆಚ್ಚಿಸಿದೆ. ಈ ಸಮುದಾಯಗಳ ಬಹು ವರ್ಷಗಳ ಬೇಡಿಕೆಗಳನ್ನು ಈಡೇರಿಸುವ ಮೂಲಕ ಸಾಮಾಜಿಕ ನ್ಯಾಯವನ್ನು ನೀಡಿದೆ. ಮುಸ್ಲಿಮರಿಗೆ ಕಾಂಗ್ರೆಸ್ ಸರ್ಕಾರ ಸಂವಿಧಾನ ಬಾಹಿರವಾಗಿ, ಕಾನೂನು ಬಾಹಿರವಾಗಿ ನೀಡಿದ್ದ ಮೀಸಲಾತಿಯನ್ನು ರದ್ದು ಮಾಡಿ, ಅವರನ್ನೂ ಕೂಡ ಇಡಬ್ಲ್ಯೂಎಸ್ ಸೇರಿಸಿದೆ. ಈ ಮೂಲಕ ಎಲ್ಲಾ ಸಮುದಾಯಗಳ ಅಭಿವೃದ್ಧಿಗೂ ಆದ್ಯತೆಯನ್ನು ನೀಡಿದೆ.

– ಡಾ.ಸುಧಾಂಶು ತ್ರಿವೇದಿ, ಬಿಜೆಪಿ ರಾಷ್ಟ್ರೀಯ ವಕ್ತಾರ

ರಾಜ್ಯದಲ್ಲಿ ಹೊಸ ಪ್ರಯೋಗ ಉತ್ತಮ ಫಲ ನೀಡಲಿದೆ

■ ಮೋಹನ್ ಕಾಯಕ

ರಾಜ್ಯ ವಿಧಾನಸಭಾ ಚುನಾವಣೆ ರಂಗೇರಿದ್ದು, ನಾಮಪತ್ರ ಸಲ್ಲಿಕೆ, ಮತಯಾಚನೆ ಬಿರುಸಾಗಿದೆ. ಗೆಲ್ಲುವ ವಿಶ್ವಾಸದೊಂದಿಗೆ ಪೈಪೋಟಿಗಿಳಿದಿರುವ ರಾಜಕೀಯ ಪಕ್ಷಗಳು ಜಿದ್ದಾಜಿದ್ದಿನಿಂದ ಸೆಣಸಾಟಕ್ಕೆ ಮುಂದಾಗಿವೆ. ಅದರಂತೆ ಬಿಜೆಪಿ ರಾಜ್ಯದಲ್ಲಿ ಮತ್ತೆ ಅಧಿಕಾರ ಹಿಡಿಯಲಿದ್ದು, ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿರುವ ಬಿಜೆಪಿ ರಾಷ್ಟ್ರೀಯ ವಕ್ತಾರ ಹಾಗೂ ರಾಜ್ಯಸಭಾ ಸದಸ್ಯ ಡಾ.ಸುಧಾಂಶು ತ್ರಿವೇದಿ 'ಮೈಸೂರು ಮಿತ್ರ'ನೊಂದಿಗೆ ಚುನಾವಣಾ ರಣಕಣ ಹಾಗೂ ತಮ್ಮ ಯೋಜನೆ ಮತ್ತು ಸಿದ್ಧತೆಗಳ ಬಗ್ಗೆ ಮನಬಿಚ್ಚಿ ಮಾತನಾಡಿದ್ದಾರೆ.

ಮೈಸೂರು ಮಿತ್ರ: ಈ ಬಾರಿಯ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಒಳ ಒಪ್ಪಂದವಾಗಿದೆಯೇ?

ಡಾ.ಸುಧಾಂಶು ತ್ರಿವೇದಿ: ಖಂಡಿತವಾಗಿಯೂ ಇಲ್ಲ. 2018ರ ಚುನಾವಣೆಯಲ್ಲೂ ಬಿಜೆಪಿ–ಜೆಡಿಎಸ್ ಒಳ ಒಪ್ಪಂದವಾಗಿದೆ ಎನ್ನುತ್ತಿದರು. ಆದರೆ ಚುನಾವಣೆ ಫಲಿತಾಂಶ ಬಂದ ನಂತರ ಕಾಂಗ್ರೆಸ್–ಜೆಡಿಎಸ್ ಹೊಂದಾಣಿಕೆ ಮಾಡಿಕೊಂಡು ಮೈತ್ರಿ ಸರ್ಕಾರ ರಚನೆ ಮಾಡಿದ್ದು ಗೊತ್ತಿದೆ. ಆದ್ದರಿಂದ ಇದೆಲ್ಲಾ ಸುಳ್ಳು. ಅಲ್ಲದೆ ಜೆಡಿಎಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಅಗತ್ಯವೂ ಇಲ್ಲ. ಈ ಬಾರಿ ಬಿಜೆಪಿಗೆ ನಿಚ್ಚಳ ಬಹುಮತ ದೊರೆಯುವ ವಿಶ್ವಾಸವಿದೆ.

ಮಿತ್ರ: ರಾಜ್ಯ ವಿಧಾನಸಭಾ ಚುನಾವಣೆ ಘೋಷಣೆಯಾಗಿದೆ. ನಾಳೆ ನಾಮಪತ್ರ ಸಲ್ಲಿಕೆ ಕಡೆಯ ದಿನ. ಆದರೂ ಶಿವಮೊಗ್ಗ ನಗರ ಕ್ಷೇತ್ರದ ಅಭ್ಯರ್ಥಿ ಘೋಷಣೆಯಾಗಿಲ್ಲವೇಕೆ? ಇದರಿಂದ ಪಕ್ಷದ ಮೇಲೆ ನಕರಾತ್ಮಕ ಪರಿಣಾಮ ಬೀರಲಿದೆಯೇ?



ಡಾ.ಸುಧಾಂಶು ತ್ರಿವೇದಿ

ಡಾ.ಸುಧಾಂಶು ತ್ರಿವೇದಿ: ಸದ್ಯಕ್ಕೆ ನಾವಿನ್ನೂ ಚುನಾವಣೆ ಹೊಸ್ತಿಲಿನಲ್ಲಿದ್ದೇವೆ. ಈಗ ತಾನೇ ರಾಜ್ಯ ವಿಧಾನಸಭಾ ಚುನಾವಣೆ ಪ್ರಕ್ರಿಯೆ ಆರಂಭವಾಗಿದೆ. ಮುಂದಿನ ದಿನಗಳಲ್ಲಿ ಚುನಾವಣೆಗೆ ಮತ್ತಷ್ಟು ವೇಗ ಬರಲಿದೆ. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ರಾಷ್ಟ್ರ ನಾಯಕರು ರಾಜ್ಯಕ್ಕೆ ಆಗಮಿಸಿ, ಹತ್ತು–ಹಲವು ರ‍್ಯಾಲಿಗಳಲ್ಲಿ ಭಾಗವಹಿಸಲಿದ್ದಾರೆ. ಈ ಮೂಲಕ ಚುನಾವಣೆಯ ಚಿತ್ರಣವೇ ಬದಲಾಗಲಿದೆ.

ಮಿತ್ರ: ಮಾಜಿ ಸಿಎಂ ಯಡಿಯೂರಪ್ಪ, ಕೆ.ಎಸ್. ಈಶ್ವರಪ್ಪ ಸೇರಿದಂತೆ ಬಿಜೆಪಿ ಕೆಲ ಹಿರಿಯ ನಾಯಕರು ಚುನಾವಣೆ ರಾಜಕಾರಣದಿಂದ ಹಿಂದೆ ಸರಿದರೆ, ಜಗದೀಶ್ ಶೆಟ್ಟರ್ ಮತ್ತಿತರರು ಪಕ್ಷದಿಂದ ನಿರ್ಗಮಿಸಿದ್ದಾರೆ. ಇದರಿಂದ ಪಕ್ಷಕ್ಕೆ ನಷ್ಟವಾಗುವುದಿಲ್ಲವೇ?

ಡಾ.ಸುಧಾಂಶು ತ್ರಿವೇದಿ: ಯಡಿಯೂರಪ್ಪ ರಾಜ್ಯದ ಸಿಎಂ ಆಗಿ ಪಕ್ಷವನ್ನು ಬಲಪಡಿಸಿದ್ದಾರೆ. ಈಶ್ವರಪ್ಪ ಅವರು ಕೂಡ ತಮ್ಮದೆ ಕೊಡುಗೆ ನೀಡಿದ್ದಾರೆ. ಆದರೆ ಚುನಾವಣಾ ರಾಜಕಾರಣದಿಂದ ಹಿಂದೆ ಸರಿದಿರುವುದರಿಂದ ಪಕ್ಷಕ್ಕೆ ಯಾವುದೇ ತೊಂದರೆಯಿಲ್ಲ. ಜಗದೀಶ್ ಶೆಟ್ಟರ್ ಮತ್ತಿತರರು ಪಕ್ಷ ಬಿಟ್ಟಿರುವುದರಿಂದಲೂ ಯಾವುದೇ ನಷ್ಟವಿಲ್ಲ. ರಾಜ್ಯಕ್ಕೆ ರಾಷ್ಟ್ರ ನಾಯಕರು ಆಗಮಿಸುತ್ತಿದ್ದಂತೆ ಪರಿವರ್ತನಾ ಅಲೆಗಳು ಸೃಷ್ಟಿಯಾಗಲಿವೆ. ಆದರೆ ರಾಜ್ಯಕ್ಕೆ ಬರುವ ಕಾಂಗ್ರೆಸ್‌ನ ನಾಯಕರು ಅಲೆ ಸೃಷ್ಟಿಸುವ ಬದಲು ವಿವಾದಗಳಿಂದಲೇ ಸುದ್ದಿಯಾಗುತ್ತಾರೆ.

ಮಿತ್ರ: ಹೊಸಬರಿಗೆ ಅವಕಾಶ ನೀಡುವ ಪ್ರಯೋಗದಿಂದ ಫಲ ದೊರೆಯಬಹುದೇ?

ಡಾ.ಸುಧಾಂಶು ತ್ರಿವೇದಿ: ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಹಲವು ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಕ್ಷೇತ್ರಗಳನ ಅಧ್ಯಯನ ನಡೆಸಿ ಸೂಕ್ತ ಅಭ್ಯರ್ಥಿಗಳಿಗೆ ಟಿಕೆಟ್ ನೀಡಲಾಗಿದೆ. ಸುಮಾರು 50ಕ್ಕೂ ಹೆಚ್ಚು ಮಂದಿಗೆ ಹೊಸದಾಗಿ ಅವಕಾಶ ಮಾಡಿಕೊಟ್ಟಿರುವುದು ಕೂಡ ಪಕ್ಷಕ್ಕೆ ಲಾಭದಾಯಕವಾಗಲಿದೆ. ಹಾಗೆಯೇ ಹೊಸ ನಾಯಕರು ಹೊರಬರಲಿದ್ದಾರೆ.

ಮಿತ್ರ: ಚುನಾವಣೆಗಳಲ್ಲಿ ಬಿಜೆಪಿಗೆ ಮೋದಿ ಮಾತ್ರ ಮುಖ್ಯವೇ?

ಡಾ.ಸುಧಾಂಶು ತ್ರಿವೇದಿ: ನಮ್ಮದು ಬಹಳ ಶಿಸ್ತಿನ ಹಾಗೂ ಗಂಭೀರವಾದ ರಾಜಕೀಯ ಪಕ್ಷ. ಯಾವುದೇ ಚುನಾವಣೆಯಾದರೂ ಪ್ರಧಾನ ಮಂತ್ರಿಗಳಿಂದ ಹಿಡಿದು ಕಾರ್ಯಕರ್ತನವರೆಗೆ ಪ್ರತಿಯೊಬ್ಬರು ಚುನಾವಣೆ ಗೆಲುವಿಗಾಗಿ ಶ್ರಮಿಸುತ್ತೇವೆ. ಚುನಾವಣೆಗಳನ್ನು ಗಂಭೀರವಾಗಿ ಪರಿಗಣಿಸುತ್ತೇವೆ. ಉತ್ತರದ ಕಾರ್ಗಿಲ್‌ನಿಂದ ಹಿಡಿದು ದಕ್ಷಿಣದ ತಿರುವನಂತಪುರಂವರೆಗಿನ ಎಲ್ಲಾ ಬಗೆಯ ಚುನಾವಣೆಗಳಲ್ಲಿ ಗೆಲ್ಲುವುದು ಮುಖ್ಯವಾಗಿದೆ.

ಮಿತ್ರ: ಕನಕಪುರದಲ್ಲಿ ಡಿ.ಕೆ.ಶಿವಕುಮಾರ್ ವಿರುದ್ಧ ಆರ್.ಅಶೋಕ್, ವರುಣದಲ್ಲಿ ಸಿದ್ದರಾಮಯ್ಯ ವಿರುದ್ಧ ವಿ.ಸೋಮಣ್ಣ ಅವರನ್ನು ಕಣಕ್ಕಿಳಿಸಿರುವ ಪ್ರಯೋಗ ಫಲ ನೀಡುವುದೇ ಅಥವಾ ಪಕ್ಷಕ್ಕೆ ಮುಜುಗರ ತರಬಹುದೆ?

ಡಾ.ಸುಧಾಂಶು ತ್ರಿವೇದಿ: ಅಮೇಥಿ ಲೋಕಸಭಾ ಕ್ಷೇತ್ರ ಗಾಂಧಿ ಕುಟುಂಬದ ಭದ್ರಕೋಟೆಯಾಗಿತ್ತು. ಆದರೆ 2019ರ ಚುನಾವಣೆಯಲ್ಲಿ ರಾಹುಲ್ ಗಾಂಧಿ ವಿರುದ್ಧ ಸ್ಮೃತಿ ಇರಾನಿ ಜಯಗಳಿಸುವ ಮೂಲಕ ಕಾಂಗ್ರೆಸ್‌ನ ಭದ್ರಕೋಟೆಯನ್ನು ಭೇದಿಸಿದ್ದರು. ಅದರಂತೆ ಚುನಾವಣೆಗಳಲ್ಲಿ ಏನೂ ಬೇಕಾದರೂ ಫಲಿತಾಂಶ ಬರುಬಹುದು ಹಾಗೂ ಬದಲಾವಣೆಗಳೂ ಆಗಬಹುದು. ಅದಕ್ಕಾಗಿ ಕಾದು ನೋಡುವುದರ ಜೊತೆಗೆ ಪರಿಶ್ರಮ, ಪ್ರಯತ್ನ ಮಾಡುತ್ತೇವೆ.

ಮಿತ್ರ: ಬಿಜೆಪಿ ಪಕ್ಷ ಕೆಲವೇ ವ್ಯಕ್ತಿಗಳ ನಿಯಂತ್ರಣದಲ್ಲಿದೆಯೇ?

ಡಾ.ಸುಧಾಂಶು ತ್ರಿವೇದಿ: ಖಂಡಿತವಾಗಿಯೂ ಇಲ್ಲ. ನಾನು ಮೊದಲೇ ಹೇಳಿದಂತೆ ಬಿಜೆಪಿ ಶಿಸ್ತಿನ ಪಕ್ಷ. ಯಾವುದು ಸರಿ ಅಥವಾ ಯಾವುದು ತಪ್ಪು ಎಂಬುದನ್ನು ಅಧ್ಯಯನ ನಡೆಸಿ ನಿರ್ಧಾರ ತೆಗೆದುಕೊಳ್ಳುತ್ತೇವೆ. ಅದಕ್ಕಾಗಿ ಒಂದು ವ್ಯವಸ್ಥೆ ಇದ್ದು, ಕೆಲ ವ್ಯಕ್ತಿಗಳಿಗೆ ಸೀಮಿತವಾಗಿಲ್ಲ.

ಮಿತ್ರ: ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲಿದೆಯೇ?

ಡಾ.ಸುಧಾಂಶು ತ್ರಿವೇದಿ: ಇದರಲ್ಲಿ ಯಾವುದೇ ಸಂಶಯವಿಲ್ಲ. ಅಲ್ಲದೆ 130ಕ್ಕೂ ಹೆಚ್ಚು ಸ್ಥಾನ ಬಂದರೂ ಅಚ್ಚರಿಯಿಲ್ಲ. ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರ ಉತ್ತಮ ಆಡಳಿತ ನೀಡಿದ್ದು, ಮತದಾರರ ವಿಶ್ವಾಸಕ್ಕೆ ಪಾತ್ರವಾಗಿದೆ.

* * *

ಮಹಾತ್ಮಗಾಂಧಿ ನರೇಗಾ ಯೋಜನೆ ಕಾರ್ಮಿಕರಿಗೆ ಮತದಾನ ಜಾಗೃತಿ



ಮೈಸೂರು, ಏ.19(ಎಸ್‌ಬಿಡಿ)–ಮೈಸೂರು ತಾಲೂಕು ಸ್ವೀಪ್ ಸಮಿತಿ ವತಿಯಿಂದ ಮಹಾತ್ಮ ಗಾಂಧಿ ನರೇಗಾ ಯೋಜನೆ ಕಾರ್ಮಿಕರಿಗೆ ಮತದಾನದ ಬಗ್ಗೆ ಜಾಗೃತಿ ಮೂಡಿಸಲಾಯಿತು.

ತಾಲೂಕಿನ ಗೋಪಾಲಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ಮುಳ್ಳೂರು ಕೆರೆ ಏರಿ ಅಭಿವೃದ್ಧಿ ಕಾಮಗಾರಿ ಸ್ಥಳದಲ್ಲಿ ಮೇ 10ರಂದು ಕಡ್ಡಾಯವಾಗಿ ಮತದಾನ ಮಾಡಿ ಎಂದು ಬರೆದು ಜಾಗೃತಿ ಮೂಡಿಸಿದ್ದಲ್ಲದೆ, ಅಲ್ಲಿ ಕೆಲಸ ನಿರ್ವಹಿಸುತ್ತಿದ್ದವರಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಈ ವೇಳೆ ತಾಲೂಕು ಪಂಚಾಯ್ತಿ ಗ್ರಾಮೀಣ ಉದ್ಯೋಗ ಸಹಾಯಕ ನಿರ್ದೇಶಕ ಕೆ.ಎಂ.ರಘುನಾಥ್ ಮಾತನಾಡಿ, ಹಳ್ಳಿಗಳು ದೇಶದ ಜೀವನಾಡಿ ಇದ್ದಂತೆ. ಹಳ್ಳಿಗಳು ಪ್ರಗತಿ ಪಥದಲ್ಲಿ ಸಾಗಿದರೆ ಮಾತ್ರ ದೇಶದ ಸರ್ವತೋಮುಖ ಅಭಿವೃದ್ಧಿ ಸಾಧ್ಯ. ಹಾಗಾಗಿ ಪ್ರತಿಯೊಬ್ಬರೂ ತಪ್ಪದೇ ಮತದಾನ ಮಾಡುವ ಮೂಲಕ ದೇಶದ ಪ್ರಗತಿಗೆ ಕೊಡುಗೆ ನೀಡಬೇಕು ಎಂದು ತಿಳಿಸಿದರು.

ಸಂವಿಧಾನ ನೀಡಿರುವ ಮೌಲ್ಯಯುತ ಮತದಾನದ ಹಕ್ಕನ್ನು ವಿವೇಚನೆಯಿಂದ ಚಲಾಯಿಸಬೇಕು. ಯಾವುದೇ ಆಸೆ, ಆಮಿಷಕ್ಕೆ ಒಳಗಾಗದೆ ಮತದಾನ ಮಾಡಬೇಕು. ಇದೊಂದು ಪವಿತ್ರ ಕಾರ್ಯವೆಂದು ಭಾವಿಸಿ ನೀವು ಮತ್ತು ನಿಮ್ಮ ಕುಟುಂಬದ ಎಲ್ಲಾ ಸದಸ್ಯರೂ ಮತದಾನ ಮಾಡಬೇಕು ಎಂದು ಕಾರ್ಮಿಕರು ಕರೆ ನೀಡಿದರು. ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಡಿ.ಸಿ.ಶಿವಣ್ಣ, ಕಾರ್ಯದರ್ಶಿ ಚಲುವರಾಜು, ತಾಂತ್ರಿಕ ಸಂಯೋಜಕ ಉಲ್ಲಾಸ್, ತಾಂತ್ರಿಕ ಸಹಾಯ ಇಂಜಿನಿಯರ್‌ಗಳಾದ ನಿತ್ಯೇಶ್ವರಿ, ನೇತ್ರಾವತಿ, ಸಂಧ್ಯಾರಾಣಿ, ಬಿ.ಸಂಧ್ಯಾ, ಗ್ರಾಮ ಪಂಚಾಯಿತಿ ಸಿಬ್ಬಂದಿ ಪ್ರವೀಣ್ ಮತ್ತಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಮುಖಂಡ ಸಂದೇಶ್ ನಾಗರಾಜ್ ನಿವಾಸಕ್ಕೆ ಸಿದ್ದರಾಮಯ್ಯ ಭೇಟಿ



ಮೈಸೂರು, ಏ.19(ಎಸ್‌ಬಿಡಿ)– ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಅವರ ನಿವಾಸಕ್ಕೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬುಧವಾರ ಭೇಟಿ ನೀಡಿದ್ದರು.

ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ನಂಜನಗೂಡು ತಾಲೂಕು ಪಂಚಾಯ್ತಿಯಲ್ಲಿ ನಾಮಪತ್ರ ಸಲ್ಲಿಸಿದ ಬಳಿಕ ಮೈಸೂರಿನ ಇಂದಿರಾನಗರದಲ್ಲಿರುವ ಸಂದೇಶ್ ನಾಗರಾಜ್ ಅವರ ನಿವಾಸಕ್ಕೆ ಇಂದು ಸಂಜೆ 4.45ರ ವೇಳೆಗೆ ಸಿದ್ದರಾಮಯ್ಯನವರು ಭೇಟಿ ನೀಡಿ, ಕುಶಲೋಪರಿ ನಡೆಸಿದರು.

ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಶಾಸಕರಾದ ಜಮೀರ್ ಅಹಮದ್, ಡಾ.ಯತೀಂದ್ರ ಸಿದ್ದರಾಮಯ್ಯ, ಮಾಜಿ ಮೇಯರ್ ಅಯೂಬ್‌ಖಾನ್, ಇತ್ತೀಚೆಗೆ ಜೆಡಿಎಸ್ ತೊರೆದ ಅಬ್ದುಲ್ ಅಜೀಜ್ (ಅಬ್ದುಲ್ಲಾ), ಕಾಂಗ್ರೆಸ್ ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಕಾಂಗ್ರೆಸ್ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರ್‌ನಾಥ್ ಸೇರಿದಂತೆ ಅನೇಕ ಕಾಂಗ್ರೆಸ್ ಮುಖಂಡರು, ಸಂದೇಶ್ ನಾಗರಾಜ್ ಪುತ್ರರಾದ ಸಂದೇಶ್, ಮಂಜೇಶ್ ಸೇರಿದಂತೆ ಕುಟುಂಬ ಸದಸ್ಯರು ಉಪಸ್ಥಿತರಿದ್ದರು.

ಮನೆಯ ಮಹಡಿಯಲ್ಲಿ ಕೆಲ ಮುಖಂಡರೊಂದಿಗೆ ಉಪ್ಪಿಟ್ಟು ಕೇಸರಿಬಾತ್, ಪಕೋಡ, ಕಾಫಿ ಸವಿದ ಬಳಿಕ ಸಿದ್ದರಾಮಯ್ಯ, ಸಂದೇಶ್ ನಾಗರಾಜ್ ಹಾಗೂ ಸಂದೇಶ್ ಕೆಲ ಕಾಲ ಗೌಪ್ಯ ಮಾತುಕತೆ ನಡೆಸಿದರು. ಅಲ್ಲಿಂದ ಸಿದ್ದರಾಮಯ್ಯನವರು ಸಂಜೆ 5.15ರ ವೇಳೆಗೆ ರಾಮಕೃಷ್ಣನಗರದ ತಮ್ಮ ನಿವಾಸದತ್ತ ತೆರಳಿದರು. ಸಿದ್ದರಾಮಯ್ಯನವರ ಭೇಟಿ ಬಗ್ಗೆ ಸಂದೇಶ್ ನಾಗರಾಜ್ ಅವರು ಪ್ರತಿಕ್ರಿಯಿಸಿ, ನಾನು ಕಾಂಗ್ರೆಸ್ ಸೇರಿದ ಮೇಲೆ ಅವರು ಒಮ್ಮೆಯೂ ಮನೆಗೆ ಬಂದಿರಲಿಲ್ಲ. ಹಾಗಾಗಿ ಇಂದು ಆಹ್ವಾನಿಸಿದ್ದೆ. ಇದು ಸೌಜನ್ಯದ ಭೇಟಿ. ಮತ್ಯಾವುದೇ ಚರ್ಚೆ ನಡೆಸಿಲ್ಲ.


ಎಲ್ಲರೊಟ್ಟಿಗೆ ಉಪಾಹಾರ, ಕಾಫಿ ಸೇವಿಸಿ ತೆರಳಿದರಷ್ಟೇ ಎಂದು ತಿಳಿಸಿದರು. ಜೆಡಿಎಸ್ ಬಿಟ್ಟು ಬಿಜೆಪಿ ಸೇರಿದ್ದ ಸಂದೇಶ್ ನಾಗರಾಜ್ ಅವರು, ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯ ಸ್ಪರ್ಧಾಕಾಂಕ್ಷಿಯಾಗಿದ್ದರಾದರೂ ಅವಕಾಶ ಸಿಗಲಿಲ್ಲ. ಜೊತೆಗೆ ಬಿಜೆಪಿ ನಾಯಕರು ತಮ್ಮನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಳ್ಳುತ್ತಿಲ್ಲ ಎಂಬ ಬೇಸರದಿಂದ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದರು. ಇದೀಗ ವಿಧಾನ ಸಭಾ ಚುನಾವಣೆಯಲ್ಲಿ ಸಕ್ರಿಯವಾಗುವಂತೆ ಸಿದ್ದರಾಮಯ್ಯನವರು ಕೇಳಿರಬಹುದು ಎನ್ನಲಾಗಿದೆ.

ಕೆ.ಆರ್.ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪರ ಮತಯಾಚನೆ; ಕೊನೆವರೆಗೂ ಕಾಂಗ್ರೆಸ್‌ನಲ್ಲೇ ಇರುತ್ತೇನೆ

● ಕಾಂಗ್ರೆಸ್ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದ ಪ್ರದೀಪ್ ಕುಮಾರ್ ನಿರ್ಧಾರ ● ಬೆಂಬಲಿಗರ ಸಭೆ ಕರೆದು ಚರ್ಚಿಸಿದ ನಂತರ ತೀರ್ಮಾನ

ಮೈಸೂರು, ಏ.19(ಎಂಕೆ)–ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲೇಬೇಕು. ಈ ನಿಟ್ಟಿನಲ್ಲಿ ಕೆ.ಆರ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಮತಯಾಚನೆ ಮಾಡುವುದಲ್ಲದೆ ಜೀವನದ ಕಡೆಯವರೆಗೂ ಕಾಂಗ್ರೆಸ್‌ನಲ್ಲಿಯೇ ಉಳಿಯುತ್ತೇನೆ ಎಂದು ನಗರ ಪಾಲಿಕೆ ಮಾಜಿ ಸದಸ್ಯ ಹಾಗೂ ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್ ಕುಮಾರ್ ಹೇಳಿದರು.

ಮೈಸೂರಿನ ಅರವಿಂದನಗರದಲ್ಲಿರುವ ತಮ್ಮ ಕಚೇರಿಯಲ್ಲಿ ಬುಧವಾರ ಬೆಂಬಲಿಗರೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಸಾಮಾಜಿಕ ಸೇವೆಯಲ್ಲಿದ್ದವರು ತಮಗಾಗುವ ನೋವನ್ನು ತಮ್ಮೊಳಗೆಯೇ ಹುದುಗಿಸಿಕೊಳ್ಳಬೇಕಾಗುತ್ತದೆ. ಟಿಕೆಟ್ ಸಿಗದಿದ್ದಾಗಲೂ ಪಕ್ಷದ ಹಿತದೃಷ್ಟಿ ಹಾಗೂ ಪಕ್ಷದ ಸಿದ್ಧಾಂತಕ್ಕೆ ಬದ್ಧರಾಗಿರುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಕಡೆಯವರೆಗೂ ಕಾಂಗ್ರೆಸ್ ಪಕ್ಷದಲ್ಲೇ ಇರುತ್ತೇನೆ ಎಂದರು. ಕಳೆದ 5 ವರ್ಷ ರಾಜ್ಯ ಬಿಜೆಪಿ ಸರ್ಕಾರದ ಆಡಳಿತದಲ್ಲಿ ಬಡವರು ಬಡವರಾಗಿಯೇ ಇದ್ದಾರೆ. 40 ಕಮಿಷನ್ ಸರ್ಕಾರದಿಂದಾಗಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಇದೆಲ್ಲವನ್ನೂ ಗಮನಿಸಿದ ನಾವುಗಳು ಪರಸ್ಪರ ಕಚ್ಚಾಡಿದರೆ ಇನ್ನೊಂದು ಪಕ್ಷಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಯಾವುದೇ ಕಾರಣಕ್ಕೂ ನಾವು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಹಿಂದೆ ಬೀಳಬಾರದು. ಅದರಂತೆ ಕೆ.ಆರ್.ಕ್ಷೇತ್ರದಲ್ಲೂ ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಲೇಬೇಕು ಎಂದು ಕರೆ ನೀಡಿದರು.



ಮೊನ್ನೆಯಷ್ಟೇ ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಇದೇ ನನ್ನ ಕಡೆಯ ಚುನಾವಣೆ. ಮುಂದೆ ನೀವೇನೆ.. ನೀವೆಲ್ಲರೂ ಸಪೋರ್ಟ್ ಮಾಡಬೇಕು ಎಂದು ಹೇಳಿದ್ದಾರೆ. ಅದಕ್ಕೆ ನಾನು ಕೂಡ ಒಪ್ಪಿದ್ದು, ಕ್ಷೇತ್ರದೆಲ್ಲೆಡೆ ತಮ್ಮ ಪರವಾಗಿ ಮತಯಾಚಿಸುತ್ತೇನೆ ಎಂದಿದ್ದೇನೆ. ತಡವಾಗಿ ಟಿಕೆಟ್ ಘೋಷಣೆಯಾಗಿದ್ದರಿಂದ ಅವರು ಇನ್ನೂ ಕೆಲ ಮುಖಂಡರನ್ನು ನೇರವಾಗಿ ಭೇಟಿ ಮಾಡಲು ಸಾಧ್ಯವಾಗಿಲ್ಲ. ಆದ್ದರಿಂದ ಯಾರು ಕೂಡ ಮುನಿಸಿಕೊಳ್ಳದೆ ಸೋಮಣ್ಣನವರ ಗೆಲುವಿಗಾಗಿ ಶ್ರಮಿಸಬೇಕು ಎಂದು ಮನವಿ ಮಾಡಿದರು.

ಮೊದಲ ಅಜೆಂಡಾ ಈಡೇರಿದೆ: ಒಂದೂವರೆ ವರ್ಷಗಳ ಹಿಂದೆ ಸ್ನೇಹಿತರೊಬ್ಬರು ಕೆ.ಆರ್.ಕ್ಷೇತ್ರದಲ್ಲಿ ರಾಮದಾಸ್ ಅವರನ್ನು ಸೋಲಿಸುವವರಿಲ್ಲ. ಸೋಲಿಸಲು ಸಾಧ್ಯವಿಲ್ಲ ಎಂದಿದ್ದರು. ಅದರಂತೆ ಕಳೆದ ಒಂದೂವರೆ ವರ್ಷದಿಂದಲೂ ರಾಮದಾಸ್ ಅವರ ಕಾರ್ಯಕ್ರಮಗಳಲ್ಲಿನ ತಪ್ಪುಗಳನ್ನು ಎತ್ತಿ ತೋರಿಸಿದ್ದೇವೆ. ಅದರ ಪ್ರತಿಫಲವಾಗಿ ಅವರಿಗೆ ಟಿಕೆಟ್ ಕೈತಪ್ಪಿದ್ದು, ನಮ್ಮ ಮೊದಲ ಅಜೆಂಡಾ ಈಡೇರಿದಂತಾಗಿದೆ ಎಂದು ಹೇಳಿದರು.

ಒಳ್ಳೆಯದಾಗಲಿದೆ: ಮುಂದಿನ ದಿನಗಳಲ್ಲಿ ಎಲ್ಲರಿಗೂ ಒಳ್ಳೆಯದಾಗಲಿದ್ದು, ಭಗವಂತನ ಆಶೀರ್ವಾದದಿಂದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲಿದೆ. ಕಾಂಗ್ರೆಸ್ ಪಕ್ಷಕ್ಕಾಗಿ ಕೆಲಸ ಮಾಡಬೇಕು ಎಂದಾಗಿ ಎಂ.ಕೆ.ಸೋಮಶೇಖರ್ ಅಮು ಜೊತೆಗಿರಲೇಬೇಕು ಎಂಬುದೇನಿಲ್ಲ ಅಧಿಕಾರ ಇಲ್ಲದೆಯೂ ಇಲ್ಲಿಯವರೆಗೆ ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ಪಕ್ಷ ಸಂಘಟನೆ ಮಾಡಿದ್ದೇವೆ. ಸೋಮಣ್ಣ ಅವರು ಕೂಡ ತಮ್ಮಿಂದಾದಷ್ಟು ಸಹಕಾರ ನೀಡಿದ್ದು, ಮುಂದೆಯೂ ಸಹಕಾರ ಕೊಟ್ಟೇ ಕೊಡುತ್ತಾರೆ. ಈ ದೃಷ್ಟಿಯಿಂದ ನಾವೆಲ್ಲರೂ ಕಾಂಗ್ರೆಸ್‌ಗಾಗಿ ದುಡಿಯಬೇಕು ಎಂದರು.

ಖುದ್ದಾಗಿ ಕರೆಯುವವರೆಗೂ ಬೆಂಬಲ ನೀಡುವುದು ಬೇಡ...!

ಕೆ.ಆರ್ ಕ್ಷೇತ್ರದ ಅಭ್ಯರ್ಥಿಯೂ ಆದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರು, ಎಂ.ಪ್ರದೀಪ್‌ಕುಮಾರ್ ಹಾಗೂ ಅವರ ಬೆಂಬಲಿಗರಾದ ನಮ್ಮನ್ನು ಖುದ್ದಾಗಿ ಭೇಟಿ ಮಾಡಿ ಕರೆಯುವವರೆಗೂ ಅವರೊಂದಿಗೆ ನಾವು ಹೋಗುವುದು ಬೇಡ ಎಂದು ಹಲವರು ತಮ್ಮ ಅಭಿಪ್ರಾಯ ಹೊರಹಾಕಿದರು. ಕ್ಷೇತ್ರದ ಟಿಕೆಟ್ ಆಕಾಂಕ್ಷಿಗಳ ಪಟ್ಟಿಯಲ್ಲಿ ಪ್ರದೀಪ್ ಕುಮಾರ್ 2ನೇ ಸ್ಥಾನದಲ್ಲಿದ್ದರು. ಈಗಾಗಲೇ ಕ್ಷೇತ್ರದಾದ್ಯಂತ ಪರಿಚಿತ ನಾಯಕರಾಗಿ ಬೆಳೆದಿದ್ದಾರೆ. ಆದರೆ ಇವರನ್ನು ನಾಮಪತ್ರ ಸಲ್ಲಿಕೆ ದಿನದಂದು ಕರೆದಿಲ್ಲ. ಅಲ್ಲದೆ ಅವರ ಬೆಂಬಲಿಗರಾದ ನಮಗೂ ಬನ್ನಿ ಎಂದಿಲ್ಲ. ಎಂ.ಕೆ.ಸೋಮಶೇಖರ್ ಅವರು ನಮ್ಮನ್ನು ಕಡೆಗಣಿಸಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಆದರೆ ಎಲ್ಲರನ್ನು ಸಮಾಧಾನಪಡಿಸಿದ ಪ್ರದೀಪ್ ಕುಮಾರ್, ಪ್ರತಿಯೊಬ್ಬರು ಮತಯಾಚನೆಯಲ್ಲಿ ಪಾಲ್ಗೊಳ್ಳಬೇಕು. ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಬೇಕು ಎಂದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SALE / RENT
40x60 Site for Sale at Kuvempunagar 30x40 & 40x60 Site Sale at Dattagalli 2&3 BHK House Rent at Kuvempunagar, R.K.Nagar
9663136318

30x40 House for sale in JP Nagar Ground and 1st floor 28x41 Site for sale in Kuvempu Layout near Dattagalli 20x40 site for sale near JP Nagar ring road Vinayak enclave
9880344263

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ ಸಿದ್ದಾರ್ಥ ಲೇಔಟ್ ಮತ್ತು ಕುವೆಂಪುನಗರ ಸುತ್ತಮುತ್ತ ಪ್ರದೇಶದಲ್ಲಿ ಕೆಲಸ ಮಾಡಬಲ್ಲವರು ಮತ್ತು ಫ್ಯಾಕ್ಟರಿ ಹೆಲ್ಪರ್ ಕೆಲಸಕ್ಕೆ SSLC, PUC, JOC, ITI ಆದವರು ಆಗದವರು ಸಹ ಸಂಪರ್ಕಿಸಿ
9035367083

ಗ್ಯಾಸ್ ಪೈಪ್ ಲೈನಿಂಗ್

ಮನೆ/ಹೋಟೆಲ್‌ಗಳಿಗೆ ಗ್ಯಾಸ್‌ಪೈಪ್ ಲೈನಿಂಗ್ ಮಾಡುತ್ತೇವೆ. ಎಲ್ಲಾ ಕಂಪನಿಯ ಸ್ಟೌವ್+ಗ್ಯಾಸ್ ಗೀಜರ್+ಹಬ್‌ಸ್ಟೌವ್+ ಚಿಮಿನಿ ಸರ್ವಿಸ್ ಲಭ್ಯ
8088888115
22 ವರ್ಷದ ಅನುಭವ

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರು, ಪಾರ್ಶವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲ ಊಟ ವಸತಿಯೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

ಶ್ರೀ ಗೌರೀಶಂಕರ ಟ್ರಾವೆಲ್ಸ್
29.04.23 (4 ದಿನ)- ಚಿತ್ರದುರ್ಗ, ಹಂಪಿ, ಬಾದಾಮಿ, ಕೂಡಲಸಂಗಮ, ಬನಶಂಕರಿ, ಬಿಜಾಪುರ ಇತ್ಯಾದಿ 21.05.23 (1 ದಿನ) ಕೋಟಿಲಿಂಗ, ಈಶಾ ಫೌಂಡೇಶನ್, ಘಾಟಿ ಸುಬ್ರಮಣ್ಯ, 26.05.23 (4 ದಿನ) ಶಿರಡಿ, ಭೀಮಾಶಂಕರ, ತ್ರಯಂಬಕೇಶ್ವರ, ಘೃಷ್ಣೇಶ್ವರ, ಎಲ್ಲೋರ ಇತ್ಯಾದಿ. ವಿಮಾನ/ಬಸ್/ರೂಂ/ಊಟ
Ph: 9620002114

ಮಾರಾಟಕ್ಕಿದೆ
ಸರ್ವಿಸ್ ಸ್ಟೇಷನ್ ಎಲ್ಲಾ ಉಪಕರಣಗಳು 86 ಸಾವಿರಕ್ಕೆ.

ಬೇಕಾಗಿದ್ದಾರೆ
ಹೀಟ್ ಸೀಲಿಂಗ್ ಪ್ಯಾಕ್‌ನಲ್ಲಿ ಅನುಭವ ವಿರುವ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ
9900840025

ತಕ್ಷಣ ನೇಮಕಾತಿ
Financial Data Analysis, Qual: B.Com, M.Com, M.BA, Sal: 18000 to 25000/- ಕನ್ನಡ, ತಮಿಳು, ತೆಲುಗು, Telecallers Sal: 12800 to 15500 Office Admin Billing Executives Sal: 12000, Voice/Non Voice Executives, Good Salary with Other Benefits
9483434327

WANTED
Teaching staff for reputed institution (experience preferred) for all subjects. Transport facilities available. Drop your resume through Whatsapp Contact No.
8971577685, 9980631121

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಸಂಪು
ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
17–5–23: ಕಾಶಿ, ಗಂಯಾ, ಬುದ್ಧಗಯಾ, ಪ್ರಯಾಗ್‌ರಾಜ್, ಅಯೋಧ್ಯೆ. 8–6–23: ಚಾರ್ ಧಾಮ್ ಯಾತ್ರ, ಕೇದಾರನಾಥ್, ಬದ್ರಿನಾಥ್, ಗಂಗೋತ್ರಿ, ಯಮುನೋತ್ರಿ, 4–5–23: ಗುರುವಾಯೂರು, ಕೊಚ್ಚಿನ್, ಅಲೆಪ್ಪಿ, 4–5–23: ರಾಮೇಶ್ವರಂ, ಕನ್ಯಾಕುಮಾರಿ, ಮಧುರೈ, 29–5–23: ದೆಹಲಿ, ವೈಷ್ಣೋದೇವಿ, ಜಮ್ಮು, ಕಾಶ್ಮೀರ್. 17–5–23: ಪುರಿ ಜಗನ್ನಾಥ್, ಕೋನಾರ್ಕ್, ಚಂದ್ರಭಾಗ್ ಬೀಚ್.
9591017782, 9964527782

WANTED
1) Accountant : (M&F)
Experience 1 to 2 years. Skills: Tally ERP-9, GST, MS Office.
2) Marketing Executives : (M)
Experience: 1 to 2 years. Education: Any Degree. Good salary + TA, DA & incentives.
Sri Sairam Furnitures, Distributor
Vijayanagar 2nd Stage, Mysore
Mob: 8217411158

MUDA APPROVED
30x40 ಸೈಟು @ 18 ಲಕ್ಷ ರೂ. 40x60 ಸೈಟು @ 36 ಲಕ್ಷ ರೂ. ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ, ಲಾಲ್‌ಬಹದ್ದೂರ್ ಶಾಸ್ತ್ರಿ ನಗರದ ನಂತರ. ಸಂಪರ್ಕಿಸಿ:
9538583377

ಟೆಲಿಕಾಮ್ ಲೇಔಟ್
30x40 N/F ಸೈಟು @ 25 ಲಕ್ಷ ರೂ. ಬ್ಯಾಂಕ್ ಲೋನ್ ಲಭ್ಯ ಇಲವಾಲ ಬಸ್ಸು ನಿಲ್ದಾಣ ಹಿಂಭಾಗ, ಹುಣಸೂರು ರಸ್ತೆ ಸಂಪರ್ಕಿಸಿ:
9538583377

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್‌ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ANM/GNM ಆದವರಿಗೆ ಕೆಲಸವಿದೆ. ಸೆಂಟ್ ಮೇರೀಸ್ ಆಸ್ಪತ್ರೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್, ಎನ್.ಐ.ಇ. ಕಾಲೇಜ್ ಪಕ್ಕ, ಮೈಸೂರು
9916908454

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training.
www: imkta.in
ALPHA INTERNATIONAL SCHOOL
@ Srirampura & Gokulam
Call: 7829937469, 9901803394
ONLINE TRAINING AVAILABLE

ಬೇಕಾಗಿದ್ದಾರೆ
ಶ್ರೀ ರಾಯಲ್ ವಾರಿಯರ್ ಬೇಕರಿಯ ಕೌಂಟರ್‌ಗೆ ಸೇಲ್ಸ್ ಮ್ಯಾನ್‌ಗಳು ಮತ್ತು ಕ್ಯಾಶಿಯರ್ ಮ್ಯಾನೇಜರ್ ಮತ್ತು ಸೂಪರ್‌ವೈಸರ್ ಎಲೆಕ್ಟ್ರಿಷಿಯನ್ ಟೆಕ್ನಿಷಿಯನ್‌ಗಳು ಬೇಕಾಗಿದ್ದಾರೆ. ಉತ್ತಮ ಸಂಬಳದೊಂದಿಗೆ ಊಟ ವಸತಿ ಉಚಿತ. ಕುವೆಂಪುನಗರ ನೃಪತುಂಗ ರಸ್ತೆ, ಸೆಕೆಂಡ್ ಸ್ಟೇಜ್ 'ಎಂ' ಬ್ಲಾಕ್ ಈ ಕೂಡಲೇ ಸಂಪರ್ಕಿಸಿ:
8431458760, 9091876412

ಬೇಕಾಗಿದ್ದಾರೆ
'ಎ' ಗ್ರೇಡ್ ಮೆಗ್ ಫ್ಯಾಮಿಲಿ ರೆಸ್ಟೋರೆಂಟ್ 5 ವರ್ಷ ಅನುಭವವುಳ್ಳವರು ನಮಗೆ ಕ್ಯಾಪ್ಟನ್ – 2 ಜನ, ವೈಟರ್ – 4 ಜನ, ಟೇಬಲ್ ಬಾಯ್ – 2 ಜನ, ನಾರ್ತ್ ಅಸಿಸ್ಟೆಂಟ್ – 1 ಜನ, ಚೈನೀಸ್ ಅಸಿಸ್ಟೆಂಟ್ – 1 ಜನ, ಕೌಂಟರ್ ಬಾಯ್ – 2 ಜನ, ಜ್ಯೂಸ್ ಕೌಂಟರ್ – 1, ಚಾಟ್ ಕೌಂಟರ್ – 1, ಟೀ ಕೌಂಟರ್ – 1 ಜನ ಬೇಕಾಗಿದ್ದಾರೆ. ಸಂಪರ್ಕಿಸಿ: (ಉಡುಪಿ, ಮಂಗಳೂರು, ಶಿವಮೊಗ್ಗ) ಇವರಿಗೆ ಮೊದಲ ಆದ್ಯತೆ.
Mob: 7022027397

Room Boys Required
For lodge at Yelwal, Mysore Tq
contact Vinay:
9448554049
7022215557

New Oxford Public School, Srirangapatna
Requires Teachers to handle Social Science For High School State Board Syllabus & EVS for 1st std. to 5th std.
Attractive Salary Offered
9844739841

ನೇರ ನೇಮಕಾತಿ
ಹೇರ್ ಆಯಿಲ್ ಕಂಪನಿಯಲ್ಲಿ
ರಿಟೈಲ್ ಮಾರ್ಕೆಟಿಂಗ್ ಮಾಡಲು ಅನುಭವವುಳ್ಳ 10 ಜನ (ಪುರುಷರು) ಬೇಕಾಗಿದ್ದಾರೆ. ಪೆಟ್ರೋಲ್ ಅಲೈನ್ಸ್‌ನೊಂದಿಗೆ ತಿಂಗಳಿಗೆ: 15000 – 20000 ಇನ್‌ಸೆಂಟಿವ್ ಕೂಡ ಇರುತ್ತದೆ.
ಸಂಪರ್ಕಿಸಿ: 9448744888

WANTED JOB !
PART TIME ! HOME BASSED
ಗ್ಯಾಸ್ ಸೇಫ್ ಬಗ್ಗೆ
ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ Android ಫೋನ್ ಹೊಂದಿರಬೇಕು

EDUCATION	WORK TIME	SALARY
SSLC, PUC any Degree	4 HOURS	7000/- 10000/-

Office Staff (ದಟ್ಟಗಳ್ಳಿ ಮೈಸೂರು)
9986621226

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
ಸರಸ್ವತಿಪುರಂ, ಮೈಸೂರು
ನಾವು ರೆವಿನ್ಯೂ ಮನೆಗಳಿಗೆ ಮಾರ್ಟ್‌ಗೇಜ್ ಲೋನ್ ಹಾಗೂ ಪರ್ಸನಲ್ ಲೋನ್ ಮಾಡಿಕೊಡುತ್ತೇವೆ. 12,000 ಮೇಲೆ 50,000 ಸಂಬಳ, ಪಿಎಫ್ ಡಿಡಕ್ಷನ್ ಆಗಿ ಅಕೌಂಟ್‌ಗೆ ಬರುವವರಿಗೆ 30,000 ದಿಂದ 50,000ದ ವರೆಗೂ ಲೋನ್ ಮಾಡುತ್ತೇವೆ ಹಾಗೂ ಈ ಕೆಳಗಿನ ರೆವಿನ್ಯೂ ಸ್ಥಳಗಳಿಗೆ ರಾಘವೇಂದ್ರ ನಗರ, ಕನಕಗಿರಿ, ಜನತಾ ನಗರ, ಲೋಕನಾಯಕ ನಗರ, ಗಣೇಶ್ ನಗರ, ಮಹದೇವಪುರ ಲೋನ್ ಮಾಡುತ್ತೇವೆ.
8088647887

ಕಳೆದಿದೆ
ತಮ್ಮೇಗೌಡ, #721, 3ನೇ ಹಂತ, ಕೆಸರೆ, ಆರ್.ಎಸ್. ನಾಯ್ಡುನಗರ, ಮೈಸೂರು, ನಮಗೆ ಸೇರಿದ ಮನೆ ನಂ. 721 ರ (20x30) ಮನೆಯ ಮೂಲ ಮಂಜೂರಾತಿ ಪತ್ರವು ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9916693499

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
ಪವನ್ ಟೆಕ್ನಾಲಜೀಸ್
9611648636

ಹೊಸ ಮನೆ ಭೋಗ್ಯಕ್ಕೆ ಇದೆ
ಒಂದು BHK ಒಂದು ಮನೆ ಭೋಗ್ಯಕ್ಕೆ ಇದೆ. ಸೋಲಾರ್ + ಫೀಜರ್ ವ್ಯವಸ್ಥೆ 19ನೇ ಕ್ರಾಸ್, ಬಿಎಂಸಿ ನಗರ, ಮೈಸೂರು
8368448384
9632370435

ಬಾಡಿಗೆಗೆ
ಮೈಸೂರು ಸಿಟಿ ವಿದ್ಯಾರಣ್ಯಪುರಂ ನಾಲ್ಕನೇ ಮುಖ್ಯ ರಸ್ತೆಯ 27ನೇ ಕ್ರಾಸಿನ ಕಾರ್ನರ್‌ನಲ್ಲಿ 3 ಅಂಗಡಿಗಳು (10x10 ಅಡಿ), ಗೋಡೌನ್ (10x40 ಅಡಿ) ಮತ್ತು ಮನೆ (2BHK) ಲಭ್ಯವಿದೆ.
9448872684
9900079871

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವಿಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

JOBNET
ಮೊಬೈಲ್‌ನಲ್ಲಿ ಕೆಲಸ ಮನೆಯಲ್ಲಿ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ.
9731891409

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೋರಿಯರ್ ಸೌಲಭ್ಯವಿದೆ)
8749098879

ವಧು ಬೇಕು
ಅಡುಗೆ ಕೆಲಸಕ್ಕೆ ಬೇಕು
46 ವರ್ಷದ ಒಕ್ಕಲಿಗ ವಿಧುರಗೆ ವಧು–ವಿಧವೆ, ವಿಚ್ಛೇದಿತೆ ಬೇಕು ಲೇಡೀಸ್ ಪಿಜಿಯಲ್ಲೇ ಇದ್ದು ಅಡುಗೆ / ಸಹಾಯಕಿ ಕೆಲಸಕ್ಕೆ ಮಹಿಳೆಯರು ಬೇಕು
7406847717

ಚಾಮರಾಜನಗರದಲ್ಲಿ ಸೈಟುಗಳು ಮಾರಾಟಕ್ಕಿವೆ
Chuda Approved Layout NHಗೆ ಹೊಂದಿಕೊಂಡಂತೆ 30x40 ಅಳತೆಯ ಕೇವಲ 10 ಲಕ್ಷಕ್ಕೆ ಕೇವಲ 3 ಲಕ್ಷ ಮುಂಗಡ ಹಣ ಪಾವತಿಸಿ ಸುಲಭ ಕಂತು ರೂಪದಲ್ಲಿ ಕಟ್ಟಿ ಸೈಟುಗಳನ್ನು ನಿಮ್ಮದಾಗಿಸಿಕೊಳ್ಳಿ
6360955865
8660980069

FOR SALE
1) 30x40, 15 Lakhs sites in H.D. Kote Road. (2) 40x60, 52 L, sites near Ring Road. (3) 40x60 site new RT Nagar. (4) 30x40, N, G+2 house, near Ashwini Choultry, Srirampura. Sites available in Dattagalli, JP Nagar and Vijayanagar. *Contact:*
9538690359, 9035990359

ಬೇಕಾಗಿದ್ದಾರೆ
ಆಫೀಸ್ ಕೆಲಸಕ್ಕೆ ಹುಡುಗ/ಹುಡುಗಿಯರು ಬೇಕಾಗಿದ್ದಾರೆ
ಸಂಬಳ 10000-12000/-
Ph.9535112233
ಶಿವರಾಂಪೇಟೆ, ಮೈಸೂರು

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ ಸ್ಕೂಲ್, ಫ್ಯಾಕ್ಟರಿ ಅಪಾರ್ಟ್‌ಮೆಂಟ್ ಹೌಸಸ್ ಮತ್ತು ಆಸ್ಪತ್ರೆ, ಕೆಲಸಮಾಡಲು ಗಂಡಸರು ಮತ್ತು ಹೆಂಗಸರು ಬೇಕಾಗಿದ್ದಾರೆ.
9448887025
8618949564

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ.
Salary : 13,000-21,000+ESI+PF
ವಿದ್ಯಾರ್ಹತೆ: 10th, PUC, ITI, Diploma and Any Degree
ಇಂದೇ ಸಂಪರ್ಕಿಸಿ
9035734821

ನಾಟಿ ಔಷಧಿ
ಮಂಡಿ ನೋವು ಎಷ್ಟು ಹಳೆಯದಾದರೂ ನಾವು ಕೊಡುವ ನಾಟಿ ಔಷಧದಿಂದ ಕೇವಲ 15 ದಿವಸಗಳಲ್ಲಿ ಶಾಶ್ವತ ಪರಿಹಾರವಾಗುತ್ತದೆ. (ಡಿಸ್ಟ್ರಿಬ್ಯೂಟರ್ ಬೇಕಾಗಿದ್ದಾರೆ)
8951451333

ಬೇಕಾಗಿದ್ದಾರೆ
ಕ್ಲೀನರ್ ಮತ್ತು ಸೆಕ್ಯೂರಿಟಿ ಕೆಲಸಕ್ಕೆ ಬೇಕಾಗಿದ್ದಾರೆ. ಸಂಭ್ರಮ ಬಾರ್ & ರೆಸ್ಟೋರೆಂಟ್
9945108109
7411164808

ಪಾರ್ಟ್ ಟೈಂ ಕೆಲಸ ಇದೆ
ಯೂನಿಫಾರಂ ಅಂಗಡಿಗೆ ಹೆಲ್ಪರ್ ಕೆಲಸಕ್ಕೆ 30ವರ್ಷ ಒಳಗೆ ಲೇಡೀಸ್ ಮಾತ್ರ
9.30 AM to 3 PM - 1Post
10 AM to 3.30 PM - 1 Post
3 PM to 8.30 PM - 1 Post
ವಿದ್ಯಾರ್ಹತೆ ಅನುಭವ ಬೇಕಿಲ್ಲಾ 101 ಗಣಪತಿ ಹಿಂಭಾಗ 5ನೇ ಕ್ರಾಸ್, ಬಸವೇಶ್ವರ ರಸ್ತೆ, ಮೈಸೂರು
7975893679

SITE SALE
20X30 Muda Approved Attached Srirampura Brahmins Layout Block at Kenchalgud Ready for Register
9620349543

WANTED
MBA, IN HR , TELE CALLERS, DATA ENTRY OPERATORS, ACCOUNTANT, SALES EXECUTIVE, RECEPTIONIST, ITI IN DIPLOMA MECHANICAL
8867196098

ಈ ತಕ್ಷಣವೇ ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳಿನ ಪ್ರಸಿದ್ಧ ಕಂಪನಿಯಲ್ಲಿ ಕೆಲಸಮಾಡಲು ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು, ಟೈಲರುಗಳು, ಹೆಲ್ಪರ್‌ಗಳು ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ESI & PF ವಾರದ ರಜೆ ಮತ್ತು ಕೆಲವು ಸ್ಥಳಗಳಿಗೆ ಬಸ್ಸಿನ ಸೌಲಭ್ಯವಿರುತ್ತದೆ.
7795285485, 8105249880

ಪ್ರಮಾಣ ಪತ್ರ
ಮೈಸೂರು ಸಿಟಿ, ಜೆ.ಪಿ.ನಗರ, ಜನತಾ ಬಡಾವಣೆ 4ನೇ ಕ್ರಾಸ್, ಮನೆ ನಂ.4/102 ರಲ್ಲಿ ವಾಸವಾಗಿರುವ ಶ್ರೀ ರಾಚಪ್ಪಾಜಿ ರವರ ಮಗನಾದ ಸುಮಾರು 30 ವರ್ಷ ವಯಸ್ಸಿನ ಶ್ರೀ ಗಿರೀಶ್ ಆರ್ ಆದ ನಾನು ಪ್ರಮಾಣೀಕರಿಸಿ ಹೇಳುವುದೇನೆಂದರೆ. ನನ್ನ ಶಾಲಾ ದಾಖಲಾತಿಯಲ್ಲಿ, ಬ್ಯಾಂಕ್ ಖಾತೆಯಲ್ಲಿ ಹಾಗೂ ಡ್ರೈವಿಂಗ್ ಲೈಸೆನ್ಸ್‌ನಲ್ಲಿ ನನ್ನ ಹೆಸರು ಗಿರೀಶ್ ಎಸ್ ಹಾಗೂ ನನ್ನ ತಂದೆಯ ಹೆಸರು ಸಿದ್ದಪ್ಪಾಜಿ ಎಂದು ನಮೋದಾಗಿರುತ್ತದೆ. ಆದರೆ ನನ್ನ ಆಧಾರ್ ಕಾರ್ಡ್, ಕುಟುಂಬ ಪಡಿತರ ಚೀಟಿ, ಚುನಾವಣಾ ಆಯೋಗ ಗುರುತಿನ ಚೀಟಿ ಮತ್ತು ಪಾನ್ ಕಾರ್ಡ್‌ನಲ್ಲಿ ನನ್ನ ಹೆಸರು ಗಿರೀಶ್.ಆರ್. ಹಾಗೂ ನನ್ನ ತಂದೆಯ ಹೆಸರು ರಾಚಪ್ಪಾಜಿ ಎಂದು ನಮೋದಾಗಿರುತ್ತದೆ. ಮೇಲ್ಕಂಡ ಗಿರೀಶ್.ಎಸ್ ಬಿನ್ ಸಿದ್ದಪ್ಪಾಜಿ ಮತ್ತು ಗಿರೀಶ್ ಆರ್ ಬಿನ್ ರಾಚಪ್ಪಾಜಿ ಎಂಬ ಎರಡು ಹೆಸರಿನ ವ್ಯಕ್ತಿಯು ನಾನೇ ಆಗಿರುತ್ತೇನೆ. ಆದರೆ ಇನ್ನೂ ಮುಂದೆ ನನ್ನ ದಿನನಿತ್ಯದ ಎಲ್ಲಾ ವ್ಯವಹಾರಗಳಲ್ಲಿ, ಹಣಕಾಸು ವ್ಯವಹಾರ, ಕೃಷಿ ವ್ಯವಹಾರ ಮತ್ತು ವ್ಯಾಪಾರ ವ್ಯವಹಾರಗಳು ಹಾಗೂ ಚುನಾವಣೆಗೆ ಸಂಬಂಧಪಟ್ಟ ಇತ್ಯಾದಿ ವ್ಯವಹಾರಗಳಲ್ಲಿ ನಾನು ಗಿರೀಶ್.ಆರ್ ಬಿನ್ ರಾಚಪ್ಪಾಜಿ ಎಂಬ ಹೆಸರಿನಿಂದಲೇ ವ್ಯವಹರಿಸುತ್ತೇನೆ ಹಾಗೂ ಗಿರೀಶ್.ಆರ್ ಎಂದೇ ಸಹಿ ಮಾಡುತ್ತೇನೆ ಎಂದು ದೃಢೀಕರಿಸುತ್ತೇನೆ.
ಸಹಿ/- ಗಿರೀಶ್.ಆರ್

ಬೇಕಾಗಿದ್ದಾರೆ
ವೃದ್ಧರು ಮತ್ತು ರೋಗಿಗಳನ್ನು ಆರೈಕೆ ಮಾಡಲು ಆಸಕ್ತಿಯುಳ್ಳ 18 ವರ್ಷ ಮೇಲ್ಪಟ್ಟ ಯುವಕ ಯುವತಿಯರು ಕೂಡಲೇ ಬೇಕಾಗಿದ್ದಾರೆ. ಊಟ ವಸತಿಯೊಂದಿಗೆ ತಿಂಗಳ ವೇತನ 12000–ರಿಂದ 18000 ತನಕ ಕೊಡಲಾಗುವುದು ಮೊದಲು ಬಂದವರಿಗೆ ಆದ್ಯತೆ, ನಿಮ್ಮ ದಾಖಲಾತಿ ಸಮೇತ ಸಂಪರ್ಕಿಸಿ:
9035324777, 7259306665

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.
ಸಂಬಳ: 12,000/–
ಸಮಯ: ಬೆಳಿಗ್ಗೆ 8 ರಿಂದ ಸಂಜೆ 5ರವರೆಗೆ
7899754149

ಮನೆ ನಿವೇಶನಗಳು ಮಾರಾಟಕ್ಕಿದೆ
1. ಪಾಂಡವಪುರ ತಾ॥ ಜಕ್ಕನಹಳ್ಳಿ ವೃತ್ತ (NH150A)ಅಳತೆ ಪೂ–ಪ 40, ಉ–ದ 50, 2.ಪಾಂಡವಪುರ ಟೌನ್, ಕೃಷ್ಣನಗರ, ಅಳತೆ: ಪೂ–ಪ. 48, ಉ–ದ : 40
8073589849
ದಲ್ಲಾಳಿಗಳಿಗೆ ಅವಕಾಶವಿಲ್ಲ

VIDYAVAHINI SCHOOL (R)
Hebbal, 2nd Stage, Mysuru-570017
TEACHERS REQUIRED
Subject: English and Social Science, B.A / M.A, B.Ed
Subject : Mathematics and Science, B.Sc / M.Sc, B.Ed
Email-vidyavahini06@gmail.com
9844032278, 7795115811

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 45 8 Hrs Duty, 3 Shift ಗಳು ಹಾಗೂ Week Off ಇರುತ್ತದೆ. ಸಂಬಳ: ESI, PF ಒಳಗೊಂಡು 16,000/- ಹೆಚ್ಚಿನ ಮಾಹಿತಿಗಾಗಿ ಖುದ್ದಾಗಿ ಬಂದು ಸಂಪರ್ಕಿಸಿ ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ ರಿಂಗ್ ರಸ್ತೆ, ಮೈಸೂರು
9986874584

REQUIRED TEACHERS
NST/NTT/PPTT - 02
MA, B.Ed (English) -01
PUC, D.Ed -04
Phy.Edn. Teacher 01
(Preferably Female Teachers English Fluency is Must)
9901670090
9945640116

ಸುವರ್ಣಯಾತ್ರ
ಚಾರ್ ಧಾಮ್ ಯಾತ್ರ 13 ದಿನಗಳು 04–06–23. ಕಾಶಿ ಪ್ರವಾಸ 7 ದಿನಗಳು 26–5–23, ನೇಪಾಳ ಪ್ರವಾಸ 9 ದಿನಗಳು 9–6–23 ವೈಷ್ಣೋದೇವಿ, ಸಿಮ್ಲಾ, ಮನಾಲಿ 10 ದಿನಗಳು 19–6–23
9019462508, 9008381022

ಶಿರಡಿ ಪ್ರವಾಸ
12 ಮೇ 2023, 3 ಜ್ಯೋತಿರ್ಲಿಂಗ ಸಮೇತ 4 ದಿನಗಳು ಪಂಡರಾಪುರ, ಶನಿಸಿಂಗಪುರ, ಗೃಷ್ಣೇಶ್ವರ, ಎಲ್ಲೋರ, ನಾಸಿಕ್, ತ್ರಯಂಬಕೇಶ್ವರ, ಭೀಮಾಶಂಕರ.
ಮೈತ್ರಿ ಟ್ರಾವೆಲ್ಸ್
9482421499

WANTED
Education BE/ Diploma Civil Graduates, Experience 0-2Yrs (Construction Field work) Required Supervisor, Office Boys (Basic Computer Skills) Age Limit 23-40 Yrs (Male Only) Office Location, Mysore
Office: 0821-3588801
9538320877, 7259382467

LOST
I, Sushant Kumar Roy (SUSHANT KUMAR ROY) S/O. Badri Narayan Roy, No.2017, 26th Cross, 2nd Stage Hebbal, Mysuru City, Karnataka-570017 I Lost My Original Khata No.40375/20-21 Shyadanahalli Survey No.63/1 Finders Please Contact
7406760600

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಹಾಗೂ ಸೆಕ್ಯೂರಿಟಿ ಸೂಪರ್‌ವೈಸರ್ ತಕ್ಷಣ ಬೇಕಾಗಿದ್ದಾರೆ. 8 ಗಂಟೆ ಕೆಲಸ, ಉತ್ತಮ ಸಂಬಳ PF/ESI ಇದೆ. ಸ್ಥಳ: ಹೆಬ್ಬಾಳ, ಮೈಸೂರು
9591004487
9980311233

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಇಂಡ್ಯಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ನಿರ್ವಹಿಸಲು ಪುರುಷರು ವಿದ್ಯಾವಂತ ಹಾಗೂ ಅನುಭವವಿರುವ 40 ವರ್ಷದೊಳಗಿನವರು ಸೆಕ್ಯೂರಿಟಿ ಹೆಡ್ ಗಾರ್ಡ್ ಹಾಗೂ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ ರೂ. 15,000-16,000/- (8Hours Duty) ಹಾಗೂ ಇ.ಎಸ್.ಐ., ಪಿ.ಎಫ್ ಸೌಲಭ್ಯವಿರುತ್ತದೆ.
9731976148

ಸೈಟ್ ಮಾರಾಟಕ್ಕಿದೆ
ಟಿ.ನರಸೀಪುರ ಮೇನ್ ರೋಡ್, ವರುಣಾ ಕೆರೆ ಹತ್ತಿರ, 30x40 ಪೂರ್ವಾಭಿಮುಖ ದಿಕ್ಕು (ವರಕೂಡು ಗೇಟ್ ಹತ್ತಿರ)
7676077678

FOR RENT
Commercial Space Ground Floor 800 Squar Feet, First Floor, 500 Squar Feet, Ready to Occupy, Along Bannur Road, Near Ring Road, Please Contact Directly, Mysore
9448070571

ಬೇಕಾಗಿದ್ದಾರೆ
1. Anchors 2. Copy Editors 3. Reporters 4. Cameraman 5. Video Editors 6. Graphic Designers 7. Marketing Executives (ನ್ಯೂಸ್‌ಚಾನಲ್‌ಗಾಗಿ)
7019362184
7899268719

ಬೇಕಾಗಿದ್ದಾರೆ
ಕುಶಾಲನಗರದಲ್ಲಿರುವ ಪ್ರಖ್ಯಾತ ಸಸ್ಯಹಾರಿ ಹೋಟೆಲ್‌ಗೆ ಈ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ. ಮ್ಯಾನೇಜರ್ಸ್–1, ಕ್ಯಾಷಿಯರ್–2, ವೆಯಿಟರ್ಸ್–3, ಅಡುಗೆ ಸಹಾಯಕರು–2, ಪಾತ್ರೆವಾಶಿಂಗ್–2 ಕೂಡಲೇ ಸಂಪರ್ಕಿಸಿ:
7899929233

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಆಫೀಸರ್ ಹಾಗೂ ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣಬೇಕಾಗಿದ್ದಾರೆ. ಆಕರ್ಷಕ ಸಂಬಳ ESI+PF ಹಾಗೂ ಕೆಲಸದ ಸಮಯದಲ್ಲಿ ಊಟ+ತಿಂಡಿ ವ್ಯವಸ್ಥೆ ಇರುತ್ತದೆ ತಕ್ಷಣ ಸಂಪರ್ಕಿಸಿ:
8618971363
9060075860

ಬೇಕಾಗಿದ್ದಾರೆ
ಮೈಸೂರು ಕೊಡಗು ಮಂಗಳೂರು ಮಾರ್ಗಗಳಲ್ಲಿ ಸಂಚರಿಸುವ ಲಾರಿಗಳಲ್ಲಿ ಪಾರ್ಸಲ್ ವಿತರಿಸಲು ದೃಢಕಾಯ ಯುವಕರು, ಡ್ರೈವರ್ ಬೇಕಾಗಿದ್ದಾರೆ. ಫುಲ್ ಟೈಮ್–ಪಾರ್ಟ್ ಟೈಮ್ ಕೆಲಸಕ್ಕೆ ಪಿಯುಸಿ, ಎಸ್‌ಎಸ್‌ಎಲ್‌ಸಿ ಓದಿರುವ ಯುವಕರು ಬೇಕಾಗಿದ್ದಾರೆ. 1) ಡೆಲಿವರಿ ಬಾಯ್ 11,000, 2) ಹೆವಿ ಡ್ರೈವರ್ 18,000, 3) ಟೆಂಪೋ ಡ್ರೈವರ್ 16,000/–
9740408488

HOUSE FOR RENT
1st Floor, 3BHK with Car Parking # 1809, 1st Main, K-Block, Kuvempunagar,
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
6360952767

FOR SALE
Running Medical Shop with Clinic For Sale at Hebbal 1st Stage, Mysore
8217573921

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 40 ವರ್ಷ ವಿದ್ಯಾರ್ಹತೆ : 7 ರಿಂದ PUC, ITI Fitter, Diploma Mach
9035381989

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ ಮತ್ತು ಗಂಗೋತ್ರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ :
ಸಂಬಳ: 16500 + W/O (8Hrs)
15500 + W/O (26 Days)
9620667819, 9880727819

ಹೊಸ ಮನೆ ಬಾಡಿಗೆಗೆ ಇದೆ
30x40 2 BHK
ಶ್ರೀ ಭೈರವೇಶ್ವರ ಬಡಾವಣೆ ನ್ಯಾಯಾಂಗ ಬಡಾವಣೆ ಪಕ್ಕ, ಬೆಂಚ್‌ಕಟ್ಟೆ ಮಾರಮ್ಮನ ದೇವಸ್ಥಾನ ಪಾರ್ಕ್ ಹತ್ತಿರ, ಮೈಸೂರು
8147382815
9482063693

URGENTLY REQUIRED
Wanted B.Sc., Agriculture I,II,II with Original Certificates Aadhar Card, PAN Card Send Resume Testimonials to For Pest Control Company
GPC ASSOCIATES
Gpcassociates23@gmail.com
9591011669
Selected candidates salary will commensurate as per company norms. Willing to travel National and International.

ಮದ್ದೂರಿನಲ್ಲಿ ಮನೆ ಮಾರಾಟಕ್ಕಿದೆ
3500 SqFt, 3 ಮನೆಯುಳ್ಳ ಬಾಡಿಗೆ ಬರುತ್ತಿರುವ, ಜಾಗ ಕೋಟೆ ಬೀದಿ ಮದ್ದೂರಿನಲ್ಲಿ ಮಾರಾಟಕ್ಕಿದೆ, ಅವಶ್ಯಕತೆ ಇದ್ದರೆ ಮಾತ್ರ
9019597699

ಸೈಟು ಮಾರಾಟಕ್ಕಿದೆ
30x40 ಅಳತೆಯ "A" ಖಾತೆಯುಳ್ಳ ಸೈಟು ಮಾರಾಟಕ್ಕಿದೆ ತಳೂರು ಸರ್ಕಲ್ ಹತ್ತಿರ 12 ಲಕ್ಷದ 75 ಸಾವಿರಗಳು ಮಾತ್ರ
9742198093

ಬೇಕಾಗಿದ್ದಾರೆ
1.) ಹೌಸ್ ಕೀಪಿಂಗ್ (ಮಹಿಳೆಯರು ಮಾತ್ರ) ಸ್ಥಳ: ಮೇಟಗಳ್ಳಿ ಸುತ್ತಮುತ್ತ ಹಾಗೂ ಸಿಟಿ 2. ಫೀಲ್ಡ್ ಸೂಪರ್‌ವೈಸ್ (ಅನುಭವಿ ಹಾಗೂ ದ್ವಿಚಕ್ರ ಹೊಂದಿರಬೇಕು) 3) ಸೆಕ್ಯೂರಿಟಿ ಗಾರ್ಡ್‌ಗಳು, ಸ್ಥಳ: ಸಕಲೇಶಪುರ (ಊಟ, ತಿಂಡಿ ಹಾಗೂ ವಸತಿ ಉಚಿತ)
9686422400
9242406261

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ:
ಡಾ. ಗುರೂಜಿ
7899625268, 9448229184
Lady Receptionist ಬೇಕಾಗಿದ್ದಾರೆ

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ಕೃಷ್ಣನಾಯಕ ನಾಮಪತ್ರ ಸಲ್ಲಿಕೆ

ವೈಭವದ ಮೆರವಣಿಗೆ, ಮೊಳಗಿದ ಜಯಕಾರ ಘೋಷಣೆ





ಭಾರತೀಯ ಜನತಾ ಪಾರ್ಟಿಯ ಅಭ್ಯರ್ಥಿಯಾಗಿ, ಪ್ರಮುಖ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳ ಜನಸಾಗರದೊಂದಿಗೆ ನಾನು ನಾಮಪತ್ರ ಸಲ್ಲಿಸಿದ್ದೇನೆ, ತಾಲೂಕಿನ ಜನತೆ ಮತ್ತು ಮುಖಂಡರಿಗೆ ನಾನು ಕೃತಜ್ಞತೆ ಸಲ್ಲಿಸುವುದರ ಮೂಲಕ ಮುಂದಿನ ದಿನಗಳಲ್ಲಿ ಕೋಟೆ ಕ್ಷೇತ್ರದಿಂದ ಬಿಜೆಪಿ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಸಂಪೂರ್ಣ ಜವಾಬ್ದಾರಿಯಿಂದ, ಪಕ್ಷವನ್ನು ಸಂಘಟಿಸುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸುತ್ತೇನೆ. ರಾಜ್ಯ ಹಾಗೂ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿರುವುದರಿಂದ ತಾಲೂಕಿನ ಜನತೆ ನನ್ನನ್ನು ಆಶೀರ್ವದಿಸಿ ಶಾಸಕನಾಗಿ ಮಾಡುತ್ತಾರೆ ಎಂಬ ನಂಬಿಕೆ ನನ್ನಲ್ಲಿದೆ. ಮುಂದಿನ ದಿನಗಳಲ್ಲಿ ತಾಲೂಕಿನ ಅಭಿವೃದ್ಧಿಗೆ ಹೆಚ್ಚಿನ ಒತ್ತುಕೊಡಲು ಮುಂದಾಗುತ್ತೇನೆ ಎಂದರು. –ಕೆ.ಎಂ. ಕೃಷ್ಣನಾಯಕ, ಬಿಜೆಪಿ ಅಭ್ಯರ್ಥಿ.

ಹೆಚ್.ಡಿ.ಕೋಟೆ, ಏ.19– ಬಿರು ಬಿಸಿಲಿನ ನಡುವೆ ಬಿಜೆಪಿ ಅಭ್ಯರ್ಥಿ ಕೆ.ಎಂ.ಕೃಷ್ಣನಾಯಕ ಬುಧವಾರ ಅದ್ದೂರಿ ಮೆರವಣಿಗೆ ಮೂಲಕ ನಾಮಪತ್ರ ಸಲ್ಲಿಸಿದರು.

ಮೊದಲಿಗೆ ತಾಲೂಕಿನ ಶಕ್ತಿ ದೇವತೆ ಚಿಕ್ಕದೇವಮ್ಮ ಬೆಟ್ಟಕ್ಕೆ ಪತ್ನಿ ಸುಸ್ಮಿತ, ಮುಖಂಡ ಸಿ.ವಿ. ನಾಗರಾಜ್, ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳೊಂದಿಗೆ ತೆರಳಿ ತಾಯಿ ಚಿಕ್ಕದೇವಮ್ಮನಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಹೆಚ್.ಡಿ.ಕೋಟೆ ಪಟ್ಟಣದ ಗದ್ದಿಗೆ ಸರ್ಕಲ್ ಸಮೀಪದ ಬಣ್ಣಾರಿಯಮ್ಮನ ದೇವಸ್ಥಾನದ ಆವರಣದಿಂದ ತೆರೆದ ವಾಹನದಲ್ಲಿ, ಮಂಗಳವಾದ್ಯ, ವೀರಗಾಸೆ, ನಾದಸ್ವರ, ಕೀಲು ಗೊಂಬೆ, ಪೂಜಾ ಕುಣಿತ, ನಗಾರಿ, ತಮಟೆ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಕಲಾ ತಂಡಗಳು ಹಾಗೂ ಬೈಕ್ ರ್ಯಾಲಿ ಮೂಲಕ ಮೆರವಣಿಗೆಯಲ್ಲಿ ಬಂದು ನಾಮಪತ್ರ ಸಲ್ಲಿಸಿದರು.

ದಾರಿ ಉದ್ದಕ್ಕೂ ಬಿಜೆಪಿ ಕಾರ್ಯಕರ್ತರು ಅಲ್ಲಲ್ಲಿ ಪಟಾಕಿ ಸಿಡಿಸಿ, ಪಕ್ಷ ಹಾಗೂ ಬಿಜೆಪಿ ನಾಯಕರ ಪರವಾಗಿ ಘೋಷಣೆ ಕೂಗಿ ಸಂಭ್ರಮಿಸಿದರು. ಬಾಪೂಜಿ ವೃತ್ತಕ್ಕೆ ತೆರೆದ ವಾಹನ ಬರುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರು ಬೃಹತ್ ಸೇಬಿನ ಹಾರ ಹಾಕಿ ಸ್ವಾಗತಿಸಿದರು.

ಮೆರವಣಿಗೆಯಲ್ಲಿ ಪ್ರತಿಯೊಬ್ಬರು ಪಕ್ಷದ ಶಲ್ಯ, ಟೋಪಿ ಧರಿಸಿ, ಬಿಜೆಪಿ ನಾಯಕರಾದ ಪ್ರಧಾನಿ ನರೇಂದ್ರ ಮೋದಿ, ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಶ್ರೀನಿವಾಸ್ ಪ್ರಸಾದ್, ಚಿತ್ರನಟ ಸುದೀಪ್ ಹಾಗೂ ಅಭ್ಯರ್ಥಿ ಕೃಷ್ಣನಾಯಕ ಅವರ ಭಾವಚಿತ್ರ ಹಾಗೂ ಪಕ್ಷದ ಧ್ವಜವನ್ನು ಹಿಡಿದು, ಮುಂದಿನ ದಿನಗಳಲ್ಲಿ ಮೋದಿ ಸರ್ಕಾರ ಬರುವುದರ ಮೂಲಕ ಕೋಟೆ ಕ್ಷೇತ್ರದಲ್ಲಿ ಕೆ.ಎಂ. ಕೃಷ್ಣನಾಯಕ ಅವರು ಶಾಸಕರಾಗಬೇಕು ಎಂದು ಘೋಷಣೆ ಕೂಗಿದರು.

ಸುಮಾರು ಎರಡು ಗಂಟೆಗಳ ಕಾಲ ಮೆರವಣಿಗೆ ನಂತರ ಮೂಲಕ ಆಡಳಿತ ಸೌಧ ತಲುಪಿ ಚುನಾವಣಾ ಅಧಿಕಾರಿ ಕುಮುದ ಶರತ್ ಅವರಿಗೆ ಪತ್ನಿ ಸರಸ್ವತಿ, ಬಿಜೆಪಿ ಮುಖಂಡರಾದ ಡಾ.ಕೃಷ್ಣಸ್ವಾಮಿ, ರಾಜೇಂದ್ರ, ಮೊತ್ತ ಬಸವರಾಜಪ್ಪ, ಸಿ.ವಿ.ನಾಗರಾಜು ಜೊತೆ ನಾಮಪತ್ರ ಸಲ್ಲಿಸಿದರು. ಮೆರವಣಿಗೆಯಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ತಾಲೂಕು ಬಿಜೆಪಿ ಉಸ್ತುವಾರಿ ಅಪ್ಪಣ್ಣ, ಜಿಲ್ಲಾ ಅಧ್ಯಕ್ಷ ಮಂಗಳ ಸೋಮಶೇಖರ್, ತಾಲೂಕು ಅಧ್ಯಕ್ಷ ಗುರುಸ್ವಾಮಿ, ಜಿಪಂ ಮಾಜಿ ಸದಸ್ಯರಾದ ವೆಂಕಟಸ್ವಾಮಿ ಎಚ್.ಸಿ. ಲಕ್ಷ್ಮಣ್, ಟೌನ್ ಅಧ್ಯಕ್ಷ ನಂದೀಶ್, ಮುಖಂಡರಾದ ಕೃಷ್ಣಸ್ವಾಮಿ, ಅಶ್ವಥ್ ನಾರಾಯಣ್, ಡ್ರಿಪ್ ಸಿದ್ದನಾಯಕ, ಶಿವಕುಮಾರ್, ಕಾಶಿಪತಿ, ಮಹೇಶ್, ಸಿದ್ದರಾಜು, ಪ್ರಶಾಂತ್, ಯೋಗೇಶ್, ಬಸವರಾಜಪ್ಪ, ಚಂದ್ರಮೌಳಿ, ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳ ಜನಸಾಗರವೇ ಹರಿದು ಬಂತು.

ನರಸೀಪುರದಲ್ಲಿ ಬಿಜೆಪಿಯತ್ತ ಜನರ ಒಲವು

ಮನೆ ಮನೆಗೆ ತೆರಳಿ ಮತಯಾಚಿಸಿ ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದ ಅಭ್ಯರ್ಥಿ



ತಿ.ನರಸೀಪುರ. ಏ.19– ಕ್ಷೇತ್ರದ ಪ್ರಬುದ್ಧ ಮತದಾರರು ಈ ಬಾರಿ ಸ್ಥಳೀಯರ ಆಯ್ಕೆಗೆ ಒಲವು ತೋರಿದ್ದು, ಯಾವುದೇ ಅನುಮಾನವಿಲ್ಲದೇ ನನ್ನನ್ನು ಆಶೀರ್ವದಿಸಲಿದ್ದಾರೆ ಎಂದು ಬಿಜೆಪಿ ಅಭ್ಯರ್ಥಿ ಡಾ.ಎಂ.ರೇವಣ್ಣ ವಿಶ್ವಾಸ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಸೋಮವಾರ ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ ರೇವಣ್ಣ ಬುಧವಾರ ಮತ ಕ್ಷೇತ್ರದ ಕೊಳತ್ತೂರು ಗ್ರಾಮದಲ್ಲಿ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿ ಮತದಾರರ ಸಹಕಾರ ಕೋರಿ ಪತ್ರಕರ್ತರೊಂದಿಗೆ ಮಾತನಾಡಿದರು.

ಮತಯಾಚನೆಗೆ ವಿವಿಧ ಗ್ರಾಮಗಳಿಗೆ ತೆರಳುತ್ತಿರುವ ವೇಳೆ ಮತದಾರರಿಂದ ನಿರೀಕ್ಷೆಗೂ ಮೀರಿದ ಸ್ಪಂದನೆ ದೊರಕುತ್ತಿದ್ದು ಪ್ರೀತಿ, ವಿಶ್ವಾಸದಿಂದ ಸ್ವಾಗತ ಕೋರುತ್ತಿದ್ದಾರೆ. ಸ್ಥಳೀಯ ಅಭ್ಯರ್ಥಿಯಾಗಿರುವ ನನಗೆ ಈ ಬಾರಿ ಚುನಾವಣೆಯಲ್ಲಿ ಗೆಲ್ಲಿಸಿ ಕೊಡುವ ಭರವಸೆ ನೀಡುತ್ತಿದ್ದಾರೆ ಎಂದರು.

ಜನ ನೀಡುತ್ತಿರುವ ಅಭೂತಪೂರ್ವ ಸ್ವಾಗತ ನೋಡಿದರೆ ಮತದಾರ ಈ ಬಾರಿ ಕ್ಷೇತ್ರದಲ್ಲಿ ಬದಲಾವಣೆ ಬಯಸಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಈ ಹಿಂದೆ ಆಯ್ಕೆಯಾಗಿದ್ದ ಜನಪ್ರತಿನಿಧಿಗಳಿಂದ ಜನರಿಗೆ ಕ್ಷೇತ್ರಕ್ಕೆ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗಿಲ್ಲದಿರುವುದರಿಂದ ಈ ಬಾರಿ ನನಗೆ ಆಶೀರ್ವದಿಸಲಿದ್ದಾರೆ ಎಂದರು.

ಚುನಾವಣೆ ಪ್ರಚಾರ ನಿಮಿತ್ತ ಕೆಲ ಗ್ರಾಮಗಳಿಗೆ ಭೇಟಿ ನೀಡಿದ್ದ ವೇಳೆ ಅಸಮರ್ಪಕ ಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸಮಸ್ಯೆ, ಕೆರೆ ಹೂಳೆತ್ತುವುದು,ರಸ್ತೆ ಸಮರ್ಪಕವಾಗಿ ಮಾಡಲಾಗಿದೆಯೇ ಎಂಬುದರ ಬಗ್ಗೆ ಗಮನ ಹರಿಸಿದ್ದೇನೆ. ಆದರೆ ಎಲ್ಲೂ ಗ್ರಾಮೀಣ ಭಾಗದ ಜನರ ಮೂಲಭೂತ ಸೌಕರ್ಯವನ್ನು ಕಲ್ಪಿಸಿಕೊಡಲು ಚುನಾಯಿತ ಪ್ರತಿನಿಧಿಗಳು ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ತಿ.ನರಸೀಪುರ ಕ್ಷೇತ್ರ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳವಾಗಿದ್ದು ಇಲ್ಲಿ ಯಾವೊಂದು ಸಮಸ್ಯೆಗಳು ಬಗೆಹರಿದಿಲ್ಲ. ಯಾವುದೇ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಲು ಇದುವರೆಗೆ ಚುನಾಯಿತರಾದ ಜನಪ್ರತಿನಿಧಿಗಳು ಪ್ರಯತ್ನಪಟ್ಟಿಲ್ಲ ಎಂದು ಗ್ರಾಮಸ್ಥರೇ ಸಮಸ್ಯೆ ತೋಡಿಕೊಂಡಿದ್ದಾರೆ. ಹಾಗಾಗಿ ಇಲ್ಲಿ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಕಾರ್ಯಗಳಾಗಿಲ್ಲ. ಚುನಾವಣೆಯಲ್ಲಿ ಗೆದ್ದ ಚುನಾಯಿತ ಪ್ರತಿನಿಧಿಗಳು ಗ್ರಾಮಗಳ ಅಭಿವೃದ್ಧಿಯಲ್ಲಿ ತಾರತಮ್ಯ ಮಾಡುತ್ತಿದ್ದಾರೆ ಎಂದರು.

ಇದೇ ವೇಳೆ ಡಾ.ರೇವಣ್ಣ ಕೊಳತ್ತೂರು ಗ್ರಾ.ಪಂ.ವ್ಯಾಪ್ತಿಯ ಸೀಗೋಡಿಪುರ, ಮುಡುಕನಪುರ, ಹಲವಾರ, ಚಿಟಗಯ್ಯನ ಕೊಪ್ಪಲು, ಕೋಣಗಳ್ಳಿ, ನಾಗಲಗೆರೆ, ಬೂದಹಳ್ಳಿ ಮತ್ತು ನೆರಗ್ಯಾತನಹಳ್ಳಿ ಗ್ರಾಮಗಳಲ್ಲಿ ಮನೆ ಮನೆಗೆ ತೆರಳಿ ಬಿರುಸಿನ ಮತ ಯಾಚನೆ ನಡೆಸಿದರು.

ಬಿಜೆಪಿ ಮಾಜಿ ಕ್ಷೇತ್ರಾಧ್ಯಕ್ಷ ಹಿರಿಯೂರು ಪರಶಿವಮೂರ್ತಿ, ಎಸ್.ಸಿ.ಮೋರ್ಚಾ ಅಧ್ಯಕ್ಷ ಚೌಹಳ್ಳಿ ಸಿದ್ದರಾಜು, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಪುಟ್ಟಸ್ವಾಮಿ, ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ್, ಯುವ ಮೋರ್ಚಾ ಉಪಾಧ್ಯಕ್ಷ ರವೀಂದ್ರ ಪ್ರಭು, ಕೆಬ್ಬೇಹುಂಡಿ ಶಿವಕುಮಾರ್, ಅಮಿತ್ ಪ್ರಭು, ಯೋಗೇಶ್, ಕಿರಣ್, ಆಡಿಟರ್ ಮಂಜುನಾಥ್ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸಂಘದ ಅಧ್ಯಕ್ಷರು ಮತ್ತು ಗ್ರಾಮದ ಯಜಮಾನರು ಇದ್ದರು.

ಕಬಿನಿ ಹಿನ್ನೀರಿನ ಕೆಸರಲ್ಲಿ ಸಿಲುಕಿ ಆದಿವಾಸಿ ವ್ಯಕ್ತಿ ಸಾವು

ಮೈಸೂರು,ಏ.19– ಸ್ನೇಹಿರೊಂದಿಗೆ ಕಬಿನಿ ಹಿನ್ನೀರಿನಲ್ಲಿ ಈಜಲು ಹೋಗಿದ್ದ ಆದಿವಾಸಿ ಕೆಸರಿನಲ್ಲಿ ಸಿಲುಕಿ ಸಾವನ್ನಪ್ಪಿದ ಘಟನೆ ಹೆಚ್.ಡಿ.ಕೋಟೆಯ ಬಳ್ಳೆಹಾಡಿಯಲ್ಲಿ ನಡೆದಿದೆ. ಹೊಸಹಳ್ಳಿ ಹಾಡಿಯ ಆದಿವಾಸಿ ಮಾಸ್ತಿ(32) ಕೆಸರಿಗೆ ಸಿಲುಕಿ ಮೃತಪಟ್ಟವರು.



ನಿನ್ನೆ ಸಂಜೆ ಮಾಸ್ತಿ ಸೇರಿದಂತೆ ಹೊಸಹಳ್ಳಿಯ ಮೂವರು ಕಬಿನಿ ಹಿನ್ನೀರಿನ ಈಜಲು ತೆರಳಿದ್ದರು. ಅದೇ ಮಾರ್ಗವಾಗಿ ಅರಣ್ಯ ಇಲಾಖೆ ಸಿಬ್ಬಂದಿ ಆಗಮಿಸಿದ್ದಾಗ ಅವರನ್ನು ಕಂಡು ಹೆದರಿದ ಎಲ್ಲರೂ ಒಂದೊಂದು ದಿಕ್ಕಿನಲ್ಲಿ ಈಜುತ್ತಾ ಹೋದರೆಂದು ಹೇಳಲಾಗಿದ್ದು, ಈ ವೇಳೆ ಮಾಸ್ತಿ ಕೆಸರಿಗೆ ಸಿಲುಕಿ ಹೊರಬರಲಾಗದೆ ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ ಅರಣ್ಯ ಸಿಬ್ಬಂದಿ ಬೆದರಿಕೆಯೇ ಮಾಸ್ತಿ ಕಾರಣ ಎಂದು ಆತನ ಸಂಬಂಧಿಕರು ಆರೋಪಿಸಿದ್ದಾರೆ. ಈ ಸಂಬಂಧ ಅಂತರಸಂತೆ ಠಾಣೆಯಲ್ಲಿ ಅನುಮಾನಸ್ಪದ ಸಾವು (ಯುಡಿಆರ್ 174ಸಿ) ಪ್ರಕರಣ ದಾಖಲಾಗಿದೆ. ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ಈತನ ಸಾವು ಹೇಗೆ ಸಂಭವಿಸಿದೆ ಎಂದು ನಿಖರವಾಗಿ ತಿಳಿಯಲಿದೆ.

ನಂಜನಗೂಡು ತಾಲೂಕಿನಲ್ಲಿ ದರ್ಶನ್ ಧ್ರುವನಾರಾಯಣ್ ಬಿರುಸಿನ ಪ್ರಚಾರ



ನಂಜನಗೂಡು, ಏ.19– ನಂಜನಗೂಡು ಕ್ಷೇತ್ರದ ಜನರ ನೋವು, ಸಮಸ್ಯೆ ಆಲಿಸಿ, ಕ್ಷೇತ್ರವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಲು ಹೆಚ್ಚಿನ ಸಂಖ್ಯೆಯಲ್ಲಿ ಮತ ನೀಡಿ ಆಶೀರ್ವದಿಸಿ ನಿಮ್ಮ ಸೇವೆ ಮಾಡಲು ನನಗೊಂದು ಅವಕಾಶ ಕಲ್ಪಿಸಿಕೊಡಿ. ನಾನು ನಿಮ್ಮ ನಂಬಿಕೆಗೆ ಚ್ಯುತಿ ಬಾರದಂತೆ ನಡೆದುಕೊಳ್ಳುತ್ತೇನೆ ಎಂದು ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಹೇಳಿದರು.

ತಾಲೂಕಿನ ಕನಕನಗರ, ಕಲ್ಲಹಳ್ಳಿ, ಕತ್ವಾಡಿಪುರ, ದೇಬೂರು, ಹೆಗ್ಗಡಹಳ್ಳಿ, ಮೊಬ್ಬಳ್ಳಿ, ಹರತಲೆ, ದೇವಿರಮ್ಮನಹಳ್ಳಿ ಗ್ರಾಮಗಳಲ್ಲಿ ಮತಪ್ರಚಾರ ನಡೆಸಿ ಮಾತನಾಡಿದರು. ನನ್ನ ತಂದೆ ಧ್ರುವನಾರಾಯಣ್ ಅವರಿಗೆ 2 ಬಾರಿ ಲೋಕಸಭೆ ಚುನಾವಣೆಯಲ್ಲಿ ಹೆಚ್ಚಿನ ಮತ ನೀಡಿ ಆಶೀರ್ವಾದ ಮಾಡಿದ್ದೀರಿ. ಅವರೂ ಸಹ ನಿಮ್ಮ ನಂಬಿಕೆಗೆ ಕ್ಷೇತ್ರದ ಅಭಿವೃದ್ಧಿಗಾಗಿ ಸಾಕಷ್ಟು ಶ್ರಮಿಸಿದ್ದಾರೆ. ಅವರಿಗೆ ನೀವೆಲ್ಲಾ ಆದರದ ಪ್ರೀತಿ ವಿಶ್ವಾಸ ತೋರಿಸಿದ್ದೀರಿ, ಈ ಚುನಾವಣೆಯಲ್ಲಿ ಅವರು ಮತಯಾಚನೆ ಮಾಡಬೇಕಿತ್ತು. ದುರದೃಷ್ಟವಶಾತ್ ನಾನು ಚುನಾವಣೆಯಲ್ಲಿ ನಿಂತಿದ್ದೇನೆ. ನಾನು ಸಹ ಅವರ ದಾರಿಯಲ್ಲಿಯೇ ಸಾಗಿ ಜನಸೇವೆಯಲ್ಲಿ ತೊಡಗಬೇಕೆಂದು ನಿರ್ಧರಿಸಿದ್ದೇನೆ. ಜೊತೆಗೆ 24 ಗಂಟೆಗಳ ಕಾಲವೂ ಸಹ ಕ್ಷೇತ್ರ ಜನರ ಜೊತೆಗೆ ನಿಕಟ ಸಂಪರ್ಕ ವಿಟ್ಟುಕೊಂಡು ಕೆಲಸ ಮಾಡಲು ಸಿದ್ಧನಿದ್ದೇನೆ. ನೀವು ನನ್ನನ್ನು ಆಶೀರ್ವದಿಸಿ ಗೆಲ್ಲಿಸಿ ಕೊಡಬೇಕೆಂದು ಮನವಿ ಮಾಡಿದರು.

ಮತಪ್ರಚಾರದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಸಿ.ಎಂ. ಶಂಕರ್, ಮುಖಂಡರಾದ ಕನಕನಗರ ಮಹದೇವು, ದೊರೆಸ್ವಾಮಿ ನಾಯಕ, ವಿಶ್ವಕರ್ಮ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ಸಿದ್ದಲಿಂಗಪ್ಪ, ಜಿ.ಆರ್. ಗೋವಿಂದರಾಜು, ನಾಗರಾಜಯ್ಯ, ಸಿದ್ದಯ್ಯ, ಶಿವಪ್ಪದೇವರು, ಯುವ ಕಾಂಗ್ರೆಸ್ ಅಧ್ಯಕ್ಷ ಅಶೋಕ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಪ್ರಹ್ಲಾದ ಜೋಷಿ, ಸಂತೋಷ್ ಅವರನ್ನು ಸಿಎಂ ಮಾಡಲು ವೀರಶೈವರ ಟಾರ್ಗೆಟ್

ಕೆಪಿಸಿಸಿ ಕಾರ್ಯದರ್ಶಿ ವರುಣ ಮಹೇಶ್ ಆರೋಪ

ತಿ.ನರಸೀಪುರ.ಏ.19– ಬಿಜೆಪಿ ಪಕ್ಷದಲ್ಲಿ ಪ್ರಹ್ಲಾದ ಜೋಷಿ ಹಾಗೂ ಸಂತೋಷ್ ಜಿಯವರಿಗೆ ಮುಖ್ಯಮಂತ್ರಿ ಪಟ್ಟ ಕಟ್ಟಲು ನಾಗಪುರದ ನೀಲಿಗಣ್ಣಿನ ಆರ್‌ಎಸ್‌ಎಸ್ ಮುಖಂಡರು ಬಿಜೆಪಿಯಲ್ಲಿರುವ ಲಿಂಗಾಯಿತ ಸಮಾಜದ ಮುಖಂಡರನ್ನು ರಾಜಕೀಯವಾಗಿ ಮುಗಿಸಲು ವ್ಯವಸ್ಥಿತ ಸಂಚು ರೂಪಿಸುತ್ತಿದ್ದಾರೆ ಎಂದು ಕೆಪಿಸಿಸಿ ಕಾರ್ಯದರ್ಶಿ ವರುಣ ಮಹೇಶ್ ಆರೋಪಿಸಿದರು.




ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಕಂಡ ಧೀಮಂತ ನಾಯಕ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಲಿಂಗಾಯತ ಸಮುದಾಯದ ಮಾಜಿ ಸಚಿವ ವಿ.ಸೋಮಣ್ಣರವರನ್ನು ಅಭ್ಯರ್ಥಿಯಾಗಿ ಹಾಕುವ ಮೂಲಕ ವೀರಶೈವ ಸಮುದಾಯವನ್ನು ತುಳಿಯುವ ಹುನ್ನಾರವನ್ನು ಬಿಜೆಪಿ ಪಕ್ಷ ಮಾಡಲೊರಟಿದೆ ಎಂದರು.

ವೀರಶೈವ ಲಿಂಗಾಯಿತ ಸಮುದಾಯದಲ್ಲಿ ಬಿ.ಎಸ್.ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಲಕ್ಷ್ಮಣ್ ಸವದಿಯಂತಹ ಘಟಾನುಘಟಿ ನಾಯಕರಿದ್ದರೂ ಸಹ ಅವರನ್ನು ಅಭ್ಯರ್ಥಿ ಮಾಡದೇ ಸೋಮಣ್ಣರಿಗೆ ಇಷ್ಟವಿಲ್ಲದಿದ್ದರೂ ಬಲವಂತವಾಗಿ ಬಿಜೆಪಿ ಹೈಕಮಾಂಡ್ ಅಭ್ಯರ್ಥಿಯನ್ನಾಗಿ ಮಾಡುವ ಮೂಲಕ ಸಮುದಾಯದ ಸೋಮಣ್ಣರವರನ್ನು ರಾಜಕೀಯವಾಗಿ ತುಳಿಯಲು ವ್ಯವಸ್ಥಿತ ಷಡ್ಯಂತ್ರ ರೂಪಿಸಿದೆ ಎಂದು ಅವರು ಆರೋಪಿಸಿದರು.

ಇದರಿಂದ ವೀರಶೈವ ಸಮಾಜ ಎಚ್ಚೆತ್ತುಕೊಳ್ಳಬೇಕಿದೆ. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಪಕ್ಷವನ್ನು ಸೋಲಿಸುವ ಮೂಲಕ ಲಿಂಗಾಯತ ಸಮುದಾಯವನ್ನು ರಾಜಕೀಯವಾಗಿ ತುಳಿಯಲೊರಟಿರುವರಿಗೆ ತಕ್ಕಪಾಠ ಕಲಿಸುವಂತೆ ವರುಣ ಮಹೇಶ್ ಕರೆ ನೀಡಿದರು.

ನೇಮಕ



ಮೈಸೂರು, ಏ.19– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಉಪಾಧ್ಯಕ್ಷರನ್ನಾಗಿ ಕನಕಗಿರಿ ನಿವಾಸಿ ಎಂ.ಪುಟ್ಟಸ್ವಾಮಿ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ವರುಣ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಬಂಡಾಯ ಅಭ್ಯರ್ಥಿ ಕುಪ್ಪರವಳ್ಳಿ ಬಿ. ಶಿವಣ್ಣ ಅವರು ನಂಜನಗೂಡು ತಾಲೂಕು ಪಂಚಾಯಿತಿ ಕಚೇರಿಯಲ್ಲಿರುವ ಚುನಾವಣಾಧಿಕಾರಿಗೆ ನಾಮಪತ್ರ ಸಲ್ಲಿಸಿದರು.

ಕೆ.ಆರ್.ನಗರದಿಂದ ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ಸಲ್ಲಿಕೆ



ಕೆ.ಆರ್.ನಗರ, ಏ.19– ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಿ.ರವಿಶಂಕರ್ ಅವರು ಮುಖಂಡರು ಮತ್ತು ಕಾರ್ಯಕರ್ತರೊಂದಿಗೆ ಮೆರವಣಿಗೆಯಲ್ಲಿ ತೆರಳಿ ತಾಲೂಕು ಕಚೇರಿಯಲ್ಲಿ ಚುನಾವಣಾಧಿಕಾರಿ ಸುಪ್ರಿಯಾ ಬಣಗಾರ್ ಅವರಿಗೆ ನಾಮಪತ್ರ ಸಲ್ಲಿಸಿದರು.

ಇಂದು ಬೆಳಗ್ಗೆ ಪಟ್ಟಣದ ಶ್ರೀ ತೋಪಮ್ಮನವರ ದೇವಾಲಯದಲ್ಲಿ ಕುಟುಂಬ ಸಮೇತ ಪೂಜೆ ಸಲ್ಲಿಸಿ ನಂತರ ತೆರೆದ ವಾಹನದಲ್ಲಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರೊಂದಿಗೆ ಮೆರವಣಿಗೆಯಲ್ಲಿ ತೆರಳಿ ಡಾ. ಬಿ.ಆರ್.ಅಂಬೇಡ್ಕರ್, ಕೃಷ್ಣರಾಜ ಒಡೆಯರ್, ಡಾ.ಜಗಜೀವನ್‌ರಾಂ ಹಾಗೂ ಮಹಾತ್ಮ ಗಾಂಧೀಜಿರವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಮಂಗಳ ವಾದ್ಯ, ನಗಾರಿ, ಪೂಜಾ ಕುಣಿತ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ತಾಲೂಕು ಕಚೇರಿಯವರೆಗೆ ಮೆರವಣಿಗೆ ನಡೆಸಲಾಯಿತು.

ತೋಪಮ್ಮನವರ ದೇವಾಲಯದ ವತಿಯಿಂದ ತಾಲೂಕು ಕಚೇರಿಯವರೆಗೆ ಮೈಸೂರು–ಹಾಸನ ಮುಖ್ಯ ರಸ್ತೆಯ ಎರಡು ಬದಿಯಲ್ಲೂ ಪಕ್ಷದ ಕಾರ್ಯಕರ್ತರು, ಮುಖಂಡರು ಹಾಗೂ ಡಿ.ರವಿಶಂಕರ್ ಅಭಿಮಾನಿಗಳು ಸೇರಿದಂತೆ ಮಹಿಳೆಯರು ಕಿಕ್ಕಿರಿದು ನೆರೆದಿದ್ದರು. ಮೆರವಣಿಗೆಯುದ್ದಕ್ಕೂ ಯುವಕರು ಕುಣಿದು ಕುಪ್ಪಳಿಸಿ ಕಾಂಗ್ರೆಸ್ ಅಭ್ಯರ್ಥಿಗೆ ಜಯಕಾರ ಕೂಗಿದರಲ್ಲದೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರಿಗೂ ಜಯಕಾರ ಕೂಗಿ ಸಂಭ್ರಮಿಸಿದರು.

ನಾಮಪತ್ರ ಸಲ್ಲಿಸಿದ ನಂತರ ಮಾತನಾಡಿದ ಡಿ.ರವಿಶಂಕರ್, ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಇಂದು ನಾಮಪತ್ರ ಸಲ್ಲಿಸುತ್ತಿರುವುದರಿಂದ ಜಿಲ್ಲಾ ಮತ್ತು ರಾಜ್ಯ ಮಟ್ಟದ ಮುಖಂಡರು ಇಲ್ಲಿಗೆ ಆಗಮಿಸಲು ಸಾಧ್ಯವಾಗಿಲ್ಲ. ಮುಂದೆ ನಡೆಯುವ ಪ್ರಚಾರ ಸಭೆಗಳು ಮತ್ತು ಸಮಾವೇಶಗಳಲ್ಲಿ ಎಲ್ಲಾ ವರ್ಗದ ಮುಖಂಡರು ಆಗಮಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ನಾಮಪತ್ರ ಸಲ್ಲಿಸುವ ವೇಳೆ ನನ್ನ ಕುಟುಂಬದವರು ಸೇರಿದಂತೆ ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಅಪಾರ ಸಂಖ್ಯೆಯಲ್ಲಿ ಆಗಮಿಸಿ ಬೆಂಬಲ ನೀಡಿದ್ದಾರೆ. ಇದಕ್ಕಾಗಿ ಅವರುಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ತಿಳಿಸಿದ ಡಿ.ರವಿಶಂಕರ್, ಈ ಜನ ಬೆಂಬಲದಿಂದ ನನಗೆ ಉತ್ಸಾಹ ಹೆಚ್ಚಾಗಿದ್ದು ಮೇ 10ರಂದು ನಡೆಯುವ ಚುನಾವಣೆಯಲ್ಲಿ ಗೆಲುವು ಸಾಧಿಸಲಿದ್ದೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಡಿ.ರವಿಶಂಕರ್ ಅವರ ತಂದೆ ದೊಡ್ಡಸ್ವಾಮೇಗೌಡ, ತಾಯಿ ವನಜಾಕ್ಷಮ್ಮ, ಪತ್ನಿ ಸುನೀತಾ, ಡಿ.ರವಿಶಂಕರ್ ಸಹೋದರರಾದ ಡಾ.ಡಿ.ರಾಜೀವ್, ಡಿ.ಪ್ರಶಾಂತ್, ಎಂಸಿಡಿಸಿ ಬ್ಯಾಂಕ್ ನಿರ್ದೇಶಕ ಅಮಿತ್ ವಿ.ದೇವರಹಟ್ಟಿ, ತಾಪಂ ಮಾಜಿ ಅಧ್ಯಕ್ಷ ಹಾಡ್ಯ ಮಹದೇವಸ್ವಾಮಿ, ನಗರಾಧ್ಯಕ್ಷ ಎಂ.ಜೆ.ರಮೇಶ್, ಅಲ್ಪಸಂಖ್ಯಾತರ ವಿಭಾಗದ ಜಿಲ್ಲಾಧ್ಯಕ್ಷ ಜಾವಿದ್ ಪಾಷ, ಪುರಸಭಾ ಸದಸ್ಯರಾದ ಕೆ.ಜಿ.ಸುಬ್ರಮಣ್ಯ, ಶಿವುನಾಯಕ್, ಶಂಕರ್‌ಸ್ವಾಮಿ, ಕೆ.ಸಿ.ಹರೀಶ್, ಹೆಚ್. ಹೆಚ್. ನಾಗೇಂದ್ರ, ಎಂ.ಎ.ನಾಗೇಂದ್ರ ಸೇರಿದಂತೆ ಇತರರು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಪ್ರವೀಣ (ಕ): ಬೆ.10.30ಕ್ಕೆ, ಗುರುದೇವ್ ಹೊಯ್ಸಳ (ಕ): ಮ.1.05ಕ್ಕೆ, ದಸರಾ (ತೆ): ಮ.3.45ಕ್ಕೆ, ರಾವಣಾಸುರ (ತೆ): ಸಂ.6.55ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 2	ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಬೆ.11ಕ್ಕೆ, ಮ.1.05ಕ್ಕೆ, ಮ.3.10ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.5.10ಕ್ಕೆ, ರಾ.7.30ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ರಾಮಾಚಾರಿ 2.0 (ಕ): ಬೆ.10.45ಕ್ಕೆ, ಆಗಸ್ಟ್ 16 1947(ತ): ಮ.1.30ಕ್ಕೆ, ಪೆಂಟಗನ್ (ಕ): ಸಂ.4.20ಕ್ಕೆ, ಗುಮ್ರಾಹ್ (ಹಿಂ): ರಾ.7.30ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಗುರುದೇವ್ ಹೊಯ್ಸಳ (ಕ): ಬೆ.10.50ಕ್ಕೆ, ರಾ.7.40ಕ್ಕೆ, ರಾ.10.15ಕ್ಕೆ, ವೀರಂ (ಕ): ಮ.1.30ಕ್ಕೆ, ಸಂ.4.35ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗುರುದೇವ್ ಹೊಯ್ಸಳ (ಕ): ಬೆ.10.20ಕ್ಕೆ, ವೀರಂ (ಕ): ಮ.1.05ಕ್ಕೆ, ರಾ.7.15ಕ್ಕೆ, ರಾವಣಾಸುರ (ತೆ): ಸಂ.4.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಬೆ.10.25ಕ್ಕೆ, ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾಮಾಚಾರಿ 2.0(ಕ): ಮ.2.55ಕ್ಕೆ, ದಸರಾ (ತೆ): ರಾ.10ಕ್ಕೆ.
ಸ್ಕ್ರೀನ್ 3	ವೀರಂ (ಕ): ಬೆ.10.10ಕ್ಕೆ, ರಾವಣಾಸುರ (ತೆ): ಮ.1.25ಕ್ಕೆ, ಗುರುದೇವ ಹೊಯ್ಸಳ (ಕ): ಸಂ.4.20ಕ್ಕೆ, ರಾ.9.50ಕ್ಕೆ, ನಮ್ ನಾಣಿ ಮದುವೆ ಪ್ರಸಂಗ (ಕ): ರಾ.7.05ಕ್ಕೆ.
ಸ್ಕ್ರೀನ್ 4	ಪ್ರವೀಣ (ಕ): ಬೆ.11.10ಕ್ಕೆ, ಗುರುದೇವ ಹೊಯ್ಸಳ (ಕ): ಮ.1.45ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.4.30ಕ್ಕೆ, ರಾ.10.20ಕ್ಕೆ, ಪೆಂಟಗನ್ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಹೊಯ್ಸಳ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರುದ್ರಂ (ತ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಓನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪ್ರದರ್ಶನ ಇರುವುದಿಲ್ಲ	
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಉಂಡೆನಾಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ವೀರಂ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ವಿದುತಲೈ ಪಾರ್ಟ್–1 (ತ)	4 ಪ್ರದರ್ಶನಗಳು
ಸಂಗಂ	
ಶಂಕುಂತಲಂ (ತೆ)	4 ಪ್ರದರ್ಶನಗಳು
ಲಿಡೋ	
ಉಂಡೆನಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೀರಂ (ಕ)	4 ಪ್ರದರ್ಶನಗಳು
ಪ್ರಭಾ	
ಮಾರಿಗುಡ್ಡದ ಗಡ್ಡಧಾರಿಗಳು (ಕ)	4 ಪ್ರದರ್ಶನಗಳು

ನಾಳೆ ಶ್ರೀ ದೊಡ್ಡಮ್ಮ ತಾಯಿ ರಥೋತ್ಸವ



ರಾವಂದೂರು, ಏ.19– ಶಕ್ತಿ ದೇವತೆಗಳಲ್ಲಿ ಒಂದಾದ ಇಲ್ಲಿನ ಗ್ರಾಮ ದೇವತೆ ಶ್ರೀ ದೊಡ್ಡಮ್ಮ ತಾಯಿ ರಥೋತ್ಸವ ಏ.21 ಮತ್ತು ಉಯ್ಯಾಲೋತ್ಸವ 22ರಂದು ಜರುಗಲಿದೆ. ಪ್ರತಿ ವರ್ಷವು ಯುಗಾದಿ ಹಬ್ಬದ ಮಾರನೆಯ ದಿನ ಗ್ರಾಮದ 7 ಕೋಮಿನ ಯಜಮಾನರು ಹಾಗೂ ಗ್ರಾಮಸ್ಥರು ಸೇರಿ ಜಾತ್ರೆಯ ದಿನವನ್ನು ನಿಗದಿಪಡಿಸಿ ಆಚರಿಸುವುದು ಇಲ್ಲಿನ ಪ್ರತಿ ವರ್ಷದ ವಾಡಿಕೆಯಾಗಿದೆ.

12 ದಿನ ಆಚರಿಸುವ ಹಬ್ಬ: ಗ್ರಾಮದ ಜನತೆಯಲ್ಲಿನ ಸಹಕಾರದಿಂದ ಪ್ರತಿ ಸಮುದಾಯವು ಒಂದೊಂದು ಕೆಲಸ ಹಂಚಿಕೊಂಡು ಈ ಜಾತ್ರಾ ಮಹೋತ್ಸವದಲ್ಲಿ ಸಹೋದರತೆಯಿಂದ ಭಾಗವಹಿಸಿ ತುಂಬಾ ವಿಜೃಂಭಣೆಯಿಂದ ಆಚರಿಸುತ್ತಾರೆ. ಈ ಜಾತ್ರಾ ಮಹೋತ್ಸವು ಗ್ರಾಮೀಣ ಜನತೆಯ ಸೋಗಡಿನ ಕುಣಿತದಿಂದ ಪ್ರಾರಂಭ ಮಾಡುವ ಮೂಲಕ ಸಗಣಿ ಓಕಳಿ, ನೀರಿನ ಒಕ್ಕಳಿ ಹಾಗೂ ಬಸವೇಶ್ವರ ದೇವರುಗಳ ಉತ್ಸವ ಹೀಗೆ ಪ್ರತಿದಿನ 12 ದಿನದವರೆಗೂ ಆಚರಿಸಿ ಕೊನೆಯ ದಿನ ರಥೋತ್ಸವ ನಡೆಯುವುದು ಇಲ್ಲಿನ ದೇವರ ವಿಶಿಷ್ಟತೆಯಾಗಿದೆ.

ಕಾವೇರಿ ನದಿಯಲ್ಲಿ ಮಡಿ: ಜಾತ್ರೆ ನಡೆಯುವ 2 ದಿನ ಮುಂದೆ ಗ್ರಾಮ ದೇವತೆಯ ವಿಗ್ರಹವನ್ನು ಹತ್ತಿರದ ಚುಂಚನಕಟ್ಟೆ ಕಾವೇರಿ ಹೊಳೆಯಲ್ಲಿ ಮಡಿ ಮಾಡಿ ಹೋಮ ಹವನಗಳಿಂದ ಪೂಜೆ ಕೈಗೊಳ್ಳುವ ಮೂಲಕ ದಾರಿ ಉದ್ದಕ್ಕೂ ಪೂಜಿಸಿ ಗ್ರಾಮಕ್ಕೆ ಮೆರವಣಿಗೆ ಮಾಡುತ್ತಾ ದೇವಾಲಯದಲ್ಲಿ ದೇವರ ವಿಗ್ರಹವನ್ನು ಇಟ್ಟು ಮಾರನೇ ದಿನ ಗ್ರಾಮದ ಸಮೀಪವಿರುವ ಎಸ್.ಕೊಪ್ಪಲು ತೋಟ ಒಂದರಲ್ಲಿ ಪೂಜಿಸಿಕೊಂಡು ಮೆರವಣಿಗೆಯಿಂದ ತಂದು ರಥದ ಮೇಲೆ ಕುಳ್ಳಿರಿಸಿ ರಥೋತ್ಸವವನ್ನು ಪ್ರಾರಂಭಿಸುವುದು ಈ ಜಾತ್ರೆಯ ವಿಶೇಷವಾಗಿದೆ.

ಮಾರನೇ ದಿನ ಉಯ್ಯಾಲೋತ್ಸವ ಸಹ ನಡೆಯಲಿದೆ.

ಬೈಕ್‌ಗೆ ಗೂಡ್ಸ್ ವಾಹನ ಡಿಕ್ಕಿ: ಇಬ್ಬರು ಸವಾರರ ಸಾವು

ಹೆಚ್.ಡಿ.ಕೋಟೆ, ಏ.19– ಗೂಡ್ಸ್ ವಾಹನವೊಂದು ಎದುರಿಗೆ ಬರುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸವಾರರು ಮೃತಪಟ್ಟಿರುವ ಘಟನೆ ಬುಧವಾರ ತಾಲೂಕಿನ ಬೊಪ್ಪನಹಳ್ಳಿ ಸಮೀಪ ನಡೆದಿದೆ.

ತಾಲೂಕಿನ ಚಿಕ್ಕೂರು ಗ್ರಾಮದ ಮಣಿ (17), ಅಭಿ (20) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಕೆಲಸದ ನಿಮಿತ್ತ ಇವರಿಬ್ಬರು ಒಂದೇ ಬೈಕ್‌ನಲ್ಲಿ ಹ್ಯಾಂಡ್ ಪೋಸ್ಟ್‌ಗೆ ಬಂದು ಕೆಲಸ ಮುಗಿಸಿ ಮಧ್ಯಾಹ್ನ ಎರಡು ಗಂಟೆ ಸಮಯದಲ್ಲಿ ಸ್ವಗ್ರಾಮಕ್ಕೆ ತೆರಳುತ್ತಿದ್ದಾಗ ಮೈಸೂರು ಮುಖ್ಯ ರಸ್ತೆಯ ಹ್ಯಾಂಡ್ ಪೋಸ್ಟ್ ಮತ್ತು ಬೊಪ್ಪನಹಳ್ಳಿ ಗ್ರಾಮದ ಮಧ್ಯೆ ಮೈಸೂರು ಕಡೆಯಿಂದ ಬರುತ್ತಿದ್ದ ಗೂಡ್ಸ್ ವಾಹನ ಬೈಕಿಗೆ ಡಿಕ್ಕಿ ಹೊಡೆದಿದೆ.

ಈ ಅಪಘಾತದಲ್ಲಿ ಬೈಕ್‌ನಲ್ಲಿದ್ದ ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂಬಂಧ ಹೆಚ್.ಡಿ. ಕೋಟೆ ಠಾಣೆಯಲ್ಲಿ ದೂರು ದಾಖಲಾಗಿದೆ.

ಬ್ರಾಹ್ಮಣ ಒಕ್ಕೂಟ, ವಿವಿಧ ವಿಪ್ರ ಸಂಘಟನೆಗಳಿಂದ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀವತ್ಸಗೆ ಬೆಂಬಲ

ಅವರ ಗೆಲುವಿಗೆ ಶ್ರಮಿಸಲು ಮನವಿ



ಮೈಸೂರು, ಏ.19(ಎಸ್‌ಪಿಎನ್)–ಮೈಸೂರು ಬ್ರಾಹ್ಮಣ ಸಂಘ–ಸಂಸ್ಥೆಗಳ ಒಕ್ಕೂಟ ಹಾಗೂ ಇತರೆ ವಿಪ್ರ ಸಂಘಟನೆಗಳು ಬುಧವಾರ ಸಭೆ ಸೇರಿ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಅವರಿಗೆ ಬೆಂಬಲ ವ್ಯಕ್ತಪಡಿಸಿದರು.

ಮೈಸೂರು ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದಲ್ಲಿ ಮೈಸೂರು ಬ್ರಾಹ್ಮಣ ಸಂಘ–ಸಂಸ್ಥೆಗಳ ಒಕ್ಕೂಟದ ವತಿಯಿಂದ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿತ್ತು.

ನಂತರ ಡಿ.ಟಿ.ಪ್ರಕಾಶ್ ಮಾತನಾಡಿ, ಬಿಜೆಪಿಯಲ್ಲಿ ಸಾಮಾನ್ಯ ಕಾರ್ಯಕರ್ತರಾಗಿ ಗುರುತಿಸಿಕೊಂಡಿದ್ದ ಶ್ರೀವತ್ಸ ಅವರಿಗೆ ಬಿಜೆಪಿ ಟಿಕೆಟ್ ಘೋಷಿಸಿದೆ. ಅವರನ್ನು ಗೆಲ್ಲಿಸಿಕೊಂಡು ಬರುವ ಜವಾಬ್ದಾರಿ ನಮ್ಮ ಮೇಲಿದೆ. ಕೃಷ್ಣರಾಜ ಕ್ಷೇತ್ರ ಪ್ರಜ್ಞಾವಂತರಿರುವ ಕ್ಷೇತ್ರ. ಅದರಲ್ಲೂ ಬ್ರಾಹ್ಮಣ ಮತದಾರರು ಸುಮಾರು 70ರಿಂದ 80 ಸಾವಿರ ಸಂಖ್ಯೆಯಲ್ಲಿದ್ದಾರೆ. ಈ ಮತದಾರರು ನೂರಕ್ಕೆ ನೂರಷ್ಟು ಬೂತ್‌ಗಳಿಗೆ ಕರೆತಂದು ಮತದಾನ ಮಾಡಿಸುವುದು ನಿಮ್ಮ–ನಿಮ್ಮೆಲ್ಲರ ಕರ್ತವ್ಯ ಎಂದರು.

ಈ ಬಾರಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಗೆಲುವು ನಾವು–ನೀವು ಭಾವಿಸಿದಷ್ಟು ಸುಲಭವಲ್ಲ. ಹಾಗಾಗಿ ನಮ್ಮಲ್ಲಿರುವ ಸಣ್ಣಪುಟ್ಟ ಭಿನ್ನಾಪ್ರಾಯಗಳನ್ನು ಮರೆತು ಒಗ್ಗಟ್ಟು ಪ್ರದರ್ಶಿಸಿ, ಶ್ರೀವತ್ಸ ಅವರನ್ನು ಗೆಲ್ಲಿಸಬೇಕು. ಏಕೆಂದರೆ, ಒಮ್ಮೆ ಶ್ರೀವತ್ಸ ಅವರು ಗೆಲುವು ಸಾಧಿಸಿದರೆ, ಜನಸಾಮಾನ್ಯರಿಗೆ ಒಳ್ಳೆಯದಾಗುತ್ತದೆ. ಅದರಲ್ಲೂ ಬ್ರಾಹ್ಮಣ ಸಮುದಾಯಕ್ಕೆ ಒಳ್ಳೆಯದಾಗುತ್ತದೆ. ಅಲ್ಲದೆ, ಬೇರೆ ಬೇರೆ ಸಮುದಾಯಗಳು ರಾಜಕೀಯ ಕಾರಣಗಳಿಗಾಗಿ ತಮ್ಮಲ್ಲಿ ಎಂತಹ ಭಿನ್ನಾಭಿಪ್ರಾಯವಿದ್ದರೂ ಅದನ್ನು ಮರೆತು ತಮ್ಮತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಕುರಿತು ವಿವರವಾಗಿ ಸಭೆಗೆ ತಿಳಿಸಿದರು.

ಕಳೆದ ಐದು ವರ್ಷಗಳಿಂದ ಆಡಳಿತ ಪಕ್ಷದ ವಿರೋಧಿ ಅಲೆ, ಅದರಲ್ಲೂ ಸ್ಥಳೀಯ ಶಾಸಕರ ಆಡಳಿತ ವೈಖರಿ ಕುರಿತು ಮಾಧ್ಯಮಗಳಲ್ಲಿ ಪ್ರಕಟವಾಗಿವೆ. ಇವೆಲ್ಲವನ್ನೂ ಬದಿಗೊತ್ತಿ ನಾವು ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಅವರನ್ನು ಗೆಲ್ಲಿಸಬೇಕು ಎಂದು ವಿವಿಧ ಸಂಘ ಟನೆಗಳ ಪ್ರಮುಖರು ಮನವಿ ಮಾಡಿದರು.

ಮಹಾನಗರ ಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್ ಮಾತನಾಡಿ, ಕೆ.ಆರ್. ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಆಯ್ಕೆಯಾಗಿರುವ ಶ್ರೀವತ್ಸ ಗೆಲುವು ನಿಶ್ಚಿತ. ಅವರ ಆಯ್ಕೆ ಯಾರೂ ನಿರೀಕ್ಷೆ ಮಾಡಿರಲಿಲ್ಲ. ಶ್ರೀವತ್ಸ ಅವರು, ಬಿಜೆಪಿಯಲ್ಲಿ ಕಳೆದ 30 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅಂತಹ ಪ್ರಾಮಾಣಿಕ ಕಾರ್ಯಕರ್ತರನ್ನು ಗುರುತಿಸಿ ಅಭ್ಯರ್ಥಿಯಾಗಿ ಆಯ್ಕೆ ಮಾಡಿರುವುದು ಸಂತೋಷದ ಸಂಗತಿ ಎಂದರು.

ಬಿಜೆಪಿ ಅಭ್ಯರ್ಥಿ ಶ್ರೀವತ್ಸ ಅವರು, ಬಿಜೆಪಿ ಕಾರ್ಯಕರ್ತರಿಗೆ ಚಿರಪರಿಚಿತರು, ಆದರೆ, ಜನಸಾಮಾನ್ಯರಿಗೆ ಪರಿಚಯವಿಲ್ಲ. ಆ ಕೆಲಸವನ್ನು ಇಲ್ಲಿ ಸೇರಿರುವ ಪ್ರತಿಯೊಬ್ಬ ವಿಪ್ರ ಮುಖಂಡರು ಶ್ರೀವತ್ಸ ಅವರ ಪರ ಮತಯಾಚನೆಯ ಕರಪತ್ರ ಹಿಡಿದು ಎಲ್ಲಾ ಸಮುದಾಯಗಳ ಮನೆಮನೆಗೆ ತಲುಪಿಸಬೇಕು ಎಂದು ಕಿವಿಮಾತು ಹೇಳಿದರು.

ಈ ವೇಳೆ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ನಿಗಮದ ಸದಸ್ಯರಾದ ಸಿ.ಡಿ.ಗೋಪಿನಾಥ್, ಎಂ.ಆರ್.ಬಾಲಕೃಷ್ಣ, ಮೇಲುಕೋಟೆಯ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಗ್ರಾಮಾಂತರ ಅಧ್ಯಕ್ಷ ಗೋಪಾಲರಾವ್, ವಿಪ್ರ ಮಹಿಳಾ ವೇದಿಕೆ ಅಧ್ಯಕ್ಷೆ ಡಾ.ಲಕ್ಷ್ಮಿ, ಮುಖಂಡರಾದ ಶ್ರೀನಿವಾಸ ಭಾಷ್ಯಂ, ನಂ.ಶ್ರೀಕಂಠಕುಮಾರ್, ಮಹೇಶ್ ಕಾಮತ್, ವಿವೇಕಾನಂದ ಬ್ರಾಹ್ಮಣ ಸಂಘ, ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಅಜಯ್‌ಶಾಸ್ತ್ರಿ, ಶಿವಳ್ಳಿ ತುಳುಬ್ರಾಹ್ಮಣ ಸಂಘದ ಅಧ್ಯಕ್ಷ ರವಿಶಾಸ್ತ್ರಿ, ಅರ್ಚಕರ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ ಹಾಗೂ ವಿವಿಧ ಸಂಘಟನೆಗಳು ಹಾಜರಿದ್ದವು.

ಇದೇ ವೇಳೆ ಹಾಜರಿದ್ದ ವಿಪ್ರ ಸಮುದಾಯ ವಿವಿಧ ಮುಖಂಡರು ಅಭ್ಯರ್ಥಿಯ ಚುನಾವಣಾ ವೆಚ್ಚಕ್ಕೆ ಧನ ಸಹಾಯ ಮಾಡುವುದಾಗಿ ಘೋಷಿಸಿದರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ ಎಚ್.ಡಿ.ಪುಟ್ಟಸ್ವಾಮಿ ರವರ ಧರ್ಮಪತ್ನಿ ಶ್ರೀಮತಿ ಪುಟ್ಟಸಿದ್ದಮ್ಮ ರವರು, ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಒಪ್ಪಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ, ಬ್ಯಾಂಕ್/ ಹಣಕಾಸು ಸಂಸ್ಥೆ ಒಳಗೊಂಡಂತೆ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ, ತಕಾರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ನಗರ, ಚಾಮರಾಜ ಮೊಹಲ್ಲಾ, ದಟ್ಟಗಳ್ಳಿ, ಇ ಮತ್ತು ಎಫ್ ಬ್ಲಾಕ್‌ನಲ್ಲಿರುವ ಸ್ವತ್ತಿನ ಸಂಖ್ಯೆ 1033, ಹಾಲಿ ಎಂಸಿಸಿ ವಾರ್ಡ್ ನಂ 58, ಪಿಐಡಿ ನಂ: 51071 ಮತ್ತು ಸ್ವತ್ತಿನ ಸಂಖ್ಯೆ: 18–5–691–783, ಇದರಲ್ಲಿರತಕ್ಕ ಕಟ್ಟಡ, ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 9.00 ಮೀಟರ್‌ಗಳು ಮತ್ತು ಉತ್ತರ ದಕ್ಷಿಣ 6.00 ಮೀಟರ್‌ಗಳು. ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ : ಮುಡಾ ಸ್ವತ್ತು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಸ್ವತ್ತಿನ ನಂ 1034 ಮತ್ತು ದಕ್ಷಿಣಕ್ಕೆ: ಸ್ವತ್ತಿನ ನಂ 1031.

ಸಹಿ/–ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫಾರ್ಮ್,
ನಂ.1458/ಎ, ನಾರಾಯಣಶಾಸ್ತ್ರಿ ರಸ್ತೆ
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641

ಜೆಡಿಎಸ್ 59 ಅಭ್ಯರ್ಥಿಗಳ ಮೂರನೇ ಪಟ್ಟಿ ಪ್ರಕಟ

ಬೆಂಗಳೂರು, ಏ.19(ಕೆಎಂಶಿ)–ರಾಜ್ಯ ವಿಧಾನಸಭಾ ಚುನಾವಣೆಗೆ ಜೆಡಿಎಸ್ 59 ಅಭ್ಯರ್ಥಿಗಳ 3ನೇ ಪಟ್ಟಿ ಬಿಡುಗಡೆ ಮಾಡಿದೆ 59 ಅಭ್ಯರ್ಥಿಗಳ ಜೊತೆಗೆ ನಂಜನಗೂಡಿನ ಕಾಂಗ್ರೆಸ್‌ನ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಸೇರಿದಂತೆ 7 ಕ್ಷೇತ್ರಗಳಲ್ಲಿ ಸಿಪಿಐ(ಎಂ), ಆರ್‌ಪಿಐ ಅಭ್ಯರ್ಥಿಗಳಿಗೆ ಜೆಡಿಎಸ್ ಬಾಹ್ಯ ಬೆಂಬಲ ವ್ಯಕ್ತಪಡಿಸಿದೆ. ಮೊದಲ ಪಟ್ಟಿಯಲ್ಲಿ ಹೆಸರಿಸಿದ್ದ 12 ಕ್ಷೇತ್ರಗಳಿಗೆ ಕೆಲವು ಅಭ್ಯರ್ಥಿಗಳನ್ನು ಬದಲಾವಣೆ ಮಾಡಿ, ಕಾಂಗ್ರೆಸ್ ಹಾಗೂ ಬಿಜೆಪಿಯಿಂದ ಬಂದ ಮುಖಂಡರಿಗೆ ಈ ಕ್ಷೇತ್ರಗಳಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಮಂಡ್ಯದಲ್ಲಿ ಹಾಲಿ ಶಾಸಕ ಎಂ.ಶ್ರೀನಿವಾಸ ಬದಲು, ಬಿ.ಆರ್.ರಾಮಚಂದ್ರ ಅವರಿಗೆ ಟಿಕೆಟ್ ನೀಡಲಾಗಿದೆ. ಬಳ್ಳಾರಿ ನಗರದಿಂದ ಅನಿಲ್‌ಲಾಡ್, ಮೂಡಿಗೆರೆಯಿಂದ ಬಿ.ಬಿ.ಲಿಂಗಯ್ಯ ಬದಲು ಎಂ.ಪಿ.ಕುಮಾರಸ್ವಾಮಿ, ಚೆನ್ನಗಿರಿ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ದಿವಂಗತ ಜೆ.ಎಚ್.ಪಟೇಲ್ ಪುತ್ರ ತೇಜಸ್ವಿ ಪಟೇಲ್‌ಗೆ ಟಿಕೆಟ್ ನೀಡಲಾಗಿದೆ.

ಜನಸಂಖ್ಯೆಯಲ್ಲಿ ಚೀನಾವನ್ನೇ ಹಿಂದಿಕ್ಕಿದ ಭಾರತ

ವಾಷಿಂಗ್ಟನ್: ವಿಶ್ವಸಂಸ್ಥೆ ಬಿಡುಗಡೆ ಮಾಡಿರುವ ಅಂಕಿ ಅಂಶಗಳ ಪ್ರಕಾರ, ಭಾರತ ವಿಶ್ವದಲ್ಲೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರವಾಗಿದೆ. ಆ ಮೂಲಕ ಜನಸಂಖ್ಯೆಯಲ್ಲಿ ಚೀನಾವನ್ನೇ ಹಿಂದಿಕ್ಕಿದೆ. ಭಾರತ 142.86 ಕೋಟಿ ಜನಸಂಖ್ಯೆ ಹೊಂದಿದ್ದರೆ, ಚೀನಾ 142.57 ಕೋಟಿ ಜನಸಂಖ್ಯೆ ಹೊಂದಿದೆ. ಭಾರತದ ಜನಸಂಖ್ಯೆ ಸುಮಾರು 1/4ರಷ್ಟು ಜನರು 14 ವರ್ಷದ ಒಳಗಿನವರಾಗಿದ್ದಾರೆ. ಜನಸಂಖ್ಯೆಯ ಶೇ.68ರಷ್ಟು ಜನರು 15ರಿಂದ 64 ವಯಸ್ಸಿನವರಾಗಿದ್ದರೆ, ಶೇ.7ರಷ್ಟು ಜನರು 65 ವರ್ಷಕ್ಕಿಂತ ಮೇಲ್ಪಟ್ಟವರಾಗಿದ್ದಾರೆ ಎಂದು ವರದಿ ಮಾಡಿದೆ. ಚೀನಾದಲ್ಲಿ ವಯಸ್ಕರ ಪ್ರಮಾಣ ಹೆಚ್ಚಿದ್ದರೆ, ಭಾರತ ಯುವ ಶಕ್ತಿಯಿಂದ ಕೂಡಿದೆ. ಅಧ್ಯಯನದ ಪ್ರಕಾರ ಇನ್ನೂ 3 ದಶಕಗಳ ಕಾಲ ಭಾರತದ ಜನಸಂಖ್ಯೆ ಏರಿಕೆಯಾಗಲಿದ್ದು, ಜನಸಂಖ್ಯೆ 165 ಕೋಟಿ ತಲುಪಿದ ನಂತರ ಜನಸಂಖ್ಯೆಯಲ್ಲಿ ಇಳಿಕೆಯಾಗುವ ಸಾಧ್ಯತೆಯಿದೆ ಎಂದು ಹೇಳಿದೆ.

ಐದನೇ ವರ್ಷದ ಸವಿನೆನಪು



ಮನೋಹರ್ H.R

ನೀವು ನಮ್ಮನ್ನಗಲಿ 5 ವರ್ಷ ಕಳೆದರೂ
ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಧರ್ಮಪತ್ನಿ, ಅನಿತಾ.B ಮತ್ತು ಮಕ್ಕಳು ಶಶಾಂಕ್.M, ಶರಣ್.M, ಲಾರಿ ಬೋರಲಿಂಗೇಗೌಡರು ಹಾಗೂ ಕುಟುಂಬವರ್ಗ, ಲೋಕನಾಯಕ ನಗರ.

